ಮನುಷ್ಯ ಜಾತಿ ತಾನೊಂದೆ ವಲಂ

ಗಿಡಮೂಲಿಕೆಗಳು



ಡಾ. ಟಿ.ಎಲ್. ದೇವರಾಜ್

ಗಿಡಮೂಲಿಕೆಗಳು

ಡಾ। ಟಿ. ಎಲ್. ದೇವರಾಜ್

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

GIDAMOOLIKEGALU : A book on Medicinal Plants in Kannada
by: **Dr T.L. Devaraj** Published by : **Kannada Sahitya Parishattu,**
Pampa Mahakavi Road, Chamarajapet, Bangalore - 560018
Pages : 106 + vi Price : Rs.40=00 : **2014**

ಮೊದಲನೇ ಮುದ್ರಣ : ೧೯೯೪
ಎರಡನೇ ಮುದ್ರಣ : ೨೦೦೦
ಮೂರನೇ ಮುದ್ರಣ : ೨೦೧೩
ನಾಲ್ಕನೇ ಮುದ್ರಣ : ೨೦೧೪
ಪ್ರತಿಗಳು : ೧೦೦೦
ಬೆಲೆ : ನಲವತ್ತು ರೂಪಾಯಿಗಳು

ಮುಖಪುಟ ವಿನ್ಯಾಸ : ಫ್ಲವರ್ ಗ್ರಾಫಿಕ್

ಮುದ್ರಣ : ಬಿ.ಎಂ.ಶ್ರೀ ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ ಪುಸ್ತಕಗಳನ್ನು ಸಹೃದಯರು ಮೆಚ್ಚಿ ಸ್ವೀಕರಿಸಲು ಯೋಗ್ಯವಾಗುವಂತೆ ಆಕರ್ಷಕ ವಿನ್ಯಾಸಗಳಲ್ಲಿ ಸಿದ್ಧಪಡಿಸುವ ಆಶಯ ನಮ್ಮದು.

ಸಮಗ್ರ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಭಾಜನವಾಗಿರುವ, ೧೯೧೫ರಲ್ಲಿ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತು, ಶತಮಾನೋತ್ಸವದ ಹೊಸ್ತಿಲಲ್ಲಿದೆ. ಕಳೆದ ೯೯ ವರ್ಷಗಳಿಂದಲೂ ಕನ್ನಡ ಗ್ರಂಥಗಳ ಪ್ರಕಟಣೆಯನ್ನು ನಿರಂತರವಾಗಿ ಮಾಡುತ್ತಾ ಬಂದಿರುವ ಪರಿಷತ್ತು ಸುಮಾರು ಒಂದು ಸಾವಿರದ ನಾಲ್ಕುನೂರಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿರುತ್ತದೆ. ಸರಿಸುಮಾರು ಒಂದು ಶತಮಾನದಷ್ಟು ಕಾಲಾವಧಿಯ ನಿರಂತರತೆ ಹಾಗೂ ಕೃತಿಗಳ ಮೌಲಿಕತೆಯ ದೃಷ್ಟಿಯಿಂದ ಇದೊಂದು ಅಪೂರ್ವ ದಾಖಲೆಯಾಗಿದೆ. ಕನ್ನಡ ಪ್ರಕಟಣಾ ಚರಿತ್ರೆಯಲ್ಲಂತೂ ಅನನ್ಯವೇ ಸರಿ.

ಸಾಮಾನ್ಯವಾಗಿ ದೊರೆಯುವ ಗಿಡಮೂಲಿಕೆಗಳ ಔಷಧೀಯ ಗುಣಗಳನ್ನು ವಿವರಿಸುವ ಪುಸ್ತಕ ಇದು.

ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿದ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿವರ್ಗಕ್ಕೆ ಹಾಗೂ ಈ ಕಾರ್ಯದಲ್ಲಿ ಸಹಕಾರ ನೀಡಿದ ಪ್ರಕಟಣಾ ಸಮಿತಿಯ ಎಲ್ಲಾ ಸದಸ್ಯರಿಗೆ ನನ್ನ ಕೃತಜ್ಞತೆಗಳು.

ಪುಂಡಲೀಕ ಹಾಲಂಬಿ
ಅಧ್ಯಕ್ಷರು

ಲೇಖಕರ ಮಾತು

ಕನ್ನಡ ಸಾಹಿತ್ಯ ಪರಿಷತ್ತು ೧೯೯೪ರಲ್ಲಿ ನಾನು ಬರೆದ ಗಿಡಮೂಲಿಕೆಗಳು ಎಂಬ ಪುಸ್ತಕವನ್ನು ಪ್ರಕಟಿಸಿತು.

ಆಯುರ್ವೇದವನ್ನು ಕುರಿತ ಪುಸ್ತಕಗಳನ್ನು ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಿರುವುದರಿಂದ ಜನಸಾಮಾನ್ಯರಿಗೆ ಆಯುರ್ವೇದದ ಬಗ್ಗೆ ಅರಿವು ಉಂಟುಮಾಡುವ ಪ್ರಾಮಾಣಿಕ ಪ್ರಯತ್ನವಾಗಿದೆ. ಈ ಪುಸ್ತಕವು ಪ್ರಕಟವಾದ ಕೆಲವೇ ತಿಂಗಳುಗಳಲ್ಲಿ ಪೂರ್ಣ ಪ್ರತಿಗಳು ಮಾರಾಟವಾಗಿರುವುದು, ಈ ಪುಸ್ತಕ ಅವಶ್ಯಕತೆಯನ್ನು ತೋರಿಸುತ್ತದೆ. ಇದನ್ನು ಅರಿತ ಪರಿಷತ್ತಿನ ಪದಾಧಿಕಾರಿಗಳು ಈ ಪುಸ್ತಕದ ಮರುಮುದ್ರಣವನ್ನು ಮಾಡುತ್ತಿರುವುದು ಸಂತೋಷದ ವಿಚಾರ.

ಆಯುರ್ವೇದ, ಬೇರೆ ಬೇರೆ ದೇಶಗಳಲ್ಲಿ ಅಮೇರಿಕಾ, ಜಪಾನ್, ಜರ್ಮನಿ, ರಷ್ಯಾ ಮತ್ತು ಇನ್ನೂ ಹಲವಾರು ದೇಶಗಳಲ್ಲಿ ಪ್ರಖ್ಯಾತಿಗೊಳ್ಳುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಆಯುರ್ವೇದವನ್ನು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಇನ್ನೂ ಹೆಚ್ಚಾಗಿ ಹಣ ಬಿಡುಗಡೆ ಮಾಡಿ ಆಯುರ್ವೇದ ಪುರೋಭಿವೃದ್ಧಿಗಾಗಿ ಶ್ರಮಿಸುತ್ತಾರೆಂದು ನಂಬಿದ್ದೇನೆ. ಈ ಪುಸ್ತಕದ ಎರಡನೆಯ ಆವೃತ್ತಿ ಪ್ರಕಟಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿಗೆ ನಾನು ಋಣಿಯಾಗಿದ್ದೇನೆ. ಜನಸಾಮಾನ್ಯರು ಈ ಪುಸ್ತಕವನ್ನು ಓದಿ ತಮ್ಮ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುತ್ತಾರೆಂದು ನಂಬಿರುತ್ತೇನೆ.

ಈ ಕೃತಿಯ ಪ್ರಕಟಣೆಗೆ ಒಪ್ಪಿಗೆ ನೀಡಿದ ಪ್ರಕಟಣಾ ಸಮಿತಿಗೂ ಪರಿಷತ್ತಿನ ಅಧ್ಯಕ್ಷರು, ಗೌರವ ಕಾರ್ಯದರ್ಶಿ ಅವರಿಗೂ ಹಾಗೂ ಕೋಶಾಧ್ಯಕ್ಷರಿಗೂ, ಅಂದವಾಗಿ ಮುದ್ರಿಸಿದ ಬಿ. ಎಂ. ಶ್ರೀ. ಅಚ್ಚುಕೂಟದ ಸಿಬ್ಬಂದಿಗಳಿಗೂ ನನ್ನ ಧನ್ಯವಾದಗಳು.

ಬೆಂಗಳೂರು-೬೧

ಪ್ರೊ|| ಟಿ. ಎಲ್. ದೇವರಾಜ್

ಅಮೃತ ಬಳ್ಳಿ
(TINOSPORA COROFOLIA)

MENISPERMALEA

ಸಂಸ್ಕೃತ	–	ಛಿನ್ನರುಹಾ
ಹಿಂದಿ	–	ಗಿಲೋಯ್
ತೆಲಗು	–	ಟೆಪ್ಪತೀಗೆ
ತಮಿಳು	–	ಶಿಂಡಲೆಕೊಡಿ
ಮಲಯಾಳಂ	–	ಗುಲವೇಲ್



ಆಯುರ್ವೇದ ವೈದ್ಯರು ಈ ಬಳ್ಳಿಯನ್ನು ಅಮೃತ, ಗುಡೂಚಿ ಮುಂತಾದ ಹತ್ತುಹಲವಾರು ಹೆಸರುಗಳಿಂದ ಕರೆಯುತ್ತಾರೆ. ಕಿರು ಬೆರಳಿನ ಗಾತ್ರದ ಆರು ಅಂಗುಲದಷ್ಟು ಉದ್ದದ ಕಾಂಡವನ್ನು ನೆಡುವುದರಿಂದ ಬಳ್ಳಿಯನ್ನು ಬೆಳಸಬಹುದು. ಕುಂಡಗಳಲ್ಲಿ ನೆಡಬಹುದು. ಕಾಂಪೌಂಡು, ಮಾಳಿಗೆ, ಮರಗಳ ಮೇಲೆ ಹಬ್ಬಿಸಬಹುದು. ಎಲ್ಲಾ ಪ್ರದೇಶಗಳಲ್ಲಿ ಎಲ್ಲಾ ಋತುಗಳಲ್ಲಿ ಬೆಳಸಬಹುದಾದ ಅಮೃತ ಬಳ್ಳಿಗೆ ಕಾಲಕಾಲಕ್ಕೆ ನೀರು ಮತ್ತು ನೈಸರ್ಗಿಕ ಗೊಬ್ಬರ ಅವಶ್ಯಕ. ಕಿರು

ಬೆರಳ ಗಾತ್ರದ ಕಾಂಡವನ್ನು ಬಳಸುವುದು ಹೆಚ್ಚು ಪ್ರಯೋಜನಕಾರಿ. ಎಲೆಗಳನ್ನು ಬಳಸುವಾಗ ಅವು ಶುಭ್ರವಾಗಿ ಸಾಕಷ್ಟು ಬಲಿತಿರಬೇಕು.

ಅಮೃತ ಬಳ್ಳಿಯ ಉಪಯೋಗಗಳು ಅನಂತ. ಗುಣದಲ್ಲಿ ಅಮೃತ ಸಮಾನ. ರುಚಿಯಲ್ಲಿ ಕಹಿ ಮತ್ತು ಒಗರು. ಬಳ್ಳಿಯ ಸೇವನೆ ಶರೀರಕ್ಕೆ ಬಲವನ್ನು ನೀಡುತ್ತದೆ. ಚರ್ಮದ ತೊಂದರೆಯನ್ನು ನಿವಾರಿಸುತ್ತದೆ. ಜ್ವರವನ್ನು ನೀಗಿ ರಕ್ತ ಹೀನತೆಯನ್ನು ಹೋಗಲಾಡಿಸುತ್ತದೆ. ಕಾಮಾಲೆಗೆ ಇದು ದಿವ್ಯ ಔಷಧವಾದರೆ ಮಧುಮೇಹಕ್ಕೆ ಬಹಳ ಹಿತಕಾರಿ.

ಎರಡರಿಂದ ಮೂರು ತಿಂಗಳ ಕಾಲ ಪ್ರತಿನಿತ್ಯ ಬೆಳಗ್ಗೆ ಮತ್ತು ಸಂಜೆ ಎರಡು ಚಮಚ ಕಾಂಡದ ರಸವನ್ನು ಎರಡು ಚಮಚ ಜೇನು ತುಪ್ಪದೊಡನೆ ಆಹಾರಕ್ಕೆ ಮುಂಚೆ ಸೇವಿಸುವುದರಿಂದ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ.

ನಾಲ್ಕು ಚಮಚ ರಸಕ್ಕೆ ಅಷ್ಟೇ ಪ್ರಮಾಣದಲ್ಲಿ ಜೇನುತುಪ್ಪವನ್ನು ಸೇರಿಸಿ ದಿನದಲ್ಲಿ ಮೂರು ಬಾರಿ ಸೇವಿಸುವುದರಿಂದ ಶೀತ, ಜ್ವರ, ಕೆಮ್ಮು, ನೆಗಡಿ ಎರಡು ಮೂರು ದಿನಗಳಲ್ಲಿ ಕಡಿಮೆಯಾಗುತ್ತದೆ. ಮಕ್ಕಳಿಗೆ ಕೊಡಬೇಕಾದಲ್ಲಿ ಇದರಲ್ಲಿ ಕಾಲು ಭಾಗದಿಂದ ಅರ್ಧ ಪ್ರಮಾಣ ಸಾಕು. ಮಧುಮೇಹ ರೋಗಿಗಳು ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಒಂದು ಗೇಣು ಉದ್ದದ ಅಮೃತ ಬಳ್ಳಿಯ ಕಾಂಡವನ್ನು ಜಗಿದು ರಸವನ್ನು ಮಾತ್ರ ನುಂಗಬೇಕು. ಜಗಿಯಲಾಗದವರು ಮೂರು ಚಮಚ ರಸವನ್ನು ಸೇವಿಸಬಹುದು. ಇದರಿಂದ ಸಕ್ಕರೆಯ ಅಂಶ ಇಳಿದು ಕೈಕಾಲು ಉರಿ, ಸುಸ್ತು ದೌರ್ಬಲ್ಯಗಳು ಕಡಿಮೆಯಾಗುತ್ತವೆ. ಚರ್ಮ ರೋಗಗಳು ಕಣ್ಮರೆಯಾಗುತ್ತವೆ.

ಮೂಲವ್ಯಾಧಿ ಅಥವಾ ಮೊಳಕೆ ರೋಗದಲ್ಲಿ ಮೂರು ಚಮಚ ರಸಕ್ಕೆ, ಒಂದು ಲೋಟ ಮಜ್ಜಿಗೆ ಸೇರಿಸಿ, ದಿನದಲ್ಲಿ ಎರಡು ಮೂರು ಬಾರಿ ಕುಡಿಯುವುದರಿಂದ ರಕ್ತಸ್ರಾವ ನಿಲ್ಲುತ್ತದೆ. ಮಲಬದ್ಧತೆ ನಿವಾರಣೆಯಾಗುತ್ತದೆ.


ಕಾಮಾಲೆಯಲ್ಲಿ ಈ ಬಳ್ಳಿಯ ನಾಲ್ಕು ಚಮಚ ರಸಕ್ಕೆ ಒಂದು ಚಮಚ ಜೇನುತುಪ್ಪ ಸೇರಿಸಿ, ಬೆಳಗ್ಗೆ ಆಹಾರಕ್ಕೆ ಮೊದಲು ಸೇವಿಸಬೇಕು. ಸಪ್ಪೆ ಹಾಗೂ ದ್ರವಾಹಾರವನ್ನು ಬಳಸಬೇಕು. ವಿಶ್ರಾಂತಿ ತೆಗೆದುಕೊಳ್ಳಬೇಕು. ಇದರಿಂದ ಏಳು ದಿನಗಳಲ್ಲಿ ರೋಗ ಗುಣವಾಗುತ್ತದೆ.

ಅಳಲೇ ಕಾಯಿ

TERMINALIA CHEBULA

COMBRITAEEAE FAMILY

ಸಂಸ್ಕೃತ	—	ಹರೀತಕೀ
ಹಿಂದಿ	—	ಹರಡ್
ತೆಲಗು	—	ಕರಕ್ಕಾಯಿ
ತಮಿಳು	—	ಕದುಕ್ಕಾಲು
ಮಲಯಾಳಂ	—	ಹರಡೆ



ಆಯುರ್ವೇದ ವೈದ್ಯಕೀಯ ಪದ್ಧತಿಯಲ್ಲಿ ಅತ್ಯಂತ ಪ್ರಚಲಿತವಿರುವ ದ್ರವ್ಯ ಅಥವಾ ಔಷಧಿಯಾಗಿದೆ. ಆಡು ಭಾಷೆಯಲ್ಲಿ ಇದನ್ನು ಅಳಲೆಕಾಯಿ ಎಂದೂ ಕರೆಯುತ್ತಾರೆ. ಆದ್ದರಿಂದಲೇ, ಆಯುರ್ವೇದ ವೈದ್ಯರನ್ನು ಅಳಲೆಕಾಯಿ ಪಂಡಿತರೆಂದು ಕರೆಯುವುದು ರೂಢಿಯಲ್ಲಿದೆ. ಸಂಸ್ಕೃತದಲ್ಲಿ ಇದನ್ನು ಅಭಯ, ಪಥ್ಯ, ಕಾಯಸ್ಥಾ, ಅಮೃತಾ, ಹೈಮವತಿ, ಅವಸ್ಥಾ, ಜೀವಂತಿ, ರೋಹಿಣಿ ಎಂದು ಹಲವಾರು ಹೆಸರುಗಳಿವೆ. ಆದರೆ ಸಾಮನ್ಯವಾಗಿ ಹರೀತಕಿಯ ವಿಧಗಳನ್ನು ಹೇಳುವಾಗ ದೊಡ್ಡದು, ಚಿಕ್ಕದು ಮತ್ತು ಹಳದಿ ವರ್ಣದ್ದು ಎಂದು ವಿಂಗಡಿಸಲಾಗುತ್ತದೆ.

ಹರೀತಕಿ ವೃಕ್ಷವು ಸಾಮಾನ್ಯವಾಗಿ ೫೦ ರಿಂದ ೮೦ ಅಡಿ ಎತ್ತರಕ್ಕೆ ಬೆಳೆಯುತ್ತದೆ. ದಟ್ಟವಾದ ಅರಣ್ಯಗಳಲ್ಲಿ ಆದರಲ್ಲೂ ದಕ್ಷಿಣ ಭಾರತದಲ್ಲಿ ಈ

ವೃಕ್ಷವು ಸಾಮಾನ್ಯವಾಗಿ ಕಂಡು ಬರುತ್ತದೆ. ಇದರ ಎಲೆಗಳು ಸುಮಾರು ೩–೮ ಅಂಗುಲ ಉದ್ದ ಮತ್ತು ೨–೪ ಅಂಗುಲ ಅಗಲವಾಗಿದ್ದು ಸಾಧಾರಣವಾಗಿ ದುಂಡಾಗಿ ಕಂಡು ಬರುತ್ತದೆ. ಹರೀತಕಿಯ ಹೂಗಳು ಚಿಕ್ಕದಾಗಿ ಹಳದಿ ಮಿಶ್ರಿತ ಬಿಳಿ ವರ್ಣದವಾಗಿರುತ್ತವೆ. ಹಣ್ಣುಗಳು ೧–೨ ಅಂಗುಲ ಉದ್ದವಾಗಿದ್ದು ದುಂಡಗಿರುತ್ತದೆ. ತೆಳು ಹಳದಿ ವರ್ಣದ್ದಾಗಿರುತ್ತದೆ. ಹಣ್ಣುಗಳನ್ನು ಜನವರಿಯಿಂದ ಏಪ್ರಿಲ್ ತಿಂಗಳವರೆಗಿನ ಅವಧಿಯಲ್ಲಿ ಸಂಗ್ರಹ ಮಾಡಬಹುದು.

ಹರೀತಕಿಯು ಲವಣರಸದ ಹೊರತಾಗಿ ಉಳಿದ ಪಂಚರಸಗಳನ್ನು ಹೊಂದಿದೆ.

ಹರೀತಕಿಯನ್ನು ಸಾಮಾನ್ಯವಾಗಿ ಊತ, ನೇತ್ರರೋಗ, ಸಂಧಿವಾತ, ಅಗ್ನಿಮಾಂದ್ಯ, ಅನಾಹ, ವಿಬಂಧ, ಅಶ್ಮರಿ, ಕಾಮಲ, ಕ್ರಿಮಿ ಗ್ರಹಣಿ, ಅತಿಸಾರ, ಅಜೀರ್ಣ, ಅರತಿ, ಪಾಂಡು, ನೀಮೋಯ, ಕೆಮ್ಮು, ದಮ್ಮು, ಶ್ವೇತಪ್ರದರ ಇತ್ಯಾದಿ ವ್ಯಾಧಿಗಳಲ್ಲಿ ಉಪಯೋಗಿ ಸಬಹುದು. ಹರೀತಕಿಯು ಅತೀ ಉತ್ತಮ ರಸಾಯನ ದ್ರವ್ಯವಾಗಿದೆ. ಅಳಲೇ ಕಾಯಿಯನ್ನು ಅರೆದು ಜೇನಿನೊಡನೆ ಕುರುಗಳನ್ನು ಒಡೆಯಲು ಹಚ್ಚಬೇಕು ಇದನ್ನೇ ಗಾಯ ಮಾಯಿಸಲು ಸಹ ಉಪಯೋಗಿಸ ಬಹುದು.

ಅತಿಬಜೆ

(ACORUS CALAMUS)

ಸಂಸ್ಕೃತ	–	ಗೋಲೋಮಿ
ಹಿಂದಿ	–	ಬಜೆ
ತೆಲಗು	–	ವಡಜ
ತಮಿಳು	–	ಚಬನಮ್
ಮಲಯಾಳಂ	–	ಬಾವಾಂಬ

ವಚಾ, ಉಗ್ರಗಂಧಾ ಮುಂತಾದವು ಬಜೆಗಿರುವ ಇನ್ನಿತರ ಹೆಸರುಗಳು ಅತಿಬಜೆ ಬಹುಮಟ್ಟಿಗೆ ಎಲ್ಲ ತಾಯಂದಿರಿಗೂ ಪರಿಚಯವಿರುವ ಮೂಲಿಕೆ. ಜೌಗು ನೀರಿರುವ ಕಡೆ ಚೆನ್ನಾಗಿ ಬೆಳೆಯುವ ಸಸ್ಯವಿದು. ಅರಿಶಿನ, ಶುಂಠಿಗಳಂತೆ ಬೇರಿನ ತುಂಡಿನಿಂದ ಬೆಳೆಸಬಹುದು. ನಾಲ್ಕರಿಂದ ಆರು ತಿಂಗಳಲ್ಲಿ ಬಳಕೆಗೆ ಸಿದ್ಧವಾಗುವ ಈ ಮೂಲಿಕೆಗೆ ತೀವ್ರ ವಾಸನೆಯಿದೆ.

ಬಜೆಯಲ್ಲಿ ಬಳಕೆಯಾಗುವ ಭಾಗ ಬೇರು. ರುಚಿಯಲ್ಲಿ ಕಾರ ಮತ್ತು ಕಹಿ. ಉಷ್ಣವನ್ನು ಹೆಚ್ಚಿಸುವ ಸ್ವಭಾವ. ಬಜೆ ಮಕ್ಕಳಿಗೆ ತಾಯಿಯ ಹಾಗೆ. ಸ್ಮರಣ ಶಕ್ತಿಯನ್ನು ಹೆಚ್ಚಿಸುತ್ತದೆ. ತೊದಲನ್ನು ನಿವಾರಿಸುತ್ತದೆ. ತಲೆನೋವು, ಕೀಲು ನೋವು, ಹೊಟ್ಟೆನೋವು, ಶೀತ– ನೆಗಡಿ ಶಮನಗೊಳಿಸುತ್ತದೆ. ಸಾಣೆಕಲ್ಲಿನ ಮೇಲೆ ಈ ಬೇರನ್ನು ೩–೪ ಹನಿ ಜೇನು ತುಪ್ಪದೊಂದಿಗೆ ತೇಯ್ದು, ಈ ಗಂಧವನ್ನು ಮಕ್ಕಳಿಗೆ ತಿನ್ನಿಸಿದರೆ ಸ್ಮರಣ ಶಕ್ತಿ, ಬುದ್ಧಿ ಶಕ್ತಿ ಹೆಚ್ಚುತ್ತದೆ. ರೋಗ ನಿರೋಧಕ ಶಕ್ತಿ ಬೆಳೆಯುತ್ತದೆ. ತೊದಲು ನಿವಾರಣೆಯಾಗಿ ಮಾತು ಸ್ಪಷ್ಟವಾಗುತ್ತದೆ. ಇದನ್ನು ವಯೋನುಸಾರ, ಒಂದರಿಂದ ಎರುಡು ತಿಂಗಳ ಮಕ್ಕಳಿನಿಂದ ಹಿಡಿದು ಐದು ವರ್ಷದ ಮಕ್ಕಳವರೆಗೆ ಕೊಡಬಹುದು. ಮಕ್ಕಳಲ್ಲಿ ಹೆಚ್ಚೆಂದರೆ ಒಂದು ಉದ್ದಿನ ಕಾಳಿನ ಪ್ರಮಾಣದಲ್ಲಿ ದೊಡ್ಡವರಲ್ಲಿ ತೊಗರಿಕಾಳು ಅಥವಾ ಗುಲಗುಂಜಿ ಪ್ರಮಾಣದಲ್ಲಿ ಕೊಡಬಹುದು. ಮಕ್ಕಳಲ್ಲಿ ತಲೆನೋವು, ಶೀತ ನೆಗಡಿಗಳು ಕಂಡುಬಂದಾಗ ಜ್ವರದ ತಾಪ ಹೆಚ್ಚಾದಾಗ ಈ ಬೇರನ್ನು ಬಿಸಿ ನೀರು ಅಥವಾ ಹಾಲಿನಲ್ಲಿ ಅರೆದು ಹಣೆಯ


ಮೇಲೆ ಹಚ್ಚುವುದರಿಂದ ತೊಂದರೆ ಕಡಿಮೆಯಾಗುತ್ತದೆ. ಇದನ್ನು ಜಾಸ್ತಿ ಪ್ರಮಾಣದಲ್ಲಿ ಸೇವಿಸಿದರೆ ವಾಂತಿಯಾಗುತ್ತದೆ.

ಕೀಲು ನೋವು, ಹೊಟ್ಟೆನೋವುಗಳಲ್ಲಿ ನೋವಿರುವ ಭಾಗಕ್ಕೆ ಲೇಪಿಸುವುದರಿಂದ ನೋವು ಶಮನವಾಗುತ್ತದೆ.

ಅತ್ತಿ ಮರ

(FICUS RACEMOSA OR FICUS GLOMERATA)

ಸಂಸ್ಕೃತ	–	ಔದುಂಬರ
ಹಿಂದಿ	–	ಗೂಲರ್
ತೆಲಗು	–	ಅತ್ತಿಮಾನು
ತಮಿಳು	–	ಅತ್ತಿಮರಮ್
ಮಲಯಾಳಂ	–	ಅತ್ತಿ
ಇಂಗ್ಲಿಷ್	–	ಕ್ಲಸ್ಟರ್ ಫಿಗ್ ಅಥವಾ ಕಂಟ್ರಿಫಿಗ್



A--FICUS GLOMERATA, ROXB.

ಇದು ತೋಟಗಳಲ್ಲಿ ಸರ್ವೇ ಸಾಮಾನ್ಯವಾಗಿ ಬೆಳೆಯುವಂತಹ ಮರ. ಇದರ ಕಾಯಿಯನ್ನು ಅಡುಗೆಯಲ್ಲಿ ಪಲ್ಯಕ್ಕಾಗಿ ಉಪಯೋಗಿಸುತ್ತಾರೆ. ಔಷಧಕ್ಕಾಗಿ ಇದರ ಪಂಚಾಂಗಗಳನ್ನೂ ಉಪಯೋಗಿಸುತ್ತಾರೆ. ಆದರೆ ಮುಖ್ಯವಾಗಿ ಇದರ ತೊಗಟೆಯನ್ನು ಔಷಧ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಇದರ ರಸ ಒಗರು ಮತ್ತು ಸಿಹಿ.

ರಸಾಯನಿಕ ಸಂಘಟನೆ : ಇದರ ತೊಗಟೆಯಲ್ಲಿ 'ಟ್ಯಾನಿನ್' ಎಂಬ ರಾಸಾಯನಿಕ ಪದಾರ್ಥವಿದೆ.

ಉಪಯೋಗ : ಇದರ ತೊಗಟೆ, ಎಲೆ ಮತ್ತು ಕಾಯಿಗಳನ್ನು ಭೇದಿಯಾದಾಗ ಉಪಯೋಗಿಸಬಹುದು.

ಗರ್ಭಿಣಿಯರಲ್ಲಿ ಭೇದಿಯುಂಟಾದರೆ ಇದರ ಹಣ್ಣನ್ನು ಜೇನು ತುಪ್ಪದ ಜೊತೆ ಸೇವಿಸಬಹುದು.

ಮಧುಮೇಹ ರೋಗ ಉಳ್ಳವರು ಇದರ ಹಣ್ಣನ್ನು ಸೇವಿಸಿದರೆ ಉತ್ತಮ ಪರಿಣಾಮ ಉಂಟಾಗುತ್ತದೆ.

ಇದರ ತೊಗಟೆಯ ಕಷಾಯದಿಂದ ಸ್ನಾನ ಮಾಡುವುದರಿಂದ ಚರ್ಮ ರೋಗಗಳು ಗುಣವಾಗುತ್ತವೆ.


ಸಿಹಿಮೂತ್ರ, ಅತಿ ಬಾಯಾರಿಕೆ ಅತಿ ಮೂತ್ರ ಈ ಲಕ್ಷಣಗಳು ಮಧುಮೇಹಿಗಳಲ್ಲಿ ಕಾಣಿಸಿಕೊಂಡಿದ್ದರೆ–ಇದರ ಬೀಜ ಚೂರ್ಣ ಜೇನುತುಪ್ಪದೊಡನೆ ಬೆರೆಸಿ ಮುಖ್ಯವಾಗಿ ಉಪಯೋಗಿಸಬಹುದು. ಇದರ ಚಿಗುರೆಲೆಗಳನ್ನು ಒಣಗಿಸಿ ಪುಡಿ ಮಾಡಿಟ್ಟುಕೊಂಡು ಅಥವಾ ಹಣ್ಣನ್ನು ಜೇನುತುಪ್ಪ ಅಥವಾ ಸಕ್ಕರೆಯೊಂದಿಗೆ ತೆಗೆದುಕೊಂಡಲ್ಲಿ ಪಿತ್ತವಿಕಾರಗಳನ್ನು ಕಡಿಮೆ ಮಾಡುತ್ತದೆ.

ಮಹಿಳೆಯರಲ್ಲಿ ಕಾಣಿಸಿಕೊಳ್ಳುವ ಅಧಿಕ ಮಾಸಿಕ ಸ್ರಾವದಲ್ಲಿ ಇದರ ಬೇರಿನ ಕಷಾಯವನ್ನು ಬಳಸಬಹುದು. ಪ್ರಮಾಣ–ಒಂದು ಔನ್ಸ್+ಸಮಭಾಗ ಕಾಯಿಸಿ ಆರಿಸಿದ ನೀರು ದಿನಕ್ಕೆ ೨ ಸಲ.

ಅಶೋಕ (ಕೆಂಕಲಿ ಮರ)

(SARACA INDIACA)

ಸಂಸ್ಕೃತ	–	ಅಶೋಕ ಮತ್ತು ತಾಮ್ರಪಲ್ಲವ
ಹಿಂದಿ	–	ಅಸೋಕ್
ತೆಲಗು	–	ಅಸೋಕ
ತಮಿಳು	–	ಅಸೋಗಮ್
ಮಲಯಾಳಂ	–	ಅಶೋಕ
ಇಂಗ್ಲಿಷ್	–	ಅಸೋಕ್ ಟ್ರೀ



SARACA INDICA, LINN
ಅಶೋಕ.

ಇದು ಭಾರತದಲ್ಲಿ ಎಲ್ಲಾ ಕಡೆಗಳಲ್ಲಿ ಬೆಳೆಯುವ ಮರ. ಔಷಧಿಯಾಗಿ ಇದರ ತೊಗಟೆ, ಬೀಜ ಮತ್ತು ಪುಷ್ಪವನ್ನು ಉಪಯೋಗಿಸುತ್ತಾರೆ.

ಗುಣಗಳು: ಇದರ ರಸ ಒಗರು ಮತ್ತು ಕಹಿ, ಹಗುರ ಒರಟು.

ರಾಸಾಯನಿಕ ಸಂಘಟನೆ : ಇದರಲ್ಲಿ ಹೀಮೋಟಾಕ್ಸಿಲಿನ್ ಎಂಬ ರಾಸಾಯನಿಕ ಪದಾರ್ಥ ಇದೆ. ಇದರ ಆಲ್ಕೋಹಾಲಿಕ್ ಎಕ್ಸ್‌ಟ್ರಾಕ್ಟ್‌ನಲ್ಲಿ ಟ್ಯಾನಿನ್ ಮತ್ತು ಲೋಹಾಂಶಗಳು ಇವೆ.

ಉಪಯೋಗಗಳು : ಇದರ ತೊಗಟೆ ಗರ್ಭಾಶಯದ ಮೇಲೆ ಅತ್ಯಂತ ಗುಣಕಾರಿಯಾಗಿ ಕೆಲಸ ಮಾಡುತ್ತದೆ. ಇದನ್ನು ಹೆಚ್ಚಾದ ಮಾಸಿಕ ಸ್ರಾವದಲ್ಲಿ ಉಪಯೋಗಿಸಬಹುದು.

ತೊಗಟೆ ಚೂರ್ಣ ಒಂದು ಭಾಗ, ಹಸುವಿನ ಹಾಲು ನಾಲ್ಕು ಭಾಗ ಮತ್ತು ನೀರು ಹದಿನಾರು ಭಾಗ ಸೇರಿಸಿ, ನೀರಿನ ಅಂಶ ಸಂಪೂರ್ಣವಾಗಿ ಕಡಿಮೆಯಾಗುವವರೆಗೆ ಕುದಿಸಬೇಕು. ಇದನ್ನು ನಾಲ್ಕು ಚಮಚ ಮೂರು ಭಾರಿ ಹೆಚ್ಚಾದ ಮಾಸಿಕ ಸ್ರಾವವಾದಾಗ ತೆಗೆದುಕೊಳ್ಳಬೇಕು.

ರಕ್ತ ಮಿಶ್ರಿತ ಭೇದಿ ಆದಲ್ಲಿ ಹೂವಿನ ಚೂರ್ಣವನ್ನು ನೀರಿನ ಜೊತೆ ಸೇವಿಸಬಹುದು.

ಅರಳಿ ಮರ

(FICUS RELIGIOSA)

ಸಂಸ್ಕೃತ	–	ಅಶ್ವತ್ಥ
ಹಿಂದಿ	–	ಪೀಪಲ್
ತೆಲಗು	–	ರವಿಚೆಟ್ಟು
ತಮಿಳು	–	ಅರಶಮರಮ್
ಮಲಯಾಳಂ	–	ಅಶ್ವತ್ಥಂ
ಇಂಗ್ಲಿಷ್	–	ಸೇಕ್ರೆಡ್ ಫಿಗ್



ಇಡೀ ಭಾರತದ ಎಲ್ಲಾ ಪ್ರದೇಶಗಳಲ್ಲಿ ಬೆಳೆಯುತ್ತದೆ. ಈ ಮರವನ್ನು ಪೂಜಿಸುವ ಪದ್ಧತಿ ಪುರಾಣ ಕಾಲದಿಂದ ಅನುಸರಣೆಯಲ್ಲಿದೆ.

ಗುಣಗಳು : ಇದರ ರಸ ಒಗರು, ಇದರ ಇತರ ಗುಣಗಳು ಗುರು, ರೂಕ್ಷ ಮತ್ತು ವೀರ್ಯ ಶೀತ.

ಔಷಧಿಗಾಗಿ ತೊಗಟೆ, ಹಣ್ಣು ಮತ್ತು ಎಲೆಯನ್ನು ಉಪಯೋಗಿಸುತ್ತಾರೆ.

ರಾಸಾಯನಿಕ ಸಂಘಟನೆ : ಇದರ ತೊಗಟೆಯಲ್ಲಿ ಟ್ಯಾನಿನ್ ಎಂಬ ಅಂಶವು ಇದೆ.

ಉಪಯೋಗಗಳು : ಇದರ ಚೂರ್ಣ, ಆಲದ ಮರದ ಚೂರ್ಣ, ಬಸರಿ ಮರದ ಚೂರ್ಣ, ಅತ್ತಿಮರದ ಚೂರ್ಣ ಮತ್ತು ಹೂವರಿ ಮರದ ತೊಗಟೆಗಳ ಚೂರ್ಣವನ್ನು ಸೇರಿಸಬೇಕು. ಒಂದು ಗ್ರಾಂ ಈ ಚೂರ್ಣ ಮಿಶ್ರಣಕ್ಕೆ ಹದಿನಾರು ಗ್ರಾಂ ಭಾಗ ನೀರನ್ನು ಸೇರಿಸಿ ನೀರಿನ ಅಂಶವು ನಾಲ್ಕು ಭಾಗವಾಗುವವರೆಗೆ ಕುದಿಸಬೇಕು. ಇದನ್ನು ಪಂಚವಲ್ಕಲ ಕಷಾಯ ಎಂದು ಕರೆಯುತ್ತಾರೆ.

ಬಾಯಿ ಹುಣ್ಣಿನಲ್ಲಿ ಈ ಕಷಾಯವನ್ನು ಮುಕ್ಕಳಿಸುವುದಕ್ಕೆ ಉಪಯೋಗಿಸಬಹುದು.

ಸ್ತ್ರೀಯರಲ್ಲಿ ಈ ಕಷಾಯವನ್ನು ಶ್ವೇತ ಸ್ರಾವದಲ್ಲಿ ಗರ್ಭಾಶಯ ಪ್ರಕ್ಷಾಲನಕ್ಕೆ (ತೊಳೆಯಲು) ಉಪಯೋಗಿಸಿದರೆ ಗುಣಕಾರಿಯಾಗುತ್ತದೆ.

ಇದರ ಹಣ್ಣನ್ನು ಸೇವಿಸುವುದರಿಂದ ಮಲಬದ್ಧತೆಯನ್ನು ನಿವಾರಿಸುತ್ತದೆ ಮತ್ತು ಜೀರ್ಣವನ್ನು ಹೆಚ್ಚಿಸುತ್ತದೆ.

ತೊಗಟೆಯ ಚೂರ್ಣವನ್ನು ಹುಣ್ಣಿನ (ಗಾಯದ) ಮೇಲೆ ಸಿಂಪಡಿಸುವುದರಿಂದ ಬೇಗ ವಾಸಿಯಾಗುತ್ತದೆ.

ಚೂರ್ಣ : ೫–೧೦ ಗ್ರಾಂ. ಬಿಸಿ ನೀರಿನೊಡನೆ ದಿನಕ್ಕೆರಡು ಸಲ.

ಅಜಮೋದ (ಓಮುಕಾಳು)

B.N. CARUM ROXBURGHIANUM

N.O. UMBELIFERAE

ಸಂಸ್ಕೃತ	—	ಅಜಮೋದ
ತೆಲಗು	—	ವಾಮು
ತಮಿಳು	—	ಅಶಸ್ತ ಓವಂ
ಮಲಯಾಳಂ	—	ಅಜಮೇದ, ಶತಪುಷ್ಪಕುಲ



ಸ್ವರೂಪ : ಇದು ಒಂದು ಧನಿಯಾ ಜಾತಿಗೆ ಸೇರಿದ ಸುವಾಸನಾಯುಕ್ತವಾದ ಬೀಜಗಳನ್ನು ಹೊಂದಿದ ಗಿಡ. ಬೀಜ ಬಿತ್ತಿ ಬೆಳೆಯಬಹುದಾದ ಗಿಡವಿದು. ಉತ್ತರ ಭಾರತದಲ್ಲಿ ಈ ಬೀಜವು ಆಹಾರವಾಗಿ ಬಳಕೆಯಾದರೂ ಈ ಬೀಜವನ್ನು ಔಷಧವಾಗಿ ಹೆಚ್ಚು ಉಪಯೋಗಿಸುತ್ತೇವೆ. ಈ ಕಾಳನ್ನು ಬಿತ್ತಿದ ೨ ಅಥವಾ ೩ ತಿಂಗಳಲ್ಲಿ ಫಲ ಪಡೆಯಬಹುದು. ಈ ಗಿಡ ಒಂದೂವರೆಯಿಂದ ಮೂರು ಅಡಿ ಎತ್ತರ ಬೆಳೆಯುತ್ತದೆ. ಇದರ ಗಂಧ ತುಂಬಾ ತೀವ್ರವಾಗಿರುತ್ತದೆ. ಭಾರತದಲ್ಲಿ ಎಲ್ಲಾ ಪ್ರದೇಶದಲ್ಲಿ ಬೆಳೆಯಬಹುದು. ಮುಖ್ಯವಾಗಿ ಮಹಾರಾಷ್ಟ್ರದಲ್ಲಿ ಹೆಚ್ಚು ಬೆಳೆಯುತ್ತಾರೆ.

ಗುಣಕರ್ಮ : ರಸ, ಖಾರ, ಕಹಿರಸ

ಗುಣ : ಹಗುರ, ಒರಟು, ಚುರುಕು

ವೀರ್ಯ : ಉಷ್ಣ

ವಿಪಾಕ : ಖಾರ

ಈ ದ್ರವ್ಯದ ಗುಣ ಮತ್ತು ವೀರ್ಯ ಕಫ ಮತ್ತು ವಾತವನ್ನು ಶಮನ ಮಾಡುತ್ತದೆ

ತೀಕ್ಷ್ಣ ಖಾರ ಉಷ್ಣಗುಣದಿಂದ ಪಿತ್ತವನ್ನು ಶಮನಗೊಳಿಸಬಹುದು.

ಉಪಯೋಗ: ದೀಪನ,ಪಾಚನ, ಅಜೀರ್ಣ ಹೊಟ್ಟೆಉಬ್ಬರ ಹೊಟ್ಟೆನೋವು ಕ್ರಿಮಿಘ್ನ (ಹೊಟ್ಟೆಯಲ್ಲಿನ ಕ್ರಿಮಿಗಳನ್ನು ನಾಶ ಮಾಡುತ್ತದೆ) ನೆಗಡಿಸಹ ಕಡಿಮೆಯಾಗುತ್ತದೆ.

ಉಪಯುಕ್ತ ಅಂಗ: ಬೀಜ

ಮಾತ್ರೆ–೮–೧೫ ಗ್ರಾಂ. (ಪ್ರಮಾಣ)

ಯೋಗ : ಅಜಮೋದಾದಿ ಚೂರ್ಣ ಅರ್ಧ–ಒಂದು ಗ್ರಾಂ

ಅಜಮೋದಾದಿ ಆರ್ಕ್ : ೫–೧೦ ಎಂ.ಎಲ್. ತಣ್ಣೀರಿನೊಡನೆ

ಅಜಮೊದಾದಿ ವಾಟಿ · ೧–೨ ಮಾತ್ರೆ ಊಟದ ನಂತರ ಬಿಸಿ ನೀರಿನೊಡನೆ.

ಅರ್ಕ (ಎಕ್ಕೆ)

(CALOTROPIS GIGANTICA)

ಸಂಸ್ಕೃತ	–	ಅರ್ಕ
ಹಿಂದಿ	–	ಮಡ್ಡರ
ತೆಲಗು	–	ಎಕ್ಕ
ತಮಿಳು	–	ಬಡಬಡಮ್
ಮಲಯಾಳಂ	–	ಇರಿಕ್ಕ
ಇಂಗ್ಲಿಷ್	–	ಜೈಗ್ಯಾನ್ಟಿಕ್ ಸ್ವಾಲೋವರ್



B—CALOTROPIS PROCERA, BR.

A—CALOTROPIS GIGANTEA, BR.

ಇದರ ರಸವು ಕಾರ ಮತ್ತು ಕಹಿಯಾಗಿರುತ್ತದೆ.

ರಾಸಾಯನಿಕ ಸಂಘಟನೆ : ಇದರಲ್ಲಿ ಮದರ್ ಅಲ್ಬನ್, ಮದರ್ ಫ್ಲೂವಿಲ್, ಬ್ಲ್ಯಾಕ್ ಆಸಿಡ್, ರೆಸಿನ್, ಎಲ್ಲೊ ಬಿಟ್ಟರ್ ರೆಸಿನ್ ಇರುತ್ತದೆ.

ಕ್ರಿಯೆಗಳು : ಇದರ ಮೂಲದ ಚಕ್ಕೆಯು ತೊಗಟೆಯು ಕಫ ನಿವಾರಕ ಮತ್ತು ವಾಮಕ ಕಾರ್ಯವನ್ನು ಮಾಡುತ್ತದೆ. ಇದರ ಹೂವು ಜೀರ್ಣಕಾರಕ ಕಾರ್ಯವನ್ನು ಮಾಡುತ್ತದೆ.

ಇದನ್ನು ಕಲ್ಕ, ಗುಟಿಕಾ, ಚೂರ್ಣದ ರೂಪದಲ್ಲಿ (ಎಲೆ ಮತ್ತು ಮೂಲ) ಉಪಯೋಗಿಸುತ್ತಾರೆ.

ಉಪಯೋಗಗಳು : ಇದನ್ನು ಚರ್ಮರೋಗ ಫಿರಂಗ (ಸಿಫಿಲಿಸ್) ಕ್ಷೀಣತೆ ಫಿರಂಗ ವ್ರಣಗಳಲ್ಲಿ ಭೇದಿ ಆಮಶಂಕೆ ಮತ್ತು ಆಮವಾತಗಳಲ್ಲಿ ಉಪಯೋಗಿಸುತ್ತಾರೆ. ಇದರ ಬೇರಿನ ತೊಗಟೆಯನ್ನು ಚರ್ಮರೋಗ, ಆನೆಕಾಲು ರೋಗ ಉದರದಲ್ಲಿ (ಹೊಟ್ಟೆಯಲ್ಲಿ ನೀರು ಸೇರಿರುವುದು) ಉಪಯೋಗಿಸುತ್ತಾರೆ. ಎಕ್ಕೆಯ ಹಾಲನ್ನು ತಲೆಯಲ್ಲಿ ಆಗಿರುವ ಹುಳುಕಡ್ಡಿಗಳಲ್ಲಿ , ಗುದದಲ್ಲಿ ಉಂಟಾಗುವ ಫಿಸ್ಟುಲಾ ಮತ್ತು ಮೂಲ ವ್ಯಾಧಿಗಳಲ್ಲಿ ಉಪಯೋಗಿಸುತ್ತಾರೆ. ಮತ್ತು ಹತ್ತಿಯನ್ನು ಎಕ್ಕೆಯ ಹಾಲನಲ್ಲಿ ಅದ್ದಿ ನಂತರ ಅದನ್ನು ಹುಳುಕಲ್ಲಿನಲ್ಲಿಟ್ಟರೆ, ಹಲ್ಲುನೋವು ಕಡಿಮೆಯಾಗುತ್ತದೆ.

ಫಿರಂಗ ರೋಗದಲ್ಲಿ ಇದರ ಬೇರಿನ ತೊಗಟೆಯಿಂದ ಧೂಮಪಾನ ಮಾಡಿಸುತ್ತಾರೆ. ಒಣಗಿದ ಎಲೆಯ ಚೂರ್ಣವನ್ನು ವ್ರಣದಲ್ಲಿ ಉಪಯೋಗಿಸುತ್ತಾರೆ. ಇದನ್ನು ಅಪಸ್ಮಾರ ಹಿಸ್ಟೀರಿಯಾ, ಹನುಗ್ರಹ, ವಿಷಜಂತುಗಳು ಕಡಿದಾಗ ಉಪಯೋಗಿಸುತ್ತಾರೆ. ಇದರ ಹೂವನ್ನು ಕೆಮ್ಮು ಅಸ್ತಮಾ, ಅಗ್ನಿಮಾಂದ್ಯದಲ್ಲಿ ಉಪಯೋಗಿಸುತ್ತಾರೆ.

ಯೋಗಗಳು : ೧. ಅರ್ಕ ಲವಣ 125 ಗ್ರಾಂ. ದಿನಕ್ಕೆರಡು ಸಲ ನೀರು ಅಥವಾ ಜೇನಿನೊಡನೆ.

ಅಶ್ವಗಂಧ (ಹಿರೇಮದ್ದು ಅಂಗುರ ಬೇರು)

(W. SOMNIFERA)

ಹಿಂದಿ	–	ಅಸಗಂದ್, ಅಶ್ವಗಂದಾ, ನಾಗೋರಿ
ತೆಲಗು	–	ಪೈನ್ನೆರು ಗಡ್ಡು, ಪಿಲ್ಲಿ ಅಂಡ್ರಾ, ಅಶ್ವಗಂಧಿ
ತಮಿಳು	–	ಚುವದಿಗ
ಮಲಯಾಳಂ	–	ಆಸಂಧ
ಇಂಗ್ಲಿಷ್	–	ವಿಂಟರ್ ಚೆರ್ರಿ

ಇದು ೩–೪ ಅಡಿ ಎತ್ತರ ಬೆಳೆಯುವಂತಹ ಗಿಡ. ಫಲಗಳ ಆಕಾರವು ಕಡ್ಲೆಯ ಆಕಾರ ದಂತಿರುವುದು. ಇದರ ಮೂಲವು ಒಂದು ಒಂದೂವರೆ ಅಡಿ ಉದ್ದ ಹಾಗೂ ಒಂದು ಒಂದೂವರೆ ಅಡಿ ದಪ್ಪವಾಗಿರುತ್ತದೆ.

ರಾಸಾಯನಿಕ ಸಂಘಟನೆ: ಇದರ ಮೂಲದಲ್ಲಿ ಒಂದು ಆರಿಹೋಗುವ ಎಣ್ಣೆ ವಿತಿನಿಯಾಲ್ ಹೆಸರಿನ ಪದಾರ್ಥ, ಹೆಂಟ್ರಿಯಾಕೋನ್‌ಟೇನ್, ಫಾಯಿಟೊಸ್ಟೆರೋಲ್ ಹಾಗೂ ಎಣ್ಣೆ ಇರುತ್ತದೆ. ಇದಲ್ಲದೇ ಇದರಲ್ಲಿ ಮೂರು ಕ್ಷಾರೀಯ ಪದಾರ್ಥಗಳೂ ಇರುತ್ತವೆ. ಅದರಲ್ಲಿ ಸೋಮ್‌ನಿಫೆರಮ್ ಒಂದಾಗಿದೆ.

ಗುಣಗಳು : ಇದು ಒಗರು ಮತ್ತು ಕಹಿಯಾಗಿದ್ದು ವಿಪಾಕದಲ್ಲಿ ಖಾರವಾಗಿಯೂ ಲಘುವಾಗಿಯೂ, ಉಷ್ಣ ವೀರ್ಯವುಳ್ಳ ದ್ದಾಗಿಯೂ ಇರುತ್ತದೆ.

ಇದು ಅತ್ಯಂತ ವೀರ್ಯವರ್ಧಕವೂ, ರಸಧಾತುಗಳ ಪೋಷಕವೂ, ಕಾಂತಿ ದಾಯಕವೂ ಮತ್ತು ಪುಷ್ಟಿದಾಯಕವೂ ಕೂಡ ಆಗಿರುತ್ತದೆ. ಇದರಲ್ಲಿ. ವೃದ್ಧಾಪ್ಯದಲ್ಲಿ ಬರತಕ್ಕ ಎಲ್ಲ ರೋಗಗಳನ್ನು ಮತ್ತು ಕೆಮ್ಮು, ದಮ್ಮು, ಕ್ಷಯ, ವಾತ, (ಬಾವು) ಶೋಧ ರಕ್ತ ದೋಷ ವಿಷ, ಕ್ರಿಮಿ, ತೊನ್ನು, ವ್ರಣ ಮೊದಲಾದವುಗಳನ್ನು ಗುಣಪಡಿಸತಕ್ಕ ಸಾಮರ್ಥ್ಯವಿರುತ್ತದೆ.

ಇದರ ಬೇರನ್ನು ಹಸುವಿನ ಹಾಲಿನಲ್ಲಿ ಬೇಯಿಸಿ, ಒಣಗಿಸಿ ನಂತರ ಇದರ ಚೂರ್ಣವನ್ನು ಉಪಯೋಗಿಸಬೇಕು. ಒಂದರಿಂದ ಎರಡು ಚಮಚದವರೆಗೂ ಜೇನುತುಪ್ಪ, ತುಪ್ಪ, ಸಕ್ಕರೆ, ಹಾಲು, ಯಾವುದಾದರೂ ಒಂದರೊಂದಿಗೆ ಸೇವಿಸಬೇಕು.

ಇದರ ಯೋಗಗಳಾದ ಅಶ್ವಗಂಧ ರಸಾಯನ, ಅಶ್ವಗಂಧಾದಿ ಚೂರ್ಣ, ಅಶ್ವಗಂಧಾರಿಷ್ಟಗಳನ್ನು ಮೇಲೆ ಹೇಳಿದ ರೋಗಗಳಲ್ಲಿ ಉಪಯೋಗಿಸತಕ್ಕದ್ದು ವಿಶೇಷವಾಗಿ ನಿಶ್ಯಕ್ತಿ ಹಾಗೂ ತುಂಬಾ ದುರ್ಬಲರಾದಲ್ಲಿ ಇದನ್ನು ಸೇವಿಸಬೇಕು.

ಆಲದ ಮರ

(FICUS BENGALENSIS)

ಸಂಸ್ಕೃತ	–	ವಟ, ಬಹುಪಾದ	ತಮಿಳು	–	ಆಲಮರಮ್
ಹಿಂದಿ	–	ಬಡ್	ಮಲಯಾಳಂ	–	ವಟಮ್
ತೆಲಗು	–	ಮರಿಚೆಟ್ಟು	ಇಂಗ್ಲಿಷ್	–	ಬ್ಯಾನಿಯನ್ ಟ್ರೀ

ಒಂದು ಶ್ರೇಷ್ಠವಾದ ಮರವೆಂದು ಇದನ್ನು ಪೂಜಿಸಲಾಗುತ್ತದೆ. ಇದು ಸರ್ವೇಸಾಮಾನ್ಯವಾಗಿ ದೇಶದ ಎಲ್ಲಾ ಭಾಗಗಳಲ್ಲಿ ಬೆಳೆಯುವಂತಹ ವಿಶಾಲವಾದ ಮರ. ಔಷಧಕ್ಕಾಗಿ ಇದರ ತೊಗಟೆ, ಎಲೆ, ಬೇರು ಫಲ ಮತ್ತು ಕ್ಷೀರವನ್ನು ಉಪಯೋಗಿಸಲಾಗುತ್ತದೆ.

ಇದರ ರಸ ಒಗರು ಮತ್ತು ಕಾರ, ಒರಟು ಮತ್ತು ಶೀತ ಗುಣವನ್ನು ಹೊಂದಿದೆ

ರಾಸಾಯನಿಕ ಸಂಘಟನೆ : ಇದರ ತೊಗಟೆಯಲ್ಲಿ 'ಟ್ಯಾನಿನ್' ಎಂಬ ರಾಸಾಯನಿಕ ಪದಾರ್ಥವಿದೆ.

ಉಪಯೋಗ: ಇದರ ಕ್ಷೀರವನ್ನು ಗಂಟುನೋವು, ಗಾಯ, ಹಿಮ್ಮಡಿ ಒಡೆತ, ಹಲ್ಲು ಮತ್ತು ಒಸಡು ನೋವಿನಲ್ಲಿ ಹಚ್ಚಿದರೆ ನೋವು ಕೂಡಲೆ ಕಡಿಮೆಯಾಗುತ್ತದೆ.

೧ ಗ್ರಾಂ ತೊಗಟೆಯ ಚೂರ್ಣಕ್ಕೆ ೧೦ ಗ್ರಾಂ ಜಲವನ್ನು ಸೇರಿಸಿ ತಯಾರಿಸಿದ ಕಷಾಯವು ಮಧುಮೇಹದಲ್ಲಿ ಪರಿಣಾಮಕಾರಿ.

ಮಹಿಳೆಯರಲ್ಲಿ ಬಿಳಿ ಸೆರಗು ಹೋಗುತ್ತಿದ್ದರೆ ಇದೇ ಕಷಾಯದಿಂದ ಸ್ಥಾನಿಕವಾಗಿ ತೊಳೆಯಲು ಉಪಯೋಗಿಸಬಹುದು.


ಇದರ ಎಲೆಯನ್ನು ಸ್ವಲ್ಪ ಎಣ್ಣೆ ಸವರಿ, ಬಿಸಿ ಮಾಡಿ, ಕುರುವಿನ ಮೇಲೆ ಇಡುತ್ತಿದ್ದರೆ ಅದು ಬೇಗ ಹಣ್ಣಾಗಿ ಕೀವು ತುಂಬಿಕೊಂಡು ಬೇಗನೆ ಒಡೆದು ಗುಣವಾಗುತ್ತದೆ.

ಇದರ ಫಲವನ್ನು ವೃಷ್ಯವಾಗಿ (Virilific) ಉಪಯೋಗಿಸ ಬಹುದು.

ಆಮಲಕ (ನೆಲ್ಲಿಕಾಯಿ)

(OFFICINALIS)

ಸಂಸ್ಕೃತ	–	ಆಮಲಕ
ಹಿಂದಿ	–	ಜಾಸ್ಲೌ
ತೆಲಗು	–	ನೆಲ್ಲಿ
ತಮಿಳು	–	ಟೊಪ್ಪಿ
ಮಲಯಾಳಂ	–	ನಲ್ಲಿಕಾಯಿ



ಇದರಲ್ಲಿ ಲವಣ ರಸವನ್ನು ಬಿಟ್ಟು ಉಳಿದ ಎಲ್ಲಾ ರಸಗಳು ಇರುತ್ತದೆ. ಇದರಲ್ಲಿ ಹುಳಿರಸವು ಪ್ರಧಾನವಾಗಿರುತ್ತದೆ.

ರಾಸಾಯನಿಕ ಸಂಘಟನೆ : ಇದರಲ್ಲಿ ಗಾಲಿಕ್ ಆಸಿಡ್, ಟ್ಯಾನಿಕ್ ಆಸಿಡ್, ಗಮ್, ಶರ್ಕರಾ, ಆಲ್ಬ್ಯುಮೆನ್, ಸೆಲ್ಯುಲೋಸ್, ಮಿನರಲ್ ಮ್ಯಾಟರ್, ವಿಟಮಿನ್ 'ಸಿ' ಕ್ಯಾಲ್ಸಿಯಂ ಇರುತ್ತದೆ.

ಕ್ರಿಯೆಗಳು : ಅನುಲೋಮಕ, ರಸಾಯನ, ಮೂತ್ರಲ

ಇದನ್ನು ಚೂರ್ಣ, ಕಲ್ಕ, ರಸ, ಕಷಾಯ ಮುಂತಾದ ರೂಪಗಳಲ್ಲಿ ಉಪಯೋಗಿಸುತ್ತಾರೆ

ಉಪಯೋಗಗಳು : ಇದರ ಒಣಗಿದ ಹಣ್ಣನ್ನು ರಕ್ತ ಸ್ರಾವದಲ್ಲಿ ಆಮಶಂಕೆ ಮತ್ತು ಭೇದಿಯಲ್ಲಿ ಉಪಯೋಗಿಸುತ್ತಾರೆ. ಇದನ್ನು ಲೋಹದ ಜೊತೆಯಲ್ಲಿ ರಕ್ತಹೀನತೆ, ಕಾಮಾಲೆ ಮತ್ತು ಅರುಚಿಯಲ್ಲಿ ಉಪಯೋಗಿಸುತ್ತಾರೆ. ಇದರ ಹಣ್ಣಿನ ರಸ ಮತ್ತು ತುಪ್ಪವನ್ನು ಸೇವಿಸಿದರೆ ಶಕ್ತಿ ವರ್ಧಕವಾಗಿ ಕೆಲಸ ಮಾಡುತ್ತದೆ. ಇದರ ತೊಕ್ಕಿನ (ಬಾರ್ಕ್) ರಸವನ್ನು ಜೇನುತುಪ್ಪ ಮತ್ತು ಅರಿಸಿನದ ಜೊತೆ ಸೇವಿಸಿದರೆ ಗೊನೊರಿಯಾ ರೋಗವು ನಿವಾರಣೆಯಾಗುತ್ತದೆ. ಬಾಯಿ ಹುಣ್ಣಿನಲ್ಲಿ ಬೇರಿನ ತೊಗಟೆಯನ್ನು ಮಧುವಿನ ಜೊತೆ ಅರೆದು ಉಪಯೋಗಿಸಬಹುದು. ಅಮಲಕೀ ಬೀಜ, ಒಣದ್ರಾಕ್ಷಿ ಮತ್ತು ಸಕ್ಕರೆ ಇವುಗಳಿಂದ ತಯಾರಿಸಿದ ಕಷಾಯವನ್ನು ಜ್ವರ ಬಿಟ್ಟಮೇಲೆ ಬರುವ ಅರುಚಿಯಲ್ಲಿ ಉಪಯೋಗಿಸುತ್ತಾರೆ. (ಬಾಯಿ ಮುಕ್ಕಳಿಸಲು) ಆಮಲಕಿಬೀಜ, ಚಿತ್ರಕ ಮೂಲ, ಹಿಪ್ಪಲಿ ಮತ್ತು ಸೈಂಧವಗಳಿಂದ ತಯಾರಿಸಿದ ಕಷಾಯವನ್ನು ಜ್ವರದಲ್ಲಿ ಉಪಯೋಗಿಸುತ್ತಾರೆ. ಅಮಲಕಿ ಚೂರ್ಣ ಮತ್ತು ರಕ್ತ ಚಂದನದ ಚೂರ್ಣದ ಮಿಶ್ರಣವನ್ನು ಜೇನುತುಪ್ಪದ ಜೊತೆ ಓಕರಿಕೆ ಮತ್ತು ವಾಂತಿಯಾದಲ್ಲಿ ಉಪಯೋಗಿಸುತ್ತಾರೆ. ಇದರ ಬೀಜವನ್ನು ತುಪ್ಪದಲ್ಲಿ ಹುರಿದು ನಂತರ ಕಾಂಜಿಯಲ್ಲಿ ಕಲ್ಕ ಮಾಡಿ ತಯಾರಿಸಿದ ಲೇಪವನ್ನು ಮೂಗಿನಲ್ಲಿ ರಕ್ತಸ್ರಾವವಾಗುತ್ತಿದ್ದರೆ ತಲೆಗೆ ಲೇಪವಾಗಿ ಇದನ್ನು ಉಪಯೋಗಿಸುತ್ತಾರೆ. ಬೀಜವನ್ನು ಸುಟ್ಟು ಪುಡಿ ಮಾಡಿ ನಂತರ ಎಣ್ಣೆಯ ಜೊತೆ ಮಿಶ್ರ ಮಾಡಿ ಕಜ್ಜಿಗೆ ಹಚ್ಚಲು ಉಪಯೋಗಿಸುತ್ತಾರೆ. ಇದು ಒಂದು ಉತ್ತಮವಾದ ಅನುಲೋಮಕ ವಾಗಿದೆ. ಆದ್ದರಿಂದ ಇದನ್ನು ಮಲಬದ್ಧತೆಯಲ್ಲಿ ಉಪಯೋಗಿಸುತ್ತಾರೆ. ಇದನ್ನು ಹೃದ್ರವ (ಎದೆ ಹೊಡೆದುಕೊಳ್ಳುವುದು) ಮತ್ತು ಅಜೀರ್ಣಕ್ಕೆ ಸಂಬಂಧಿಸಿದ ರೋಗಗಳಲ್ಲಿ ಉಪಯೋಗಿಸುತ್ತಾರೆ.

ಯೋಗಗಳು: ಅ) ಧಾತ್ರಿ ಲೋಹ, ಆ) ದಾತ್ರಿ ಲೇಹ್ಯ, ಇ) ಚ್ಯವನ ಪ್ರಾಶ ಈ) ಧಾತ್ರಿ ಅರಿಷ್ಠ

ಉಪಯೋಗಿಸುವ ಪ್ರಮಾಣ: ೧ ತೊಲ ಹಾಲಿನೊಡನೆ ಊಟದ ನಂತರ--೨ ಭಾರಿ.

ಆಡುಸೋಗೆ

(ADATOD VASAKA)

ACANTHACEAE

ಸಂಸ್ಕೃತ	–	ವಾಸಕ
ಹಿಂದಿ	–	ಅಡೂಸಾ
ತೆಲಗು	–	ಅಡಸಾರಂ
ತಮಿಳು	–	ಅಡದೊಡಾಯಿ
ಮಲಯಾಳಂ	–	ಅಡ್ಡಲಸಾ



ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಆಡುಸೋಗೆ ಒಂದು ಪೊದರು ಗಿಡ. ವಾಸಾ, ಸಿಂಹಾಸ್ಯ,ಭಿಷಂಗ್ಮಾತಾ ಮುಂತಾದ ಹೆಸರುಗಳಿರುವ ಆಡುಸೋಗೆ ಯನ್ನು ಆರರಿಂದ ಎಂಟು ಅಂಗುಲದ ಬಲಿತ ಕಾಂಡಗಳನ್ನು ನೆಡುವುದರಿಂದ ಬೆಳೆಸಬಹುದು.

ಔಷಧವಾಗಿ ಉಪಯೋಗವಾಗುವ ಭಾಗ ಆಡುಸೋಗೆಯ ಎಲೆ, ಅವರ ರಸ, ದಮ್ಮು, ಕೆಮ್ಮು, ಗಂಟಲು ಉರಿ, ಕಜ್ಜಿ, ತುರಿ, ಇಸುಬು, ಬಾಯಿ ಅಥವಾ ಮೂಗಿನಿಂದ ರಕ್ತ ಬರುವುದರಲ್ಲಿ ಹೆಚ್ಚುಪರಿಣಾಮಕಾರಿ.

ಕ್ರಿಮಿಕೀಟಗಳಿಲ್ಲದ ಎಲೆಗಳನ್ನು ಬಿಸಿ ನೀರಿನಲ್ಲಿ ತೊಳೆದು, ಚೆನ್ನಾಗಿ ಜಜ್ಜಿ ರಸ ತೆಗೆಯಬೇಕು. ಒಂದು ಚಮಚ ರಸಕ್ಕೆ ಅಷ್ಟೇ ಪ್ರಮಾಣದ ಜೇನುತುಪ್ಪ ಸೇರಿಸಿ,

ಬೆಳಗ್ಗೆ ಮಧ್ಯಾಹ್ನ ಮತ್ತು ರಾತ್ರಿ ಆಹಾರಕ್ಕೆ ಮೊದಲು ತೆಗೆದುಕೊಳ್ಳಬೇಕು. ಇದರಿಂದ ಸಾಧಾರಣ ಕೆಮ್ಮು ಒಣಕೆಮ್ಮು ಗಂಟಲು ಉರಿ, ದಮ್ಮು ಬೇಗ ಕಡಿಮೆಯಾಗುತ್ತದೆ, ಹಸಿವು ಹೆಚ್ಚುತ್ತದೆ. ಜ್ವರ ಇಳಿಯುತ್ತದೆ. ಐದರಿಂದ ಹತ್ತು ವರ್ಷದ ಮಕ್ಕಳಿಗೆ ೧/೪ ರಿಂದ ಅರ್ಧ ಚಮಚ ರಸಕ್ಕೆ ಅಷ್ಟೇ ಪ್ರಮಾಣದಲ್ಲಿ ಜೇನುತುಪ್ಪ ಸೇರಿಸಿಕೊಟ್ಟರೆ ಸಾಕು.

ಕಜ್ಜಿ, ತುರಿ, ಇಸಬು ಮುಂತಾದ ಚರ್ಮ ರೋಗಗಳಲ್ಲಿ ನವೆಯನ್ನು ಕಡಿಮೆ ಮಾಡಲು ಆಡುಸೋಗೆ ಸೊಪ್ಪನ್ನು ಚೆನ್ನಾಗಿ ಅರೆದು ಹಚ್ಚಬೇಕು. ಸ್ವಲ್ಪ ಅರಿಶಿನವನ್ನು ಸೇರಿಸಬಹುದು. ಈ ರೀತಿ ಹಚ್ಚಿದ ಮೂರು ನಾಲ್ಕು ಗಂಟೆಗಳ ನಂತರ ಬಿಸಿನೀರಿನಿಂದ ತೊಳೆಯಬೇಕು. ಇದರಿಂದ ಗಾಯಗಳಿಂದ ಜಿನುಗುವ ದ್ರವವೂ ಕಡಿಮೆಯಾಗುತ್ತದೆ.


ಅಮ್ಮ, ದಡಾರ ಮುಂತಾದವುಗಳಲ್ಲಿ ಮಕ್ಕಳಿಗೆ ಒಂದು ಚಮಚ ರಸಕ್ಕೆ ಅರ್ಧ ಚಮಚ ಜೇನುತುಪ್ಪ ಸೇರಿಸಿ ಬೆಳಗ್ಗೆ ಹಾಗೂ ಸಂಜೆ ಖಾಲಿ ಹೊಟ್ಟೆಯಲ್ಲಿ ಕೊಡಬೇಕು ಅರೆದ ಸೊಪ್ಪು ಅಥವಾ ಅದರ ರಸವನ್ನು ಗುಳ್ಳೆಗಳಿಗೆ ಹಚ್ಚುವುದರಿಂದ ಕಲೆಗಳು ಉಳಿಯುವುದಿಲ್ಲ. ಹಚ್ಚಿದ ಎರಡು ಮೂರು ಗಂಟೆಗಳ ನಂತರ ತೊಳೆಯಬೇಕು.

ಆಗಾಗ ವಿನಾಕಾರಣ ಮೂಗಿನಿಂದ ರಕ್ತ ಬರುವುದು ಕೆಲವರಲ್ಲಿ ಕಂಡು ಬರುತ್ತದೆ. ಅಂಥವರಿಗೆ ಎರಡು ಚಮಚ ರಸಕ್ಕೆ ಎರಡು ಚಮಚ ಸಕ್ಕರೆ ಸೇರಿಸಿ ದಿನಕ್ಕೆರಡು ಬಾರಿ ಆಹಾರಕ್ಕೆ ಮುಂಚೆ ಕೊಡುವುದರಿಂದ ತೊಂದರೆ ನಿಯಂತ್ರಣಕ್ಕೆ ಬರುತ್ತದೆ. ಕಫದೊಂದಿಗೆ ರಕ್ತ ಬೀಳುವುದು ತಪ್ಪುತ್ತದೆ.

ಆಮೋತಸ (ಮುರುಗಲು ಮರ)

GARCINIA INDICA (CLUSIACEAE)

ಸಂಸ್ಕೃತ	–	ಆಮ್ಲಮೋತಸ
ಹಿಂದಿ	–	ಕೋಕಂ
ತಮಿಳು	–	ಮುರಗಲ್
ಮಲಯಾಳಂ	–	ಪುನಂಪುಲಿ



GARCINIA MANGOSTANA, Linn

ಮುರುಗಲು ಮರ ದೊಡ್ಡದಾದ ಮರವಾಗಿದೆ. ಇದರ ತೊಗಟೆ ಬಹಳ ತೆಳುವಾಗಿದೆ. ಹಾಗೂ ಕಪ್ಪಾಗಿದೆ. ಇದರ ಹಣ್ಣು ಪಕ್ವವಾದಾಗ ಆಹಾರವಾಗಿಯೂ ಉಪಯೋಗಿಸುವರು. ಇದರ ಬೀಜದಿಂದ ತೈಲವನ್ನು ತೆಗೆಯುವರು, ಮುರುಗಲ ಹಣ್ಣಿನ ರಸವನ್ನು ಸಕ್ಕರೆಯೊಂದಿಗೆ ಸೇರಿಸಿ ಬಿಸಿಲಿನಲ್ಲಿಟ್ಟು ತಯಾರಿಸಿ ಬಹಳ ದಿನ ಉಪಯೋಗಿಸುವುದೂ ಉಂಟು. ಇದು ತುಂಬಾ ಸ್ವಾದಿಷ್ಟವಾಗಿದೆ. ನೀರು ಸೇರಿಸಿದರೆ ಬಹಳ ದಿನ ಇಟ್ಟರೆ ಕೆಡುವುದು. ಇದರಿಂದ ದಾಹ ನಿವಾರಣೆಯಾಗುವುದು. ಇದರ ರಸ ತಯಾರಿಸಿ ಕುಡಿಯಲು ತಲೆಸುತ್ತುವಿಕೆಯು ನಿಲ್ಲುವುದು. ಇದರ ಎಣ್ಣೆಯನ್ನು ದೋಸೆ ತಯಾರಿಸಲು ಉಪಯೋಗಿಸುತ್ತಾರೆ. ಒಣಗಿದ ಹಣ್ಣಿನ ಸಿಪ್ಪೆಯನ್ನು ಸಾರು ತಯಾರಿಸುವಲ್ಲಿ ಬಳಸುತ್ತಾರೆ. ಇದರ ಗಡ್ಡೆಯು ತುರಿಕೆಯನ್ನು ಕಡಿಮೆ ಮಾಡುವುದು.

ಆಮಶಂಕೆಯಾದವರಿಗೆ ಗಂಜಿಯಲ್ಲಿ ಮುರುಗಲು ಎಣ್ಣೆಯನ್ನು ಬೆರೆಸಿ ಊಟ ಮಾಡಿಸುವರು. ಪಿತ್ತದಿಂದ ಬಳಲುವವರು ಎಲೆಯನ್ನು ಅಗಿದು ರಸವನ್ನು ನುಂಗುತ್ತಾರೆ. ಸುಟ್ಟ ಗಾಯಕ್ಕೆ ನೋವಿನ ವೇದನೆ ಕಡಿಮೆ ಮಾಡಲು ಹಾಗು ತಂಪಾಗಲು ಇದರ ತೈಲವನ್ನು ಲೇಪಿಸುತ್ತಾರೆ. ದೇಹದ ಯಾವುದೇ ಭಾಗದಲ್ಲಿ ಪೆಟ್ಟು ಬಿದ್ದು ರಕ್ತಹೆಪ್ಪುಗಟ್ಟಿದರೆ ಇದರ ಹಣ್ಣಿನ ರಸ ಕುಡಿಸುತ್ತಾರೆ.

ಇದು ಬಹಳ ಹುಳಿಯಾಗಿರುವುದು. ಮಲಭೇದಕವಾಗಿದೆ ಬೇಗ ಜೀರ್ಣವಾಗುತ್ತದೆ. ಅಗ್ನಿ ಹೆಚ್ಚಿಸುತ್ತದೆ. ಪಿತ್ತ ಉಂಟು ಮಾಡುತ್ತದೆ. ಇದನ್ನು ತಿನ್ನಲು ದೇಹವೆಲ್ಲಾ ರೋಮಾಂಚನಗೊಳ್ಳುತ್ತದೆ.

ಹೃದ್ರೋಗ ಶೂಲ, ಉದಾವರ್ತರು, ಕೆಮ್ಮು, ದಮ್ಮು ಹಾಗೂ ಅಜೀರ್ಣಗಳಲ್ಲಿಯೂ ಹೆಚ್ಚಾಗಿ ಉಪಯೋಗಿಸುವುದು ಕಂಡು ಬರುವುದು.

ಇಂಗು

(FERULA ASAFOETIDA)

ಸಂಸ್ಕೃತ	–	ಹಿಂಗು
ಹಿಂದಿ	–	ಹಿಂಗ್
ತೆಲಗು	–	ಇಂಗುವಾ
ತಮಿಳು	–	ಪೆರುಂಗಾಯಂ
ಮಲಯಾಳಂ	–	ಪೆರುಂಗಾಯಂ



ಹಿಂಗು.

ವಿವರಣೆ: ಇದು ೫'–೮' ಎತ್ತರದ ಗಿಡ, ಎಲೆಗಲು ೧''–೨'' ಉದ್ದ ಹಣ್ಣು ಇದರ ಬೇರಿನ ದಂಟನ್ನು ಕೆತ್ತಿದಾಗ ಬರುವ ಅಂಟಾದ ದ್ರವ್ಯವನ್ನು (ನಿರ್ಯಾಸ) ಸಂಗ್ರಹಿಸಿ ಉಪಯೋಗಿಸಬೇಕು. ವಸಂತ ಋತುವಿನಲ್ಲಿ ಸಂಗ್ರಹಿಸಿ ಇಂಗು ಉತ್ತಮ ಗುಣವುಳ್ಳದ್ದಾಗಿರುತ್ತದೆ.

ರಾಸಾಯನಿಕ ಸಂಘಟನೆ : ಗಂಧಕಯುಕ್ತ ವೊಲಟೈಲ್ ಆಯಿಲ್– ಶೇ. ೫ ಅಲ್ಲದೆ ಇದು ಫೆರೋಲಿಕ್ ಆ್ಯಸಿಡ್ ಮ್ಯಾಲಿಕ್, ಅಸಿಟಿಕ್, ಫಾರ್ಮಿಕ್ ಮತ್ತು ವೊಲಾರಿನಿಕ್ ಆ್ಯಸಿಡ್‌ಗಳನ್ನೊಳ ಗೊಂಡಿದೆ.

ಗುಣಗಳು : ಗುಣ – ತೀಕ್ಷ್ಣ(ಚುರುಕು) ಲಘು (ಒರಟು) ಸ್ನಿಗ್ಧ (ಜಿಗಟು)

ರಸ–ಖಾರ ವೀರ್ಯ – ಉಷ್ಣ

ಮುಖ್ಯವಾಗಿ ಕಫದೋಷ ಮತ್ತು ವಾತ ದೋಷ ಶಾಮಕ.

ಉಪಯೋಗಗಳು: ಇಂಗು ಜೀರ್ಣ ಶಕ್ತಿಯನ್ನು ವೃದ್ಧಿಮಾಡುವ ಒಂದು ಉತ್ತಮವಾದ ದ್ರವ್ಯ. ಅದನ್ನು ಮುಖ್ಯವಾಗಿ ಅಜೀರ್ಣ, ಹೊಟ್ಟೆನೋವು, ಹೊಟ್ಟೆ ಹುಳದ ಬಾಧೆ, ಜ್ವರ, ಆಯವಾತ (ಕೀಲುಗಳ ನೋವು), ಹೊಟ್ಟೆಯುಬ್ಬರ– ಇವುಗಳಲ್ಲೆಲ್ಲ ಉಪಯೋಗಿಸುತ್ತಾರೆ. ಅಲ್ಲದೆ ಇಂಗನ್ನು ಊಟಗಳಲ್ಲೂ, ಸ್ತ್ರೀಯರ ಮುಟ್ಟಿನ ದೋಷಗಳಲ್ಲಿ, ಹಲ್ಲು–ಹುಳುಕಿನ ತೊಂದರೆಯಲ್ಲೂ ಉಪಯೋಗಿಸಬಹುದು. ಈ ಎಲ್ಲಾ ತೊಂದರೆಗಳಲ್ಲಿ ಶುದ್ಧವಾದ, ಒಳ್ಳೆಯ ವಾಸನೆಯಿರುವ, ಬಿಳಿಯ ಇಂಗನ್ನು ಉಪಯೋಗಿಸಬೇಕು.

ಪ್ರಮುಖ ತಯಾರಿಕೆಗಳು : ಹಿಂಗ್ವಾಷ್ಟಕ ಚೂರ್ಣ, ಹಿಂಗ್ವಾದಿಘೃತ, ಹಿಂಗು–ಕರ್ಪೂರವಟೀ, ರಜಪ್ರವರ್ತಿನೀವಟೀ, ಇತ್ಯಾದಿ.

ಪ್ರಮಾಣ: ಚೂರ್ಣ ೧೫–೫೦ ಮಿಲಿಗ್ರಾಂ.

(ಉಷ್ಣಮೈ) ಪಿತ್ತ ಪ್ರಕೃತಿಯುಳ್ಳವರು ಇಂಗನ್ನುಕಡಿಮೆ ಪ್ರಮಾಣದಲ್ಲಿ ಉಪಯೋಗಿಸಬೇಕು.

ಉತ್ತರಣೆ

(ACYRANTHES ASPERA)

ಸಂಸ್ಕೃತ	–	ಅಪಾಮಾರ್ಗ	ಮಲಯಾಳಂ	–	ಕಟಲತೀ
ಹಿಂದಿ	–	ಚಿಡಿ ಚಿಡೀ ಚಿಚಿರ ಚಿಟಾ	ಬೆಂಗಾಲಿ	–	ಅಪಾಡ್
ತೆಲಗು	–	ಅಪಾಮಾರ್ಗ, ಉತ್ತರೇಸ	ಗುಜರಾತಿ	–	ಅಘೋಡೋ
ತಮಿಳು	–	ತಾಬುರೀವಿ	ಇಂಗ್ಲಿಷ್	–	ಪ್ರಿಕ್ಲಿಚ್ಯಾಫ್‌ಫ್ಲವರ್ಸ್



ಉಪಯೋಗಿಸುವ ಅಂಗ : ಬೇರು, ಬೀಜ, ಎಲೆ, ಪಂಚಾಂಗ

ರಾಸಾಯನಿಕ ಸಂಘಟನೆ : ಇದರಲ್ಲಿ ವಿಶೇಷವಾಗಿ ಪೊಟ್ಯಾಷ್ ಇದೆ.

ಗುಣಗಳು : ರಸ: ಖಾರ, ಕಹಿ ಗುಣ. ಹಗುರ, ರೂಕ್ಷ ತೀಕ್ಷ್ಣ ವೀರ್ಯ : ಉಷ್ಣ, ವಿಪಾಕ : ಖಾರ

ಉಪಯೋಗಗಳು : ಇದು ಕಫ ವಾತ ರೋಗಗಳಲ್ಲಿ ಒಳ್ಳೆಯದು.

ಬಾಹ್ಯ : ಊತ ಮತ್ತೆ ನೋವು ಇರುವ ಕಡೆ ಲೇಪವನ್ನು ಹಚ್ಚುತ್ತಾರೆ. ಗಾಯದಲ್ಲಿ ಇದರ ರಸವನ್ನು ಹಾಕುತ್ತಾರೆ ಚೇಳು ಮತ್ತು ಹಾವುಕಡಿದ ಜಾಗದಲ್ಲಿ ಇದರ ಲೇಪ ತುಂಬಾ ಉಪಯೋಗಕಾರಿ, ಕಿವಿ ನೋವಿನಲ್ಲಿ ಇದರ ಕ್ಷಾರದಿಂದ ತಯಾರಿಸಿದ ತೈಲವನ್ನು ಹಾಕುತ್ತಾರೆ.

ಅಭ್ಯಂತರ : ಅರುಚಿ, ವಾಂತಿ, ಅಗ್ನಿಮಾಂದ್ಯ, ನೋವು ಹೊಟ್ಟೆಯ ರೋಗಗಳಲ್ಲಿ ಉಪಯೋಗಿಸುತ್ತಾರೆ.

ವಿಶೇಷವಾಗಿ ಇದರ ಬೀಜದಿಂದ ತಯಾರಿಸಿದ ಪಾಯಸವು ಭಸ್ಮಕ (ತುಂಬಾ ಹಸಿವು ಇದ್ದರೆ) ಎಂಬ ರೋಗದಲ್ಲಿ ಉಪಯೋಗಕಾರಿ ಇದನ್ನು ಪಾಂಡು (ರಕ್ತ ಹೀನತೆ) ರಕ್ತವಿಕಾರ, ಹೃದ್ರೋಗ, ಅಮವಾತ ಮತ್ತೆ ಶೋಥೆ ರೋಗದಲ್ಲಿ ಉಪಯೋಗಿಸುತ್ತಾರೆ.

ಭಾರತದ ಎಲ್ಲೆಡೆ ಸಿಗುತ್ತದೆ. ಗಿಡವಾಗಿರುತ್ತದೆ. ಅರ್ಧದಿಂದ ಒಂದು ಮೀಟರ್ ಉದ್ದ ಬೆಳೆಯುತ್ತದೆ. ಇದರ ಹೂವು ಮಯೂರ ಪುಷ್ಪದಂತೆ ಇರುತ್ತದೆ.

ಕಲ್ಪಗಳು : ಅಪಮಾರ್ಗ ಕ್ಷಾರ ತೈಲ

ಬೀಜ ಚೂರ್ಣ—೫—೧೦ ಗ್ರೈನ್ಸ್ ಕ್ಷಾರ —೫ ಗ್ರೈನ್ಸ್

ಏರಂಡ (ಹರಳು ಔಡಲ)

(RICINUS COMMUNIS)

ಸಂಸ್ಕೃತ	– ಏರಂಡ	ತಮಿಳು	– ಅಮಣಕ್ಕಮ್
ಹಿಂದಿ	– ರೇಂಡೀ, ಏರಂಡ್, ಏರಂಡೀ	ಮಲಯಾಳಂ	– ಚಿಟ್ಟಾಮಾಕ್ಕು,
ತೆಲಗು	– ಅಮುದಾಮು		ಅಬಣಕ್ಕಾ



ರಾಸಾಯನಿಕ ಸಂಘಟನೆ: ಇದರ ಎಣ್ಣೆಯಲ್ಲಿರೆಸಿಸಿನ್ ಎಂಬ ಪದಾರ್ಥ, ರೆಸಿನ್ ಎಂಬ ವಿಷ ಪದಾರ್ಥವು ಇರುತ್ತದೆ. ಇದರ ಬೀಜದ ಎಣ್ಣೆಯಲ್ಲಿ ಗ್ಲಿಸರೈಡ್‌ಗಳು, ರಿಸಿನೊಲ್ಲಿಕ್ ಆಸಿಡ್, ಓಲಿಕ್ ಲಿನೋಲಿಕ್; ಸ್ಟಿಯೊರಿಕ್ ಮತ್ತು ಹೈಡ್ರೊಕ್ಸಿ ಸ್ಟಿಯೊರಿಕ್ ಎಂಬ ಆಮ್ಲಗಳಿವೆ.

ಗುಣ ಕರ್ಮಗಳು : ಇದು ಸಿಹಿ ರಸದಿಂದ ಕೂಡಿದ್ದು, ಉಷ್ಣ ವೀರ್ಯ ಹಾಗೂ ಗುರುವಾಗಿಯೂ ಇರುತ್ತದೆ. ವಾತ ಹಾಗೂ ಕಫವನ್ನು ನಾಶ ಮಾಡುತ್ತದೆ. ವಿಪಾತದಲ್ಲಿ ಸಿಹಿಯಾಗಿದೆ.


ಇದು ಮುಖ್ಯವಾಗಿ ಭೇದಿಯನ್ನುಂಟುಮಾಡುವಂತದ್ದಾಗಿದೆ. ಸೊಂಟ ಮುಂತಾದ ಪ್ರದೇಶಗಳಲ್ಲಿನ ನೋವುಬಾವು,ಜ್ವರ, ಕಫ, ಮಲಬದ್ಧತೆ, ಕೆಮ್ಮು ದಮ್ಮು, ಚರ್ಮ ವ್ಯಾಧಿಗಳಲ್ಲಿ ಮತ್ತು ಆಮವಾತವೆಂಬ ರೋಗಕ್ಕೆ ಉಪಯೋಗಿಸಲಾಗುತ್ತದೆ.

ಇದರ ಬೀಜದ ಪೊಪ್ಪು, ನೋವು ನಿವಾರಣೆ, ಬೀಜದ ಎಣ್ಣೆಯನ್ನು ಎಲ್ಲಾ ವಯಸ್ಸಿನವರಿಗೂ ಭೇದಿಯಾಗಲು ೧–೨ ಚಮಚದಷ್ಟು ಕೊಡಬಹುದು. ಸ್ತ್ರೀಯರಿಗೆ ಗರ್ಭಿಣಿಯಾದಾಗಲೂ ಕೊಡುವ ಕ್ರಮವಿದೆ. ಇದನ್ನು ಚಿಕ್ಕ ಪ್ರಮಾಣದಲ್ಲಿ ಶುಂಠಿಯ ಕಷಾಯದಲ್ಲಿ ಕೊಡುವುದರಿಂದ ಸೊಂಟ ಹಿಡಿಯುವುದು, ಸೊಂಟ ನೋವು, ಪಕ್ಕೆ ನೋವು ಸಂಧುಗಳಲ್ಲಿ ನೋವು, ಮುಂತಾದವುಗಳು ಪರಿಹಾರವಾಗುತ್ತದೆ. ಕಣ್ಣಿನಲ್ಲಿ ಕಸ ಏನಾದರೂ ಹೋಗಿದ್ದರೆ ಇದರ ಎಣ್ಣೆಯನ್ನು ಸ್ವಲ್ಪ ಹಾಕುವುದರಿಂದ ಕಸವು ಹೊರಕ್ಕೆ ಬರುತ್ತದೆ. ಕಣ್ಣಿನಲ್ಲಾಗುವ ಚುಚ್ಚುವಂತಹ ನೋವು ಕೂಡ ದೂರವಾಗುತ್ತದೆ. ಮೂಲವ್ಯಾಧಿಯಲ್ಲಿ ಉರಿಯಿದ್ದಾಗ ಆ ಜಾಗಕ್ಕೆ ಈ ಎಣ್ಣೆಯನ್ನು ಲೋಳೆರಸದೊಂದಿಗೆ ಹಚ್ಚಿದರೆ ಉರಿ ಕಮ್ಮಿಯಾಗುತ್ತದೆ. ತಲೆನೋವಿನಲ್ಲಿ ಇದನ್ನು ಹಚ್ಚಿ ತಿಕ್ಕಿದಾಗ ನೋವು ಕಡಿಮೆಯಾಗುತ್ತದೆ. ಉರಿಯನ್ನು ಕಡಿಮೆ ಮಾಡಲು ಬೀಜದ ಪೊಪ್ಪನ್ನು ಆಡಿನ ಹಾಲಿನೊಂದಿಗೆ ಅರೆದು ಪಾದದ ತಳಕ್ಕೆ ಹಚ್ಚಬೇಕು. ಎಣ್ಣೆಯನ್ನು ಹಚ್ಚಿದರೂ ಕೂಡ ಉರಿ ಕಡಿಮೆಯಾಗುತ್ತದೆ.

ಏರಂಡಕರ್ಕ (ಪರಂಗಿ ಹಣ್ಣು)

(CARICA PAPAYA)

ಹಿಂದಿ	–	ಪೊಪ್ಪಾಯಿ	ತಮಿಳು	–	ಪೊಪ್ಪಾಯಿ
ತೆಲಗು	–	ಬೊಪ್ಪಾಯಿ	ಮಲಯಾಳಂ	–	ಕಪಾಲಮ್



CARICA PAPAYA,

ಇದರ ರಸವು ಖಾರ ಮತ್ತು ಕಹಿ ಆಗಿರುತ್ತದೆ.


ರಾಸಾಯನಿಕ ಸಂಘಟನೆ: ಇದರಲ್ಲಿ ಅಲ್ಬ್ಯುಮಿನಾಯ್ಡ್, ಪಪೈನ್ ಅಥವಾ ಪಪಾಯೋಟಿನ್ ರೆಸಿನ್, ಕೊಬ್ಬು ಡೆಕ್ಸ್‌ಟ್ರಿನ್, ಸೋಡಾ, ಪೊಟ್ಯಾಷ್, ಫಾಸ್ಫೋರಿಕ್ ಆಸಿಡ್ ಎಣ್ಣೆ ಮೊದಲಾದವುಗಳು ಇರುತ್ತದೆ.

ಕ್ರಿಯೆಗಳು: ಇದು ಕ್ರಿಮಿಹರ, ಆರ್ತವ ಜನಕ, ಮತ್ತು ಯಕೃತ್‌ಅನ್ನು ಪೋಷಿಸುತ್ತದೆ. ಇದನ್ನು ರಸ ಕಲ್ಕ, ತಿರುಳು (ಪಲ್), ಸಿರಪ್ ರೂಪದಲ್ಲಿ ಉಪಯೋಗಿಸಬಹುದು.

ಉಪಯೋಗಗಳು: ಇದರ ರಸವನ್ನು ಮಧುವಿನ ಜೊತೆ ಸೇವಿಸಿ ನಂತರ ಹರಳೆಣ್ಣೆಯನ್ನು ಸೇವಿಸಿದರೆ, ಜಂತುಹುಳುವು ನಾಶವಾಗುತ್ತದೆ. ಇದರ ಹಣ್ಣು ಭೇದಿಯಾದಾಗ ಉಪಯೋಗಿಸುತ್ತಾರೆ. ಇದರ ಕಾಯಿಯನ್ನು ಅನುಲೋಮಕವಾಗಿ ಉಪಯೋಗಿಸುತ್ತಾರೆ. ಇದರ ಹಾಲನ್ನು ಹುಳುಕಡ್ಡಿಗೆ ಹಚ್ಚಲು ಉಪಯೋಗಿಸುತ್ತಾರೆ. ಪಕ್ವವಾದ ಹಣ್ಣನ್ನು ಕ್ರಮವಾಗಿ ಸೇವಿಸುವುದರಿಂದ, ಮಲಬದ್ಧತೆಯು ನಿವಾರಣೆಯಾಗುತ್ತದೆ ಮತ್ತು ಮೂಲವ್ಯಾಧಿ, ಮತ್ತು ಅರುಚಿಯಲ್ಲಿಯೂ ಉಪಯೋಗಿಸುತ್ತಾರೆ. ಒಣಗಿದ ಮತ್ತು ಉಪ್ಪು ಮಿಶ್ರಿತವಾದ ಹಣ್ಣು, ಯಕೃತ್ ಮತ್ತು ಪ್ಲೀಹ ವೃದ್ಧಿಯನ್ನು ಕಡಿಮೆ ಮಾಡುತ್ತದೆ. ಕಾಯನ್ನು ಊಟದ ಜೊತೆ ಸೇವಿಸುವುದರಿಂದ ಸ್ತ್ರೀಯರಲ್ಲಿ ಎದೆ ಹಾಲು ಹೆಚ್ಚಾಗುತ್ತದೆ. ಎಲೆಯನ್ನು ಬಿಸಿನೀರಿನಲ್ಲಿ ಅದ್ದಿ ಅಥವಾ ಬೆಂಕಿಯ ಮೇಲೆ ಬಿಸಿ ಮಾಡಿ, ಆ ಎಲೆಯನ್ನು ನೋವಿರುವ ಜಾಗಕ್ಕೆ ಹಾಕಿದರೆ ನೋವು ಕಡಿಮೆಯಾಗುತ್ತದೆ.

ಕಕ್ಕೆ ಮರ
(CASSIA FISTUAL)

ಸಂಸ್ಕೃತ	–	ಅರಗ್ವದ	ತಮಿಳು	–	ಕೊನ್ನಾ
ಹಿಂದಿ	–	ಅಮಲ್ತಾಸ್	ಮಲಯಾಳಂ	–	ಕಣಿಕೊನ್ನ
ತೆಲಗು	–	ಕೊಂಡ್ರಕಾಯಿ ರೆಲಾಚೆಟ್ಟು			



ಕಕ್ಕೆ

ಭಾರತದಲ್ಲಿ ಹೆಚ್ಚಾಗಿ ಎಲ್ಲಾ ಕಡೆಗಳಲ್ಲೂ ಬೆಳೆಯುತ್ತದೆ. ಸಿಲೋನ್, ಮಲಯಾ, ಚೀನಾದಲ್ಲೂ ಕಂಡುಬರುತ್ತದೆ.

ವಿವರಣೆ: ಕಕ್ಕೆ ಮರವು ಸುಮಾರು ೬ ರಿಂದ ೯ ಮೀಟರ್‌ಗಳಷ್ಟು ಎತ್ತರವಿರುತ್ತದೆ. ಅದರ ಕಾಂಡವು ನೇರವಾಗಿದ್ದು ಮೃದುವಾದ ತೊಗಟೆಯಿಂದ ಕೂಡಿರುತ್ತದೆ. ಎಲೆಗಳು ೬.೮–೯.೫ ಸಿ.ಎಂ. ಉದ್ದ, ಕಡು ಹಸಿರು ಬಣ್ಣವುಳ್ಳದ್ದಾಗಿರುತ್ತವೆ. ಹೂಗಳು ಹಳದಿ ಬಣ್ಣ

ಕಾಯಿಗಳು 30–60 ಸಿ. ಎಂ. ವ್ಯಾಸ, ಹೊಳೆಯುವ ಪುಡಿ ಬಣ್ಣವನ್ನು ಹೊಂದಿರುತ್ತದೆ. ಈ ಕಾಯಿಯ ಒಳಗೆ ಅನೇಕ ಚಪ್ಪಟೆಯಾಕಾರದ ನಾಣ್ಯದಂತಿರುವ ಬೀಜಗಳು ಇದ್ದು, ಅವುಗಳು ತೆಳುವಾದ ಹಾಳೆಯಂತಿರುವ ಪದರದಿಂದ ಬೇರ್ಪಡಿಸಲ್ಪಟ್ಟಿರುತ್ತವೆ.

ರಾಸಾಯನಿಕ ಸಂಘಟನೆ: ಬ್ಯೂಟರಿಕ್ ಆಸಿಡ್, ಸಕ್ಕರೆ ಅಂಟು, ಬ್ಯೂಟಿನ್ ಮತ್ತು ವೊಲಟೈಲ ಆಯಿಲ್.

ಗುಣಗಳು: ಗುಣ–ಗುರು, ವೀರ್ಯ –ಉಷ್ಣ

ರಸ–ಕಹಿ ವಿಪಾಕ–ಸಿಹಿ

ಪ್ರಯೋಜನಗಳು : ಕಕ್ಕೆಮರದ ಕಾಯಿ ಮತ್ತು ಎಲೆಗಳಿಂದ ತಯಾರಿಸಿದ ತಯಾರಿಕೆಗಳು ಚರ್ಮರೋಗಗಳು, ಮಲಬದ್ಧತೆ, ಸಂಧಿನೋವು ಮತ್ತು ಕೀಲು

ನೋವು ಇತ್ಯಾದಿ ವಾತ ರೋಗಗಳು, ಕಾಮಾಲೆ, ಕೆಮ್ಮು, ಮೂತ್ರವಿಕಾರಗಳು (ಮೂತ್ರರೋಗಗಳು), ಕ್ಷಯರೋಗ ಇತ್ಯಾದಿ ಕಾಯಿಲೆಗಳಲ್ಲಿ ತುಂಬಾ ಉಪಯೋಗ ಕಾರಿಯಾಗಿದೆ. ವಿಶೇಷವಾಗಿ ಬೀಜಗಳಿಂದ ತಯಾರಿಸಿದ ಎಣ್ಣೆಯು ಎಲ್ಲಾ ವಿಧದ ಚರ್ಮರೋಗಗಳನ್ನು ಗುಣಪಡಿಸುತ್ತದೆ. ಸೋರಿಯಸಿಸ್ ನಲ್ಲಿ ಇದರ ಎಲೆಯ ಅಂಟು ಹಚ್ಚಿದರೆ ಒಳ್ಳೆಯ ಉಪಕಾರಿ.

ಅಲ್ಲದೆ ಗರ್ಭಿಣಿಯರಲ್ಲಿ ಹೊಟ್ಟೆಯ ಮೇಲೆ ಕಾಣಿಸಿಕೊಳ್ಳುವ ಬಿಳಿಯಕಲೆಗಳಲ್ಲಿ ಉಂಟಾಗುವ ತುರಿಕೆಯನ್ನು ಗುಣ ಪಡಿಸಲು ಕೆಕ್ಕೆ ಮರದ ಎಲೆಗಳನ್ನು ಜಜ್ಜಿ (ಹಾಲಿನೊಂದಿಗೆ) ಉಂಟಾದ ಚಟ್ನಿಯಂತೆ ಇರುವ ದ್ರವ್ಯವನ್ನುಹೊಟ್ಟೆಯ ಮೇಲೆ ಹಚ್ಚಬೇಕು. ಇದರಿಂದ ತುರಿಕೆ ಮತ್ತು ಕಲೆ ಎರಡೂ ವಾಸಿಯಾಗುವುದು.

ಪ್ರಮುಖ ತಯಾರಿಕೆಗಳು : ಅರಗ್ವದಾದಿ ತೈಲ, ಅರಗ್ವದಾದಿ ಲೇಹ, ಅರಗ್ವದಾರಿಷ್ಟ

ಪ್ರಮಾಣ: ಬೇರಿನ ತೊಗಟೆ ಕಷಾಯ ೨೫–೩೦ ಎಂ.ಎಲ್,

ಚೂರ್ಣ ೫–೧೦ ಮಿ.ಗ್ರಾಂ.

ಕೊತ್ತಂಬರಿ

(CORIANDRUM SATIVUM)

ಸಂಸ್ಕೃತ	– ಕುಸ್ತುಂಬರು	ತಮಿಳು	– ಕೊಥಮಲ್ಲಿ
ಹಿಂದಿ	– ಧನಿಯಂ	ಮಲಯಾಳಂ	– ಕೊತ್ತುಮಪಲರಿ
ತೆಲಗು	– ಧನಿಯಾಲು		

ಪ್ರತಿದಿನವು ನಾವು ನಮ್ಮ ಮನೆಯ ಪ್ರಮುಖ ಸಾಂಬಾರ ಪದಾರ್ಥವಾಗಿ ಉಪಯೋಗಿಸುತ್ತೇವೆ. ಬಹಳ ಕೆಟ್ಟ ರೋಗಗಳನ್ನು ನಿವಾರಣೆ ಮಾಡುವ ಗುಣವಿರುವುದರಿಂದ ಇದನ್ನು ಕುಸ್ತುಂಬರು ಎಂದಿದ್ದಾರೆ.

ಇದರ ಸೊಪ್ಪನ್ನು ಪಿತ್ತರೋಗ ನಿವಾರಣೆಗಾಗಿ ಉಪಯೋಗಿಸ ಲಾಗುತ್ತದೆ. ಮೈಯಲ್ಲಿ ಉರಿಯಿದ್ದರೆ ಸಹ ಇದನ್ನು ಉಪಯೋಗಿಸಬೇಕು. ಬಾಯಾರಿಕೆ ಜಾಸ್ತಿ ಇದ್ದಾಗ ಒಣಗಿದ ಕೊತ್ತಂಬರಿಯ ಒಂದು ತೊಲ ಚೂರ್ಣವನ್ನು ಆರು ತೊಲ ನೀರಿನಲ್ಲಿ ಹಾಕಿ ಒಂದು ಪಾತ್ರೆಯಲ್ಲಿಟ್ಟು ಬೆಳಗ್ಗೆ ಕುಡಿಯಬೇಕು. ಇದಕ್ಕೆ ಹಿಮ ಕಷಾಯವೆಂದೂ ಹೆಸರಿದೆ.

ಅಜೀರ್ಣ ರೋಗಗಳಿಗೆ ಇದು ಸಿದ್ಧೌಷಧ. ಅತಿಸಾರ ಮಲ ಜಾಸ್ತಿಯಾಗುವುದು, (ಒಂದು ಸಾರಿ ಗಟ್ಟಿಗೆ ಮತ್ತೊಂದು ಸಾರಿ ತೆಳ್ಳಗೆ ಮಲ ಆಗುವುದು), ಜ್ವರ, ಮೂಳೆವ್ಯಾಧಿ ದಮ್ಮುಕೆಮ್ಮು, ಹೊಟ್ಟೆನೋವು ಇತ್ಯಾದಿ ರೋಗಗಳಲ್ಲಿ ಉಪಯೋಗಿಸುವುದು ವಾಡಿಕೆ. ಪಿತ್ತದಿಂದ ಉಂಟಾಗುವ ರೋಗ, ಗಂಡಮಾಲೆಯ ಊತ, ಉರಿ ಮುಂತಾದ ರೋಗಗಳಲ್ಲಿ ಕೊತ್ತಂಬರಿ ಸೊಪ್ಪನ್ನು ಅರೆದು ಲೇಪ ಹಾಕಬೇಕು. ಕೊತ್ತಂಬರಿಯು ಹೃದಯದ ಮತ್ತು ಕಣ್ಣುಗಳಿಗೆ ಸಂಬಂಧಿಸಿದ ಹಾಗೂ ವಾಂತಿಗೆ ಸುಲಭ ಔಷಧವಾಗಿದೆ. ಇದು ಮೂತ್ರವನ್ನು ಸಹ ಜಾಸ್ತಿ ಮಾಡುವುದು. ಕೊತ್ತಂಬರಿಯನ್ನು ಅಕ್ಕಿ ತೊಳೆದ ನೀರಿನಲ್ಲಿ ಸೇರಿಸಿ ಮಕ್ಕಳಿಗೆ ಗ್ರೈಫ್‌ವಾಟರ್‌ನಂತೆ ತಯಾರಿಸಿ ಕೊಡಬಹುದು. ಇದು ಜ್ವರಬಂದಾಗ ಉಪಯೋಗಿಸಿದರೆ ಬೆವರುಬರಿಸುತ್ತದೆ. ಕೊತ್ತಂಬರಿ ಸೊಪ್ಪಿನಲ್ಲಿ ಚಂದ್ರಪ್ರಭಾವಟಿ ಸೇರಿಸಿ ತೆಗೆದುಕೊಂಡರೆ ಬಿಳಿ ಸೆರೆ ರೋಗ ನಿವಾರಣೆಯಾಗುತ್ತದೆ.

ಹೊಂಗೆ

(PONGAMIA PINNATA)

ಸಂಸ್ಕೃತ	–	ಕರಂಜ
ಹಿಂದಿ	–	ಡಿಟೋರಿ, ಕಿರಮಾಲ ಪಾಪರ
ತೆಲಗು	–	ಪುಂಗು, ಕಾನುಗುಚೆಟ್ಟು
ತಮಿಳು	–	ಪುಂಗಮ್, ಪುಂತು
ಮಲಯಾಳಂ	–	ಪೋನ್ನಮ್, ಉನ್ನೇಮರಮ್



ರಾಸಾಯನಿಕ ಸಂಘಟನೆ: ಇದರ ಬೀಜದಲ್ಲಿ ಕರಂಜಿನ್ ಎಂಬ ಪದಾರ್ಥವಿದೆ.

ಗುಣಕರ್ಮಗಳು: ಇದು ಕಹಿ,ಖಾರ ರಸಗಳಿಂದ ಕೂಡಿದ್ದು, ತೀಕ್ಷ್ಣವೂ, ಉಷ್ಣವೂ, ಲಘುವೂ ಆಗಿದೆ. ವಿಪಾಕದಲ್ಲಿ ಕಾರವಾಗಿದೆ.

ಇದು ಚರ್ಮರೋಗ, ಹೊಟ್ಟೆ ಉಬ್ಬುವುದು, ತುರಿಕೆ, ಮೂಲವ್ಯಾಧಿಗಳಲ್ಲಿ ಉಪಯೋಗಿಸಲಾಗುತ್ತದೆ. ಇದು ಚರ್ಮ ರೋಗಗಳನ್ನಲ್ಲದೆ ಭಗಂಧರ, ಗುಲ್ಮ, ತೊನ್ನು ಸಿಹಿ ಮೂತ್ರ, ಮೊದಲಾದ ರೋಗಗಳನ್ನು ಗುಣಪಡಿಸುತ್ತದೆ. ಇದು ಉತ್ತೇಜಕವೂ, ಪಿತ್ತಕರವೂ, ಬೋಧಕವೂ ಆಗಿರುತ್ತದೆ.


ಇದರ ಬೀಜದ ಎಣ್ಣೆಯೂ ಒಳ್ಳೆಯ ಕ್ರಿಮಿಹರವೂ ಹಾಗೂ ಹುಣ್ಣನ್ನು ಮಾಯಿಸುವಂತಹದಾಗಿದೆ. ಅನೇಕ ವಿಧವಾದ ಚರ್ಮ ರೋಗಗಳಲ್ಲಿ ಇದರ ಎಣ್ಣೆಯನ್ನು ಹಚ್ಚಿದರೆ ಲಾಭವಾಗುತ್ತದೆ. ಎಣ್ಣೆಯ ಜೊತೆಗೆ ಲಿಂಬೆರಸ ಸಮಪ್ರಮಾಣದಲ್ಲಿ ಸೇರಿಸಿ ಚರ್ಮಕ್ಕೆ ಹಚ್ಚಬೇಕು. ಹೆಚ್ಚು ಕೆಮ್ಮಿರುವಾಗ ಅಥವಾ ನಾಯಿಕೆಮ್ಮಿಗೆ ಇದರ ಬೀಜವನ್ನು ಅರೆದು ಕೊಡಬೇಕು. ಇದರ ಎಲೆಯನ್ನು, ಸರಿಯಾಗಿ ಜೀರ್ಣವಾಗದೆ ಇದ್ದಲ್ಲಿ, ಭೇದಿಯಾಗುತ್ತಿರುವಾಗ ಕೊಡಬೇಕು. ಇದರಿಂದ ಹೊಟ್ಟೆನೋವು ಕಡಿಮೆಯಾಗಿ ಅನ್ನವು ಚೆನ್ನಾಗಿ ಅರಗುತ್ತದೆ. ತಲೆಯ ಕೂದಲು ಉದುರುವಾಗ ಇದರ ಹೂಗಳನ್ನು ಉದುರಿದ ಜಾಗಕ್ಕೆ ಹಚ್ಚಬೇಕು.

ಮೂಲವ್ಯಾಧಿಯಲ್ಲಿ ರಕ್ತವು ಹೋಗುತ್ತಿದ್ದರೆ ಇದರ ಬೇರನ್ನು ದನದ ಗಂಜಲದಲ್ಲಿ ಅರೆದು ಕುಡಿಯಲು ಕೊಡಬೇಕು ಹಾಗೂ ಮಜ್ಜಿಗೆಯನ್ನು ಪಥ್ಯವಾಗಿ ಕೊಡಬೇಕು.

ಕಾಕಮಾಚಿ (ಗಣಿಕೆ)

(SOLANUMNIGRUM)

ಹಿಂದಿ	—	ಗುಕ್ಕಮಾಯಿ
ತೆಲಗು	—	ಕಮಂಚಿಚೆಟ್ಟು
ತಮಿಳು	—	ಮನತ್ತಕ್ಕಲಿ
ಮಲಯಾಳಂ	—	ತುಡವಲಮ್
ಇಂಗ್ಲಿಷ್	—	ಬ್ಲ್ಯಾಕ್‌ನೈಟ್ ಶೇಡ್



ಇದರ ರಸವು ಕಹಿಯಾಗಿರುತ್ತದೆ.

ರಾಸಾಯನಿಕ ಸಂಘಟನೆ : ಇದರ ಹಣ್ಣುಗಳಲ್ಲಿ "ಸೊಲಾನಿನ್" ಇರುತ್ತದೆ. ಈ ಸೋಲಾನಿನ್‌ನಲ್ಲಿ ಶಕಾರ ಮತ್ತು ಸೊಲಾನಿಡಿನ್ ಎಂಬ ಆಲ್ಕಲಾಯ್ಡ್ ಇರುತ್ತದೆ.

ಕ್ರಿಯೆಗಳು : ರಸಾಯನ, ನಿದ್ರಾಜನಕ, ಮೂತ್ರಲ, ಶುಕ್ರಲ ಮತ್ತು ನಿವಾರಕವಾಗಿ ಕೆಲಸ ಮಾಡುತ್ತದೆ.

ಇದರ ಹಣ್ಣನ್ನು ಮುಖ್ಯವಾಗಿ ಹೃದಯ ವಿಕಾರಗಳಲ್ಲಿ ಉಪಯೋಗಿಸುತ್ತಾರೆ. ಇದರ ಎಲೆಯ ರಸವನ್ನು ಹೃದಯ ರೋಗದಲ್ಲಿ, ಚರ್ಮ ರೋಗಗಳಲ್ಲಿ, ಮೂಲವ್ಯಾಧಿ, ಗೊನೋರಿಯಾ ಯಕೃತ್ ಮತ್ತು ಪ್ಲೀಹ ವೃದ್ಧಿಯಲ್ಲಿ ಮತ್ತು

ಬೋಧದಲ್ಲಿ ಉಪಯೋಗಿಸುತ್ತಾರೆ. ಇದರ ರಸವನ್ನು ಜ್ವರದಲ್ಲಿ ಸ್ವೇದನವನ್ನುಂಟು ಮಾಡಲು ಉಪಯೋಗಿಸುತ್ತಾರೆ. ಇದರ ಹೂವಿನಿಂದ ಮತ್ತು ಹಣ್ಣಿನಿಂದ ತಯಾರಿಸಿದ ಕಷಾಯವನ್ನು ಕೆಮ್ಮು ಮತ್ತು ಕ್ಷಯಗಳಲ್ಲಿ ಉಪಯೋಗಿಸುತ್ತಾರೆ.

ಇದರ ಎಲೆಗಳನ್ನು ಆಮವಾತ ಮತ್ತು ವಾತ ರಕ್ತದಲ್ಲಿ ಲೇಪನಕ್ಕಾಗಿ ಉಪಯೋಗಿಸುತ್ತಾರೆ ಮತ್ತು ಚರ್ಮ ರೋಗಗಳಲ್ಲಿಯೂ ಸಹ ಇದನ್ನು ಲೇಪನವಾಗಿ ಉಪಯೋಗಿಸುತ್ತಾರೆ. ಇದರ ಎಲೆಯನ್ನು ಬಿಸಿ ಮಾಡಿ ಊದಿದ ಮತ್ತು ನೋವಿನಿಂದ ಕೂಡಿದ ವೃಷಣಕ್ಕೆ ಶಾಖ ಕೊಡಲು ಉಪಯೋಗಿಸುತ್ತಾರೆ.

ಗರುಗದ ಸೊಪ್ಪು

(ECLIPTA ALBA)

ಸಂಸ್ಕೃತ	–	ಮಾರ್ಕವ, ಭೃಂಗರಾಜ
ಹಿಂದಿ	–	ಭಾಂಗರಾ
ತೆಲಗು	–	ಗಲಗರಾ
ತಮಿಳು	–	ಕಾಯಿಕೇಳಿ
ಮಲಯಾಳಂ	–	ಮಾಕ



ಇದರಲ್ಲಿ ಮೂರು ವಿಧ ೧. ಬಿಳಿ ಗರುಗ, ೨. ಹಳದಿ ಗರುಗ, ೩. ನೀಲಿ ಹೂವಿನ ಗರುಗ. ಗರುಗದ ಸ್ವರಸ ಅಂದರೆ ಅದನ್ನು ಜಜ್ಜಿ ತೆಗೆದ ರಸವನ್ನು ಅಥವಾ ಅದರ ಚೂರ್ಣವನ್ನಾಗಲೀ ಉಪಯೋಗಿಸಬೇಕು.

ಗರುಗದಲ್ಲಿ ಖಾರ, ಕಹಿ ರಸಗಳು ರೂಕ್ಷವಾಗಿ ಮತ್ತು ಉಷ್ಣ ವೀರ್ಯವಿದೆ. ಇದರ ಎಣ್ಣೆ ತಲೆಕೂದಲು ಬೆಳೆಸಲು ಮತ್ತು ಉದುರುವುದನ್ನು ತಡೆಗಟ್ಟಲು ಬೇಕಾಗುವ ಟಾನಿಕ್ ಆಗಿದೆ. ಭೃಂಗರಾಜ ತೈಲ ಎಂದು ಹೆಸರಾಗಿದೆ ಇದು ಹಲ್ಲಿಗೆ ಒಳ್ಳೆಯದು. ಆಹಾರದಲ್ಲಿ ರುಚಿಯನ್ನು ಉಂಟುಮಾಡುತ್ತದೆ. ಚರ್ಮರೋಗ, ನೇತ್ರರೋಗ ಮತ್ತು ತಲೆಯ ರೋಗಗಳಲ್ಲಿ ಹಾಗೂ ಯಕೃತ್‌ಕಾರಗಳಲ್ಲಿ ಉಪಯೋಗಿಸಬೇಕು. ಆಮ್ಲ ಪಿತ್ತದಲ್ಲಿ, ವಿಸರ್ಪದಲ್ಲಿ ಇದರ ಬೇರನ್ನು ಉಪಯೋಗಿಸಬೇಕು.

ಗರಿಕೆ ಹುಲ್ಲು

(CYNODONDACTYLON)

ಸಂಸ್ಕೃತ	–	ಶತಪರ್ವಾ
ಹಿಂದಿ	–	ದೂಬ್
ತೆಲಗು	–	ದೂರ್ವಾಲು
ತಮಿಳು	–	ಅರುಗ ಮಡಿಲು



CYNODON DACTYLON L.
ಗರಿಕೆ

ಗರಿಕೆಯು ಭಾರತದಲ್ಲೆಲ್ಲಾ ಬೆಳೆಯುತ್ತದೆ. ಇದರ ಬೇರು ಮತ್ತು ಭೂಮಿಯ ಮೇಲೆ ಬರುವ ಹಸಿರು ಭಾಗವನ್ನು ಸಹ ಉಪಯೋಗಿಸುತ್ತಾರೆ. ಗರಿಕೆಯಲ್ಲಿ ಮುಖ್ಯವಾಗಿ ಮೂರು ವಿಧಗಳುಂಟು.

೧. ನೀಲಗರಿಕೆ ೨. ಬಿಳಿ ಗರಿಕೆ ೩. ಗಂಡ ಗರಿಕೆ

ಗರಿಕೆಯಲ್ಲಿ ಒಗರು,ಕಹಿ, ಸಿಹಿ ರುಚಿಯೂ, ಶೀತ ವೀರ್ಯವೂ ಇವೆ. ಪಿತ್ತ, ಬಾಯಾರಿಕೆ, ಬಾಯಿಯಲ್ಲಿ ರುಚಿ ಇಲ್ಲದಿರುವುದು, ಮೈಉರಿ, ಹಾಗೂ ಆಯಾಸ ಕಫ, ವಾತ ಮತ್ತು ಜ್ವರ, ಮುಂತಾದವುಗಳ ನಿವಾರಣೆಗಾಗಿ ಇದರ ಉಪಯೋಗವಾಗುತ್ತದೆ.

ನೀಲಿ ಗರಿಕೆಯಲ್ಲಿ ಸಿಹಿ ಕಹಿ ರಸಗಳು ಶೀತ ಗುಣಗಳು ಇವೆ. ಬಾಯಿಯಲ್ಲಿ ರುಚಿ ಉಂಟು ಮಾಡುತ್ತದೆ. ಭೇದಿಯಾಗುವುದು, ರಕ್ತ ಪಿತ್ತ, ಕಫ, ವಾತ ಮತ್ತು ಜ್ವರ ಬಾಯಾರಿಕೆ ಪಿತ್ತ ರಕ್ತ ಈ ರೋಗಗಳನ್ನು ಸಹ ಗುಣ ಮಾಡುತ್ತದೆ.

ಬಿಳಿ ಗರಿಕೆಯಲ್ಲಿ ಸಿಹಿ ಕಹಿ ರಸವೂ ಶೀತ ಗುಣವೂ ಇದೆ. ವಾಂತಿ, ಮಲದಲ್ಲಿ ಕಫ ಹೋಗುವುದು, ಕೆಮ್ಮು, ಅರುಚಿ, ಮೈಉರಿ, ಬಾಯಾರಿಕೆ ಇವುಗಳನ್ನು ನಿವಾರಿಸುತ್ತದೆ. ಇದರ ಸ್ವರಸವನ್ನು ಜೇನು ಸೇರಿಸಿ ಉಪಯೋಗಿಸಿದರೆ ಮೇಲಿನ ರೋಗಗಳು ನಿವಾರಣೆಯಾಗುತ್ತವೆ. ಗಂಡ ಗರಿಕೆಯಲ್ಲಿ ಕಹಿ, ಸಿಹಿ ಒಗರು ರುಚಿಯೂ, ಶೀತ ಗುಣವೂ ಇದೆ. ಇದರ ಉಪಯೋಗದಿಂದ ಬಾಯಾರಿಕೆ, ಮೈಉರಿ, ಚರ್ಮರೋಗ, ಜ್ವರ, ವಾಂತಿ ಈ ರೋಗಗಳು ವಾಸಿಯಾಗುತ್ತದೆ. ಮೂಗಿನಲ್ಲಿ ರಕ್ತಬರುತ್ತಿದ್ದಾಗ ಗರಿಕೆಯ ರಸವನ್ನು ಮೂಗಿಗೆ ಬಿಟ್ಟರೆ ಆಗ ರಕ್ತ ನಿಲ್ಲುತ್ತದೆ. ವಿಸರ್ಗದಲ್ಲಿ ಗರಿಕೆಯಿಂದ ತಯಾರಿಸಿದ ತುಪ್ಪವನ್ನು ಹಚ್ಚಬಹುದು. ಕಜ್ಜಿ ಮುಂತಾದ ಚರ್ಮ ರೋಗಗಳಲ್ಲಿಯೂ ಸಹ ಗರಿಕೆಯ ತೈಲದಿಂದ ಅಭ್ಯಂಗ ಮಾಡಿಸಬಹುದು. ಸ್ತ್ರೀಯರಲ್ಲಿ ಮಾಸಿಕ ಸ್ರಾವವಾಗದಿದ್ದಾಗ ಇದರ ರಸವನ್ನು ಕುಡಿಸಿದರೆ ಕೂಡಲೇ ಸ್ರಾವವಾಗುತ್ತದೆ. ಮೂತ್ರಾಘಾತದಲ್ಲಿ ಇದರ ಬೇರಿನ ಕಷಾಯಕ್ಕೆ ಸಕ್ಕರ, ಜೇನು ಸೇರಿಸಿ ಕೊಡಬೇಕು.

ಗರಿಕೆಯು ಮನೆಯಲ್ಲಿಯೇ ಸಿಕ್ಕುತ್ತದೆ. ಅದರ ಉಪಯೋಗವು ಬಹಳವಿದೆ.

ಗುಗ್ಗುಲು (ಕಾಂತಗಣ)

(COMMIFORAMUKUL)

ಸಂಸ್ಕೃತ	–	ಗುಗ್ಗುಲು
ಹಿಂದಿ	–	ಗುಗಲ್
ತೆಲುಗು	–	ಮೈಷಾಕ್ಷಿ ಗುಂಬುಲು
ತಮಿಳು	–	ಗುಕ್ಕಲು
ಮಲಯಾಳಂ	–	ಗುಗ್ಗುಲು
ಗುಜರಾತಿ	–	ಗುಗಲ್
ಇಂಗ್ಲಿಷ್	–	ಗಮ್–ಗುಗುಗಲ್ ಅಥವಾ ಇಂಡಿಯನ್ ಬೆಡಿಲಿಯಮ್



ರಾಸಾಯನಿಕ ಸಂಘಟನೆ: ಇದರಲ್ಲಿ ಆರ್ದ್ರತೆ (ತೇವಾಂಶ), ಆವಿಯಾಗುವ ತೈಲ, ರಾಳ, ಗೋಂದ್ (ಅಂಟು) ಅಂಶಗಳು ಇರುತ್ತದೆ.

ಗುಣಗಳು : ರಸ : ಕಹಿ ಮತ್ತು ಖಾರ, ಗುಣ: ಹಗುರ, ರೂಕ್ಷ, ತೀಕ್ಷ್ಣ, ಸೂಕ್ಷ್ಮ, ಸರ, ಸುಗಂಧ (ಹಳೇಗುಗ್ಗಳ) ಸ್ನಿಗ್ಧ (ಎಣ್ಣೆಯರೀತಿ) ಅಂಟು (ಹೊಸಗುಗ್ಗಳ) ವೀರ್ಯ : ಉಷ್ಣ, ವಿಪಾಕ : ಖಾರ (ಕಟು) ಪ್ರಭಾವ ತ್ರಿದೋಷವನ್ನು ನಾಶ ಮಾಡುತ್ತದೆ.

ಕರ್ಮ ಮತ್ತು ಉಪಯೋಗಗಳು: ವಾತ ಮತ್ತು ಕಫ ನಾಶಕ

ಬಾಹ್ಯ: ಇದು ಊತವನ್ನು ಕಡಿಮೆ ಮಾಡುತ್ತದೆ, ನೋವನ್ನು ಕಡಿಮೆ ಮಾಡುತ್ತದೆ. ಗಾಯವನ್ನು ಶುದ್ಧಮಾಡಿ ಮಾಯಿಸುತ್ತದೆ. ಜಂತು ನಾಶಕವು ಹೌದು

೧. ಆದಕಾರಣ ಇದನ್ನು ಸಂಧಿವಾತ, ಆಮವಾತ,ಗಂಡಮೂಲ ಮುಂತಾದ ಊತಗಳ ಮೇಲೆ ಲೇಪನದ ರೀತಿ ಹಚ್ಚುತ್ತಾರ.

೨. ಗಾಯದ ಮೇಲೆ ಕ್ರಿಮಿಗಳ ನಾಶಕ್ಕೆ ಇದರ ಧೂಪ ಹಾಕುತ್ತಾರೆ.

ಅಭ್ಯಂತರ:

೧. ಯಾವುದೇ ರೀತಿಯ ನೋವು ಮತ್ತು ಊತದಲ್ಲಿ

೨. ಲಕ್ವದಲ್ಲಿ

೩. ಹಳೇ ಗುಗ್ಗಳ ಪ್ರಯೋಗದಿಂದ ಮಧುಮೇಹದಲ್ಲಿ (ಸಕ್ಕರೆ ಕಾಯಿಲೆ)

೪. ದೇಹದ ಸ್ಥೂಲತೆಯನ್ನು ಕಡಿಮೆಯಮಾಡುವಲ್ಲಿ


ಇದರ ಸ್ವರೂಪ : ಇದು ಪೊದೆಯ ರೀತಿ ಬೆಳೆಯುತ್ತದೆ. ೧.೨–೧.೮ ಮೀಟರ್ ಉದ್ದ ಇರುತ್ತದೆ.

ಇದು ಅತಿಯಾಗಿ ಉಪಯೋಗಿಸಿದಲ್ಲಿ ಯಕೃತ್ ಮತ್ತು ಶ್ವಾಸಕಶಗಳಿಗೆ ಅಪಾಯಕಾರಿ.

ಶ್ರೀಗಂಧ (ಚಂದನ)

SANTALUM ALBUM

ಸಂಸ್ಕೃತ	–	ಶ್ರೀಗಂಧ, ಚಂದನ
ಹಿಂದಿ	–	ಸಫೇದ್ ಸಾಂಡಲ್
ತೆಲುಗು	–	ಗಂಧವು ಚೆಕ್ಕ
ತಮಿಳು	–	ಚಂದನ ಕಟ್ಟೈ
ಮಲಯಾಳಂ	–	ಚಂದೇನ ಮರಂ
ಮರಾಠಿ	–	ಸಫೇದ್ ಚಂದನ್
ಇಂಗ್ಲಿಷ್	–	ವೈಟ್ ಸಾಂಡಲ್ ಉಡ್



SANTALUM ALBUM, Linn.
(ಶ್ರೀಗಂಧ, ಚಂದನ)

ಈ ಚಿಕ್ಕ ಮರವು ಕರ್ನಾಟಕದ ದಕ್ಷಿಣ ಭಾಗಗಳಲ್ಲಿ ತಮಿಳುನಾಡು ಮತ್ತು ಕೇರಳಗಳಲ್ಲಿ ಬಹಳ ಬೆಳೆಯುವುದು. ಇದರ ಕಾಷ್ಟವನ್ನು ಔಷಧಿಯಾಗಿ ಉಪಯೋಗಿಸಲ್ಪಡುವುದು. ಇದನ್ನು ಎರಡು ವಿಧವಾಗಿ ಉಪಯೋಗಿಸಬಹುದು. ಕಾಷ್ಟವನ್ನು ಯಾವುದೇ ದ್ರವದೊಂದಿಗೆ ತೇದು ಮತ್ತು ಅದರ ಕಷಾಯ ರೂಪದಲ್ಲಿ.

ರಾಸಾಯನಿಕ ಸಂಘಟನೆ: ಇದರ ವಿಶೇಷವಾದ ಸುವಾಸನೆಯನ್ನು ಇದರಲ್ಲಿರುವ "ಸಾಂಟಲಾಲ್" ಎಂಬ ತೈಲದಿಂದ ಪಡೆದಿರುತ್ತದೆ.

ಗುಣಗಳು: ಇದರ ಮುಖ್ಯ ರಸ ಕಹಿ, ಇದರ ವೀರ್ಯ ಶೀತ, ಬೇರು ಗುಣಗಳು ಲಘು, ರೂಕ್ಷ, ಮತ್ತು ಪಿತ್ತವನ್ನು ಕಡಿಮೆ ಮಾಡುತ್ತವೆ.

ಈ ಸುವಾಸನೆ ಉಳ್ಳ ಕಾಷ್ಟವನ್ನು ಪೂಜೆ ಸಾಮಾಗ್ರಿಗಳೊಂದಿಗೆ ಉಪಯೋಗಿಸಲ್ಪಡುವುದು.

ಉಪಯೋಗಗಳು: ಜ್ವರದಲ್ಲಿ ಇದರ ಪಟ್ಟು ಹಣೆಯ ಮೇಲೆ ಹಾಕುವುದರಿಂದ ಉಷ್ಣತೆ ತಗ್ಗುವುದು. ಇದರ ಕಷಾಯ ಪಿತ್ತದಿಂದ ಉಂಟಾಗುವ ಜ್ವರವನ್ನು ತಗ್ಗಿಸುತ್ತದೆ. ಚರ್ಮರೋಗಗಳಲ್ಲಿ ಇದರ ಪಟ್ಟು ಬಹಳ ಉಪಯೋಗಕಾರಿ. ಚರ್ಮದಲ್ಲಿರುವ ಕಲೆಗಳನ್ನು ಹೋಗಲಾಡಿಸುವುದಕ್ಕೆ ಇದನ್ನು ಮೇಲಿಂದ ಮೇಲೆ ಹಚ್ಚಬೇಕು.

ನೀರಡಿಕೆ ಮತ್ತು ದಾಹವನ್ನು ನಿವಾರಿಸಲು ಇದರ ಚೂರ್ಣವನ್ನು ಎಳನೀರಿನೊಡನೆ ತೆಗೆದುಕೊಳ್ಳುವುದು.

ಚರ್ಮದ ಮೇಲೆ ಉರಿ, ಕಜ್ಜಿ ಇದ್ದಲ್ಲಿ ಚಂದನ ತೈಲ ಬಹಳ ಉಪಯೋಗಕಾರಿ. ಇದರ ಕಷಾಯವು ಮೂತ್ರ ಮಾರ್ಗದಲ್ಲಿ ಉರಿಯನ್ನು ನಿವಾರಿಸುತ್ತದೆ. ಇದರ

ಚೂರ್ಣವನ್ನುಹಚ್ಚಿಕೊಂಡರೆ ಅತಿ ಬೆವರುವಿಕೆ ಮತ್ತು ದುರ್ಗಂಧವನ್ನು ಹೋಗಲಾಡಿಸುವುದು.

ಭೇದಿಯನ್ನು ತಡಯಲು ಇದೊಂದು ಸುಲಭ ವಿಧಾನ. ಶ್ರೀಗಂಧದ ಕಷಾಯ, ಸಮ ಪ್ರಮಾಣ ಅಕ್ಕಿತೊಳೆದ ನೀರು ರುಚಿಗೆಬೇಕಾದಷ್ಟು ಕಲ್ಲುಸಕ್ಕರೆ ಮತ್ತು ಜೇನುತುಪ್ಪ.

ದೇಹದ ಯಾವುದೇ ಭಾಗದಲ್ಲಿ ಊತ ಇದ್ದಲ್ಲಿ ಇದರಪಟ್ಟು ಊತವನ್ನು ತಗ್ಗಿಸುತ್ತದೆ.

ಯೋಗಗಳು: ಚಂದನ ತೈಲ – ಚರ್ಮ ರೋಗಗಳು, ಚರ್ಮದಲ್ಲಿ ಉರಿ ದುರ್ಗಂಧ ಚಂದನಾಸವ – ದೇಹದಲ್ಲಿ ಪಿತ್ತ ಮತ್ತು ಉಷ್ಣ ಕಡಿಮೆ ಮಾಡಲು ಉಪಯೋಗಿಸಬೇಕು.

ಜಂಬು ನೇರಳೆ

(SYZYGIUM JAMBOLANA)

ಸಂಸ್ಕೃತ	–	ಜಂಬೂ, ಫಲೇಂದ್ರ
ಹಿಂದಿ	–	ಜಾಮೂನ್
ತೆಲಗು	–	ನೇರೇಡ್
ತಮಿಳು	–	ಶಂಬು
ಮಲಯಾಳಂ	–	ರಾಮಜಂಬೂಕ್



ಜಂಬು ನೇರಳೆಗೆ ರೋಹಿಣಿ ನಕ್ಷತ್ರ ವೃಕ್ಷ ಎಂದೂ ಹೆಸರಿದೆ, ಜಂನೇರಳೆ ಎಂದೂ ಕರೆಯುತ್ತಾರೆ. ಇದು ಎಲ್ಲಾ ಕಡೆಯಲ್ಲೂ ಸಿಗುತ್ತದೆ. ಇದರಲ್ಲಿ ನಾನಾ ವಿಧಗಳಿವೆ. ೧ ಮಹಾಪಾಲಾ, ೨. ನದೀ ಜಂಬೂ, ೩. ಕ್ಷುದ್ರ ಫಲಾ, ೪. ಹ್ರಸ್ವಫಲಾ, ೫. ಗೋಲಾಕಾರಫಲಾ, ೬. ನಾಯಿ ನೇರಳೆ.

ಜಂನೇರಳೆಯಲ್ಲಿ ಸಿಹಿ, ಹುಳಿ, ಒಗರು ರುಚಿಗಳಿವೆ. ಕಫ ವಾತ ರೋಗಗಳನ್ನು ಗುಣ ಪಡಿಸುತ್ತದೆ. ಸಕ್ಕರೆಯ ರೋಗದಲ್ಲಿ ಜಂಬು ನೇರಳೆಯ ಬೀಜವನ್ನಾಗಲೀ, ಅಥವಾ ಎಲೆಯನ್ನಾಗಲಿ ಕಷಾಯವನ್ನಾಗಿ ಮಾಡಿ ೫ ರಿಂದ ೧೫ ಗ್ರೈನ್ ಪ್ರಮಾಣದಲ್ಲಿ ದಿನಕ್ಕೆರೆಡು ಬಾರಿ ಜೇನು ತುಪ್ಪದಲ್ಲಿ ತೆಗೆದುಕೊಳ್ಳಬೇಕು. ಜಂಬು ನೇರಳೆಯನ್ನು ಉಪಯೋಗಿಸುವುದರಿಂದ ಮೈ ಉರಿ, ಗಂಟಲಿನ ನೋವು, ಮೈ ಒಣಗಿರುವುದು. ಕ್ರಿಮಿರೋಗ, ದಮ್ಮು, ಭೇದಿ ಮುಂತಾದವುಗಳು ಗುಣವಾಗುತ್ತದೆ.

ಜಂನೇರಳೆಯು ಒರಟಾಗಿರುತ್ತದೆ. ಕಫ ಪಿತ್ತದಿಂದ ಬರುವ ಭೇದಿಯನ್ನು ನಿಲ್ಲಿಸುತ್ತದೆ. ರಕ್ತ ದೋಷವನ್ನು ಸಹ ನಿವಾರಿಸುತ್ತದೆ. ಮಹಾ ಫಲವುಳ್ಳ ಜಂನೇರಳೆಯು ಸಿಹಿರುಚಿ ಭಾರ ಗುಣವನ್ನು ಹೊಂದಿದೆ. ಇದರ ಹಣ್ಣು ಹುಳಿ, ಸಿಹಿ ರುಚಿಗಳನ್ನು ಶೀತ ವೀರ್ಯವನ್ನು ಹೊಂದಿದೆ. ಮಲಸ್ತಂಭವನ್ನು ಹೊಟ್ಟೆಯುಬ್ಬರವನ್ನೂ ಉಂಟು ಮಾಡುತ್ತದೆ. ಒಟ್ಟಿನಲ್ಲಿ ಜಂನೇರಳೆಯಲ್ಲಿ ಮಲವನ್ನು ನಿಲ್ಲಿಸುವ ಮೂತ್ರವನ್ನು ಕಡಿಮೆ ಮಾಡುವ, ಕಫ ಪಿತ್ತ ರೋಗಗಳನ್ನು ನಿವಾರಿಸುವ ಗುಣವಿದೆ.

ಜೇನು ತುಪ್ಪ
(HONEY)

ಸಂಸ್ಕೃತ	–	ಮಾಕ್ಷಿಕ, ಮಧು
ಹಿಂದಿ	–	ಶಹದ್
ತೆಲಗು	–	ತೇನಿ
ತಮಿಳು	–	ತೇನ
ಮಲಯಾಳಂ	–	ಮಧಕ

ಜೇನುತುಪ್ಪದಲ್ಲಿ ಸಿಹಿ ರುಚಿಯು ಪ್ರಧಾನವಾಗಿಯೂ, ಒಗರು ರುಚಿಯು ಅನುರಸವಾಗಿಯೂ ಇವೆ. ಇದು ಹಸಿವೆಯನ್ನು ಹೆಚ್ಚಿಸುತ್ತದೆ. ಕೇವಲ ಇದೊಂದನ್ನೆ ತಣ್ಣೀರಿನಲ್ಲಿ ಸೂಕ್ತ ಪ್ರಮಾಣದಲ್ಲಿ ಸೇವಿಸಿದರೆ ದಪ್ಪವಾಗಿರುವವರು ಸಣ್ಣಗಾಗುವರು. ಶರೀರಕ್ಕೆ ಬಲವನ್ನು ಕೊಡುತ್ತದೆ. ಗಾಯಕ್ಕೆ ಇದನ್ನು ಹಚ್ಚಿದರೆ ಗಾಯ ಮಾಯುತ್ತದೆ. ಮುರಿದ ಮೂಳೆಗಳನ್ನು ಸೇರಿಸುತ್ತದೆ.ಕಣ್ಣಿಗೆ ಹಿತವಾದದ್ದು.ವಾತಾದಿ ತ್ರಿದೋಷಗಳನ್ನೂ ನಿವಾರಿಸುತ್ತದೆ. ದಮ್ಮು, ಕೆಮ್ಮು, ಭೇದಿ ರಕ್ತಪಿತ್ತ, ಕ್ರಿಮಿ, ಬಾಯಾರಿಕೆ ಇವುಗಳನ್ನು ನಿವಾರಿಸುತ್ತದೆ.

ಕುರುಗಳನ್ನು ಒಡೆಸಲು ಅಳಲೇಕಾಯಿ ಮತ್ತು ಜೇನುತುಪ್ಪವನ್ನು ಸೇರಿಸಿ ಹಚ್ಚಿದರೆ ಒಂದೆರಡು ದಿನಗಳಲ್ಲಿ ಕುರುವು ಒಡೆಯುತ್ತದೆ. ಭೇದಿಯಾಗುವುದು, ಮಧ್ಯೆ ಮಧ್ಯೆ ಮಲಬಂಧ, ಹೊಟ್ಟೆನೋವು ಬರುವುದು ಆಗುವಾಗ ''ಮಧ್ವಾರಿಷ್ಟ'' ವನ್ನು, ಜಾಸ್ತಿ ಮೂತ್ರ ವಾಗತ್ತಿದ್ದಾಗ ಮದ್ವಾವನ್ನೂ ಉಪಯೋಗಿಸಬಹುದು. ಬಾಯಿಹುಣ್ಣು, ನಾಲಗೆ ಹುಣ್ಣಿನಲ್ಲಿ ಇದನ್ನು ಮುಕ್ಕಳಿಸಿದರೆ ಗುಣವಾಗುತ್ತದೆ.


ಗಾಯಗಳಿಗೆ ತುಪ್ಪವನ್ನು ಜೇನಿನೊಡನೆ ವಿಷಮ (ಸಮವಲ್ಲದ) ಪ್ರಮಾಣದಲ್ಲಿ ಬೆರೆಸಿ ಹಚ್ಚಿದರೆ ಬೇಗ ಮಾಯುತ್ತದೆ.

ಮಕ್ಕಳಿಗೆ ಔಷಧಿ ಕೊಡುವಾಗ ಇದನ್ನು ಅನುಪಾನವಾಗಿ ಬಳಸುತ್ತಾರೆ. ಸುಲಭವಾಗಿ ಮನೆಯಲ್ಲಿ ಸಿಗುವ ಜೇನನ್ನು ಮೇಲ್ಕಂಡ ರೋಗಗಳಲ್ಲಿ ಬಳಸಿ ಗುಣ ಹೊಂದಬಹುದು.

ತಾರೇಕಾಯಿ

(TERMINALIA BELIRICA)

ಸಂಸ್ಕೃತ	–	ಬಿಭೀತಕೀ
ಹಿಂದಿ	–	ಬಹೇಡಾ
ತೆಲಗು	–	ತಾಡೀ
ಬೆಂಗಾಲಿ	–	ಬಯಡಾ
ಇಂಗ್ಲಿಷ್	–	ಬೆಲ್ಲಿಂಕ್ ಮೈರೋಬಲಾನ್



A—TERMINALIA CITRINA, ROXB. B—T. BELERICA, ROXB. ತಾರೆಕಾಯಿ.

ಇದರ ಸ್ವರೂಪ : ಇದು ದೊಡ್ಡ ಮರವಾಗಿ ಬೆಳೆಯುತ್ತದೆ. ಎಲೆಗಳು ಸ್ವಲ್ಪ ವೃತ್ತಾಕಾರವಾಗಿರುತ್ತದೆ. ಮತ್ತೆ ಕಾಯಿಯು ಗೊಂಚಲಾಗಿ ಬಿಡುತ್ತದೆ ವೃತ್ತಾಕಾರವಾಗಿರುತ್ತದೆ.

ಉಪಯೋಗಿಸುವ ಅಂಗ : ಕಾಯಿ

ರಾಸಾಯನಿಕ ಸಂಘಟನೆ : ಇದರಲ್ಲಿ ಟ್ಯಾನಿಕ್ ಶೇಕಡ ೨೧.೪ ಬಿ–ಸಿಟೋಸ್ಟೆರಾಲ್ ಗ್ಯಲಿಕ್ ಆಸಿಟ್, ಚೆಬುಲೇಜಿಕ್ ಆಸಿಟ್, ಗ್ಲೂಕೋಸ್, ಗ್ಯಾಲಕ್ಟೋಸ, ಫ್ರಕ್ಟೋಸ್, ರೈಮನೋಜ್ ಮುಂತಾದವುಗಳು ಇರುತ್ತದೆ.

ಗುಣಗಳು : ರಸ–ಒಗರು, ಗುಣ–ರೂಕ್ಷ, ಒರಟು ಮತ್ತು ಹಗುರ, ವೀರ್ಯ–ಉಷ್ಣ, ವಿಪಾಕ–ಮಧುರ (ಸಿಹಿ), ದೋಷಕರ್ಮ ತ್ರಿದೋಷಹರ

ಉಪಯೋಗಗಳು :

ಬಾಹ್ಯ : ಊತ ಮತ್ತು ನೋವು ಇದ್ದರೆ ಆ ಜಾಗದಲ್ಲಿ ಇದರ ಫಲದ (ಕಾಯಿಯ) ಲೇಪ ಮಾಡುತ್ತಾರೆ. ಬೀಜದಲ್ಲಿ ತಯಾರಿಸಿದ ಎಣ್ಣೆಯನ್ನು ಹಾಕುತ್ತಾರೆ ಎಣ್ಣೆಯನ್ನು ಚರ್ಮ ರೋಗದಲ್ಲಿ ಬಿಳಿ ಕೂದಲು ಇರುವವರಲ್ಲಿ ಉಪಯೋಗಿಸುತ್ತಾರೆ.

ಪೆಟ್ಟು ಆದ ನಂತರ ಗಾಯದಿಂದ ಬರುವ ರಕ್ತ ಸ್ರಾವವನ್ನು ಇದರ ಚೂರ್ಣ ನಿಲ್ಲಿಸುತ್ತದೆ.

ಅಭ್ಯಂತರ : ಸಾಮಾನ್ಯವಾಗಿ ದೌರ್ಬಲ್ಯದಲ್ಲಿ ವಿಶೇಷತಃ ರಸ, ರಕ್ತ, ಮಾಂಸ ಮತ್ತೆ ಮೇಧ (ಕೊಬ್ಬು) ವಿಕಾರಗಳಲ್ಲಿ ಉಪಯೋಗಿಸುತ್ತಾರೆ. ಅರ್ಧಪಕ್ವವಾದ ಫಲ (ಕಾಯಿಯು) ಮಲಬದ್ಧತೆಯಾದಲ್ಲಿ ಮತ್ತೆ ಪಕ್ವವಾದ ಒಣಗಿದ ಫಲವು ಅತಿಸಾರ (ಭೇದಿ) ಪ್ರವಾಹಿಕಾದಲ್ಲಿ ಉಪಯೋಗಿಸುತ್ತಾರೆ. ಒಂದು ಬೀಜ ಪ್ರತಿ ದಿನವೂ ಸೇವಿಸುತ್ತಿದ್ದರೆ, ಕ್ಲೈಬ್ಯ (ನಿಶ್ಯಕ್ತಿ) ರೋಗದಲ್ಲಿ ಉಪಯೋಗವಾಗುತ್ತದೆ. ಇದು ಮೃದು ವಿರೇಚಕವೂ ಹೌದು (Laxative)

ಕಲ್ಪಗಳು : ತ್ರಿಫಲಾ ಚೂರ್ಣ ೫ ಗ್ರಾಂ–೧೦ ಗ್ರಾಂ ರಾತ್ರಿ ಮಲಗುವಾಗ ೧ ಲೋಟ ಹಾಲಿನೊಡನೆ.

ತೊಂಡೆಕಾಯಿ (ಬಿಂಬೀ)

(COCCINIA GRANDIS)

ಸಂಸ್ಕೃತ	–	ಬಿಂಬೀ
ಹಿಂದಿ	–	ಕುಂದರೂ
ತೆಲುಗು	–	ದೊಂಡಾಕಾಯಿ
ತಮಿಳು	–	ಕೊಬಯಿಕಾಯಿ
ಮಲಯಾಳಂ	–	ಗೋಡೀ ತೊಂಡಲೀ



ಇದು ಭಾರತದ ಎಲ್ಲಾ ಭಾಗಗಳಲ್ಲೂ ಸಾಮಾನ್ಯವಾಗಿ ಕಂಡು ಬರುವುದು. ರಾಸಾಯನಿಕವಾಗಿ ಇದರ ಮೂಲದಲ್ಲಿರಾಳ,ಕ್ಷಾರ, ಸಕ್ಕರೆ, ಅಂಟು, ಮೇದಸ್ಸು ಕಾರ್ಬೋನಿಕ್ ಆಮ್ಲ ಮೊದಲಾದ ೧೬ ಅಂಶಗಳಿವೆ.

ಇದು ರಸದಲ್ಲಿಕಹಿಯಾಗಿಯೂ, ಗುಣದಲ್ಲಿ ಲಘು, ರೂಕ್ಷ ಹಾಗೂ ತೀಕ್ಷ್ಣವಾಗಿದೆ. ಇದರ ಕಾಯಿಯನ್ನು ಬಾಯಿಹುಣ್ಣಿನಲ್ಲೂ, ಪತ್ರ ಸ್ವರಸವನ್ನು ವ್ರಣದಲ್ಲಿ ಬಳಸುತ್ತಾರೆ.


ಅಭ್ಯಂತರ : ಹೊಟ್ಟೆಗೆ ಇದನ್ನು ಅಗ್ನಿಮಾಂಧ್ಯಂ, ಕಾಮಾಲೆ, ರಕ್ತವಿಕಾರ ನೆಗಡಿ, ಕೆಮ್ಮು, ಉಬ್ಬಸ, ಯಕೃತ್ ವಿಕಾರ, ಪ್ರಮೇಹ ವಿಶೇಷವಾಗಿ ಮಧುಮೇಹದಲ್ಲಿ ಬಳಸುತ್ತಾರೆ.

ಇದರ ಪಾತ್ರ ಹಾಗೂ ಮೂಲ ಔಷಧಿಯಲ್ಲಿ ಬಳಸುವ ಅಂಗಗಳಾಗಿವೆ. ಇದರ ಸ್ವರಸವನ್ನು ಸೇವಿಸಬಹುದು. (೨ -- ೬ ಚಮಚ)

ತೆಂಗು (ನಾರೀ ಕೇಲ)

(COCOS NUCIFERA)

ಸಂಸ್ಕೃತ	–	ನಾರಿಕೇಲಾ	ತಮಿಳು	–	ತೆನ್ನಮರಂ
ಹಿಂದಿ	–	ನರಿಯಲ್	ಮಲಯಾಳಂ	–	ನಾರಳೀ
ತೆಲಗು	–	ನಾರಿಕೇಳಮು			



COCOS NUCIFERA, Linn.
ತೆಂಗು


ರಾಸಾಯನಿಕವಾಗಿ, ಇದರ ಫಲದಲ್ಲಿ ಮೇಧಸ್ಸು, ಕ್ಷಾರ, ತಾಲಶರ್ಕರವಿದೆ. ತೆಂಗಿನ ತುರಿಯ ರಸದಲ್ಲಿಶರ್ಕರಾ ಅಂಟು ಟಾರ್ಟರಿಕ್ಸ್ ಆಮ್ಲ,ಖನಿಜ ಮತ್ತು ಜಲ ಇದೆ. ಇದರ ಪತ್ರ ಭಸ್ಮದಲ್ಲಿ ಪೊಟ್ಯಾಶ್ ಅಧಿಕಾಂಶದಲ್ಲಿದೆ. ಇದರ ತೈಲದಲ್ಲಿ ಲಾರಿಕ್, ಮಿರಿಸ್ಟಿಕ್, ಪಾಮಿಟಿಕ್, ಸ್ಟಿಯರಿಕ್ ಆಮ್ಲ ಮುಂತಾದ ಅಂಶಗಳಿವೆ.

ಇದರ ಮಧುರವಾದ ರಸದಿಂದ ಕೂಡಿದ್ದು, ಗುರು, ಸ್ನಿಗ್ಧ ಗುಣಗಳಿಂದ ಕೂಡಿದೆ. ಎಳನೀರು ತ್ವಚೆಗೆ ವರ್ಣವನ್ನುಕೊಡುವುದು, ದಾಹ ಶಮನ ಮಾಡುವುದು, ಎಣ್ಣೆಯು ಕೇಶ ವರ್ಧನೆ ಮಾಡುವುದು, ಚರ್ಮ ವಿಕಾರದಲ್ಲಿಯೂ ವ್ರಣರೋಪಣವಾಗಿ ಕೆಲಸ ಮಾಡುವುದು. ಅಭ್ಯಂತರವಾಗಿ ಬಿಕ್ಕಳಿಕೆಯಲ್ಲಿ, ಪಿತ್ತ ಶಾಮಕವಾಗಿಯೂ, ಶೂಲೆ ಶಮನವಾಗಿಯೂ, ಜ್ವರದಲ್ಲಿಯೂ ಬಳಸುತ್ತಾರೆ. ಇದರ ತಾಜಾ ಫಲವುದೇಹವನ್ನು ಪುಷ್ಟಿ ಮಾಡುತ್ತದೆ. ಪಕ್ವ ಫಲವು ಉಷ್ಣವಾಗಿರು ವುದರಿಂದ ಶುಕ್ರವರ್ಧನೆ ಹಾಗೂ ಆರ್ತವಜನಕವಾಗಿ ಮಾಡುತ್ತದೆ. ಇದರ ಪುಷ್ಪ, ತೈಲ, ಕ್ಷಾರ ಫಲ ಹಾಗೂ ಮೂಲವನ್ನು ಔಷಧರೂಪದಲ್ಲಿ ಬಳಸುವರು. ಇದರ ಫಲ ಚೂರ್ಣವನ್ನು ೨–೪ ಚಮಚ ಪ್ರಮಾಣದಲ್ಲಿ, ತೈಲವನ್ನು ೧೦ ರಿಂದ ೨೦ ಬಿಂದು (drops) ಪ್ರಮಾಣದಲ್ಲಿ ಸೇವಿಸಬೇಕು. ಇದರ ಕ್ಷಾರವನ್ನು ೧.೨೫ ಮಿ.ಗ್ರಾಂ ಪ್ರಮಾಣದಲ್ಲಿ ಸೇವಿಸಬೇಕು.

ತುಲಸಿ

(OCIMUM SANCTUM)

ಸಂಸ್ಕೃತ	–	ತುಳಸೀ, ವಿಷ್ಣುಪ್ರಿಯ	ತಮಿಳು	–	ತುಳಸೀ
ಹಿಂದಿ	–	ತುಳಸಿ	ಮರಾಠಿ	–	ತುಳಸೀ
ತೆಲಗು	–	ತುಳಸೀ	ಇಂಗ್ಲಿಷ್	–	ಹೋಲೀಬಾಸಿಲ್



ಇದು ಮನೆಯ ಅಂಗಳದಲ್ಲಿ ಬೆಳೆಯುವಂಥ ಒಂದು ಚಿಕ್ಕ ಗಿಡ. ತುಳಸೀಹಬ್ಬವೆಂದು ಆಚರಿಸಿ ಇದಕ್ಕೆ ಭಕ್ತಿಯಿಂದ ಪೂಜೆ ಮಾಡುತ್ತಾರೆ. ಇದು ವಿಷ್ಣುವಿಗೆ ಬಹಳ ಪ್ರಿಯವಾದ ಗಿಡ.

ಔಷಧಿಯಾಗಿ ಇದರ ರಸ ಮತ್ತು ಬೀಜದ ಚೂರ್ಣವನ್ನು ಉಪಯೋಗಿಸುವುದು.

ಗುಣಗಳು : ಇದರ ರಸ ಕಹಿ ಮತ್ತು ಖಾರ. ಇದರ ಬೇರೆ ಗುಣಗಳು ರೂಕ್ಷತೇ, ಮತ್ತು ಲಘುತ್ವಾ (ಬೇಗ ಜೀರ್ಣವಾಗುತ್ತದೆ).

ರಾಸಾಯನಿಕ ಸಂಘಟನೆ : "ಬಾಸಿಲ್ ಕಾಂಫರ್" ಎನ್ನುವ ತೈಲವೂ ತುಳಸಿಯ ಮುಖ್ಯ ಭಾಗ. ಈ ತೈಲದಲ್ಲಿ "ಟರ್‌ಪೀನ್" ಎಂಬ ಅಂಶವೂ ಇರುತ್ತದೆ.

ಉಪಯೋಗಗಳು : ಎಲೆಗಳ ಕಷಾಯವನ್ನು ಮಲೇರಿಯಾ ಮತ್ತು ಕಾಮಾಲೆ ರೋಗಗಳನ್ನು ನಿವಾರಿಸಲು ಉಪಯೋಗಕಾರಿ.

ಎಲೆಯ ರಸ ನಿಂಬೇಹಣ್ಣಿನ ರಸದೊಂದಿಗೆ ಸೇರಿಸಿ ಇಸುಬು, ಹುಳಕಡ್ಡಿ ಮುಂತಾದ ಚರ್ಮ ರೋಗಗಳನ್ನು ಗುಣಪಡಿಸಬಹುದು.

ಎಲೆಯ ರಸ ೫ ತೊಟ್ಟು ಪ್ರಮಾಣದಲ್ಲಿ ಕಿವಿನೋವು ನಿವಾರಿಸಲು ಉಪಯೋಗಕಾರಿ.

ಇದರ ರಸ ೫–೬ ಚಮಚದಷ್ಟು ಪ್ರಮಾಣದಲ್ಲಿ ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಸೇವಿಸುವುದರಿಂದ ಜಂತುಹುಳು ಮುಂತಾದ ಕ್ರಿಮಿಗಳು ಸಾಯುತ್ತವೆ.

ಈ ಮೇಲೆ ಹೇಳಿದ ಔಷಧಿಯು ಬಹಳ ಕಾಲದಿಂದ ಇರುವ ಜ್ವರವನ್ನು ನಿವಾರಿಸುತ್ತದೆ.


ಇದರ ರಸ, ಸಮ ಪ್ರಮಾಣ ಶುಂಠಿರಸ ಮತ್ತು ಈರುಳ್ಳಿ ರಸ ಜೇನುತುಪ್ಪದೊಡನೆ ಸೇವಿಸಿದರೆ ಕೆಮ್ಮು ಮತ್ತು ದಮ್ಮು ಇತ್ಯಾದಿ ರೋಗಗಳನ್ನು ನಿವಾರಿಸಬಹುದು.

ಮಕ್ಕಳಲ್ಲಿ ವಾಂತಿ ಮತ್ತು ಭೇದಿಯನ್ನುನಿಲ್ಲಿಸಲು ಮೇಲಿಂದ ಮೇಲೆ ಇದರ ಬೀಜ ಹಾಲಿನಲ್ಲಿ ತೇದು ನೆಕ್ಕಿಸಬೇಕು.

ಮಕ್ಕಳಲ್ಲಿ ಹೊಟ್ಟೆನೋವು ನಿವಾರಿಸಲು ತುಳಸೀ ರಸದೊಡನೆ ಮೆಣಸು ಸೇರಿಸಿ ಕೊಡಬೇಕು . ಹಾವಿನ ವಿಷದಿಂದಾಗುವ ಪರಿಣಾಮವನ್ನು ಇದರ ರಸ ಸೇವಿಸಿದಲ್ಲಿ ಸ್ವಲ್ಪ ಮಟ್ಟಿಗೆ ತಗ್ಗಿಸಬಹುದು.

ದ್ರಾಕ್ಷಿ
(VITIS VINIFERH)

ಸಂಸ್ಕೃತ	–	ದ್ರಾಕ್ಷಾ	ತೆಲಗು	–	ದ್ರಾಕ್ಷಾಪಂಡು
ಹಿಂದಿ	–	ಮುನಕ್ಕ	ತಮಿಳು	–	ಕಡಿಮುಂಡಿ



ದ್ರಾಕ್ಷೆ

ದ್ರಾಕ್ಷಿ ಎಂದ ತಕ್ಷಣ ಬಾಯಲ್ಲಿ ನೀರು ಬರುತ್ತದೆ. ದ್ರಾಕ್ಷಿಯನ್ನು ಮನೆಯಲ್ಲಿ ಕೇಸರಿಬಾತ್ ಮಾಡಲು ಖೀರು ಇತ್ಯಾದಿಯಲ್ಲಿ ಉಪಯೋಗಿಸುತ್ತಾರೆ.

ದ್ರಾಕ್ಷಿಯು ಭಾರತ, ಪಂಜಾಬ್, ಕಾಶ್ಮೀರ ಇನ್ನೂ ಮುಂತಾದ ಸ್ಥಳಗಳಲ್ಲಿ ಬೆಳೆಯುತ್ತದೆ. ಇದರ ಹಣ್ಣುಗಳನ್ನು ಉಪಯೋಗಿಸಬೇಕು.

ಇದರ ಸಮೂಲವನ್ನು ಸುಟ್ಟು ಅದರಿಂದ ಕ್ಷಾರ ಅಂದರೆ ಸುಟ್ಟ ಬೂದಿಯನ್ನು –೧೦ ಬಾರಿ ಹೊಸ ನೀರಿನಲ್ಲಿ ಶೋಧಿಸಿ ಉಳಿದ ನೀರನ್ನು ಒಣಗಿಸಿದರೆ ಉಳಿಯುವುದೇ ಕ್ಷಾರ. ಈ ಕ್ಷಾರವು ಪಿತ್ತಾಶಯದಲ್ಲಿ ಉಂಟಾಗುವ ಕಲ್ಲುಗಳನ್ನು ಖಂಡಿತ ನಿವಾರಣೆ ಮಾಡುತ್ತದೆ. ಇದನ್ನು ಒಂದು ವಾರ ಹಾಲು ಅನ್ನ ಸೇವಿಸುತ್ತಾ ೩ ಗ್ರೈನ್ ಪ್ರಮಾಣದಲ್ಲಿ ಉಪಯೋಗಿಸಬೇಕು. ಆಮವಾತ ಅಂದರೆ ಸಣ್ಣ ಸಂಧುಗಳಲ್ಲಿ ನೋವು ಬಂದಾಗ ವಾತ ರೋಗದಲ್ಲಿ ಇದನ್ನು ಉಪಯೋಗಿಸಿ ಗುಣ ಹೊಂದಬಹುದು. ಪಿತ್ತದಿಂದ ಉಂಟಾಗುವ ಉರಿಗಳಲ್ಲಿ ಇದರ ಕಷಾಯ ಮಾಡಿ ಕುಡಿಯುವುದರಿಂದ ಹುಷಾರಾಗುತ್ತದೆ. ಮೃದು ವಿರೇಚಕ (ಸುಖಭೇದಿ), ಬಾಯಿ ಹುಣ್ಣಿನಿಂದ ನರಳುವವರು ಇದರ ಕಷಾಯಕ್ಕೆ ಕಲ್ಲು ಸಕ್ಕರೆ ಸೇರಿಸಿ ಕುಡಿಯಬೇಕು.

ದಾಳಿಂಬೆ (ದಾಡಿಮಾ)

(PUNICA GRANATUM)

ಸಂಸ್ಕೃತ	–	ದಾಡಿಮಾ
ಹಿಂದಿ	–	ಅನಾರ್
ತೆಲಗು	–	ದಡಿಮಾ
ತಮಿಳು	–	ಮದಲಾಯ್
ಮಲಯಾಳಂ	–	ಮಟಾಲಂ

ಉತ್ಪತ್ತಿ ಸ್ಥಾನ : ಇದು ಭಾರತದ ಹೆಚ್ಚಿನ ಭಾಗಗಳಲ್ಲಿ ಬೆಳೆಯುತ್ತದೆ. ಅಲ್ಲದೆ ಆಫ್‌ಘಾನಿಸ್ಥಾನ, ಬಲೂಚಿಸ್ತಾನ, ಇರಾಕ್‌ಗಳಲ್ಲೂ ಕಾಣಸಿಗುತ್ತದೆ.

ಸಸ್ಯದ ವಿವರಣೆ : ದಾಳಿಂಬೆಯು ಚಿಕ್ಕ ಮರವಾಗಿದ್ದು, ಮೃದುವಾದ ಬೂದು ಬಣ್ಣದ ತೊಗಟೆಯನ್ನು ಹೊಂದಿರುತ್ತದೆ.

ಎಲೆಗಳು : ಸುಮಾರು ೨.೫ – ೭.೩ಸಿ.ಎಂ. ಉದ್ದವಾಗಿದ್ದು, ಮೇಲ್ಮೈ ಹೊಳಪುಳ್ಳದ್ದಾಗಿರ್ುತ್ತದೆ.

ಹೂವು – ೩–೮ ಸಿ.ಎಂ. ಉದ್ದ, ಕೇಸರಿ ವರ್ಣ

ಹಣ್ಣು – ೩.೮ – ೭.೫ ಸಿ.ಎಂ (ವ್ಯಾಸ) ದಾಳಿಂಬೆಯ ಸಿಪ್ಪೆಯು ಗಟ್ಟಿಯಾಗಿದ್ದು ಅನೇಕ ಬೀಜಗಳನ್ನು ಒಳಗೊಂಡಿರುತ್ತದೆ. ಬೀಜಗಳು ತೆಳ್ಳನೆಯ ಪಾರದರ್ಶಕವಾದ ಗುಲಾಬಿ ಬಣ್ಣದ ಸಿಹಿ ರಸವಿರುವ ಪದರದಿಂದ ಆವರಿಸಲ್ಪಟ್ಟಿರುತ್ತದೆ.

ರಾಸಾಯನಿಕ ಸಂಘಟನೆ : ಟ್ಯಾನಿಕ್–ಶೇಕಡ ೨೨.೨೫

ಸಕ್ಕರೆ, ಗಮ್ (ಅಂಟು) ಪೆಕ್ಟಿನ್–೧೫ಶೇ.

ಇವುಗಳಲ್ಲದೆ ಪೆಲೆಕ್ಟಿನ್, ಐಸೊಪೆಲಿಕ್ಟಿನ್ ಮತ್ತು ಪ್ಯುನಿಕೊಟ್ಯಾನಿಕ್ ಆಸಿಡ್‌ಗಳನ್ನು ಒಳಗೊಂಡಿದೆ.

ಗುಣಗಳು : ಗುಣ ರಸ – ಸಿಹಿ, ಕಷಾಯ,ಹುಳಿ

ವಿಪಾಕ – ಸಿಹಿ (ಸಿಹಿಲ), ವೀರ್ಯ – ಶೀತ (ಸಿಹಿ ಫಲ)

ಪ್ರಮಾಣ: ಫಲಸ್ವರಸ ೧ ಔನ್ಸ್, ತೊಗಟೆ ಕಷಾಯ ಅಥವಾ ೫ ಚಮಚ

ಪ್ರಯೋಜನಗಳು : ಸಿಹಿಯಾದ ಪಕ್ವವಾದ ಫಲವು ಬಾಯಾರಿಕೆಯನ್ನು ನೀಗಿಸುತ್ತದೆ, ಅಲ್ಲದೆ ಬಲವರ್ಧಕವಾಗಿ ಕಾರ್ಯ ಮಾಡುತ್ತದೆ.

ಇದರ ಮುಖ್ಯ ಪ್ರಯೋಜನ : ಅಪಕ್ವ ಅಥವಾ ಎಳೆ ದಾಳಿಂಬೆಯ ಸಿಪ್ಪೆಯ ಕಷಾಯವು ಭೇದಿ (ಅತಿಸಾರ)ದಲ್ಲಿ(ಎಲ್ಲಾ ತರಹದ ಅತಿಸಾರದಲ್ಲಿ) ತುಂಬಾ ಉಪಯುಕ್ತವಾದುದು. ಹಾಗೆಯೇ ಈ ಕಷಾಯವು ರಕ್ತ ಸ್ರಾವವನ್ನು ನಿಲ್ಲಿಸುತ್ತದೆ.

ಇತರ ಉಪಯೋಗಗಳು : ಜ್ವರ, ನಿಶ್ಯಕ್ತಿ, ಗಾಯದಲ್ಲಿ, ಮೂತ್ರವಿಕಾರಗಳು, ಹೊಟ್ಟೆ ಹಸಿವಿಲ್ಲದಿರುವಿಕೆ, ಬಾಯಿ ರುಚಿಯಿಲ್ಲದಿರುವಿಕೆ, ಹೊಟ್ಟೆ ಉಬ್ಬಿನ ತೊಂದರೆ, ಬಾಯಿಹುಣ್ಣು ಇತ್ಯಾದಿ ತೊಂದರೆಗಳಲ್ಲಿ ದಾಳಿಂಬೆ ಪ್ರಯೋಜನಕಾರಿ. ಆಮ್ಲ ಪಿತ್ತದಲ್ಲಿ ಸಹ ಉಪಯೋಗಿ, ಭೇದಿ ನಿಲ್ಲಿಸಲು ಸಹ ಉಪಯೋಗಿಸಬಹುದು.

ಪ್ರಮುಖ ತಯಾರಿಕೆಗಳು : ದಾಡಿಮಾಷ್ಟಕ ಚೂರ್ಣ, ದಾಡಿಮಾಲಿವಲೇಹ, ದಾಡಿಮಾದಿ ಚೂರ್ಣ.

ದ್ರೋಣಪುಷ್ಪಿ
(LEUCAS CEPHALOTES)

ಕನ್ನಡ	—	ತುಂಬೆಗಿಡ
ಹಿಂದಿ	—	ಡೇಲ್‌ಡೋನಾ
ತೆಲುಗು	—	ಪೆದ್ದತುಮ್ಮಿ
ತಮಿಳು	—	ತುಂಬರಿ
ಮಲಯಾಳಂ	—	ತುಂಬ
ಮರಾಠಿ	—	ತುಂಬ
ಪಂಜಾಬಿ	—	ಗುಲ್‌ಗೋಡ
ಬೆಂಗಾಲಿ	—	ಘಲಗಸೆ



ಇದು ಭಾರತದ ಎಲ್ಲೆಡೆ ಬೆಳೆಯುತ್ತದೆ. ಇದೊಂದು ವರ್ಷಾವಧಿ ಸಸ್ಯ. ಕಾಂಡದ ಮೇಲೆ ಹಾಗೂ ಎಲೆಗಳ ಮೇಲೆ ಸಣ್ಣ ರೋಮಗಳಿರುತ್ತವೆ. ಕಾಂಡಗಳು ಕವಲೊಡೆದಿರುತ್ತವೆ. ಹೂಗಳಿಗೆ ತೊಟ್ಟಿರುವುದಿಲ್ಲ. ಚಿಕ್ಕದಾಗಿರುವ ಹೂಗಳು ಬಿಳಿ ಬಣ್ಣದ್ದಾಗಿರುತ್ತವೆ.

ಹೂವಿನಲ್ಲಿ ಒಂದು ತೈಲ ವಿಶೇಷವಿದೆ ಮತ್ತು ಕ್ಷಾರಾಂಶವಿದೆ.

ಪ್ರಯೋಜ್ಯ ಅಂಗ : ಪಂಚಾಂಗ ಇಡೀ ಗಿಡ ಸಿಹಿ, ಉಪ್ಪು, ಖಾರ ರುಚಿಯುಳ್ಳದಾಗಿದ್ದು, ವಿಪಾಕದಲ್ಲಿ ಮಧುರ, ವೀರ್ಯದಲ್ಲಿ ಉಷ್ಣವಾಗಿದೆ.

ಲಘು ರೂಕ್ಷ ತೀಕ್ಷ್ಣ ಗುಣಗಳಿರುತ್ತವೆ. ಇದು ಕಫ, ವಾತ ಶಾಮಕ.

ಇದು ಮಲವನ್ನು ನೀರನ್ನಾಗಿಸುತ್ತದೆ.


ಪಚನಶಕ್ತಿ ಹೆಚ್ಚಿಸುತ್ತದೆ. ಕ್ರಿಮಿಯನ್ನು ಹೋಗಲಾಡಿಸುತ್ತದೆ. ಇದನ್ನು ವಿಶೇಷವಾಗಿ ಕಾಮಾಲೆ,ಊತ,ದಮ್ಮು, ಕೆಮ್ಮು, ರೋಗಗಳಲ್ಲಿ ಉಪಯೋಗಿಸುತ್ತಾರೆ. ರಸದ ಪ್ರಮಾಣ – ೩೦ ಮಿ. ಲೀಟರ್.

ಇದರ ರಸವನ್ನು ಹಚ್ಚುವುದರಿಂದ ಇಸುಬು, ಚಿಬ್ಬು, ತುರಿಕೆ,ಕಜ್ಜಿ ಮುಂತಾದ ಚರ್ಮ ರೋಗಗಳೂ ಕಡಿಮೆಯಾಗುತ್ತವೆ.

ಅಂಜನ : ಇದರ ಹೂವಿನಿಂದ ತಯಾರಾದ ಅಂಜನವನ್ನು೭ (ಹೂವಿನಿಂದ ರಸ + ಜೇನು) ಬೆಳಗಿನ ಹೊತ್ತು ಕಣ್ಣಿಗೆ ಅಂಜನ ಹಾಕಬೇಕು. ಜಾಂಡಿಸ್ ರೋಗದಲ್ಲಿ ಮಾತ್ರ ಈ ಅಂಜನ ಉಪಯುಕ್ತ. ವೈದ್ಯರ ಸಲಹೆ ಪಡೆದೇ ಉಪಯೋಗಿಸಬೇಕು.

ನೆಗ್ಗಿಲ ಮುಳ್ಳು
(TRIBULUSTERESTRIS)

ಸಂಸ್ಕೃತ	–	ಗೋಕುರಾ
ಹಿಂದಿ	–	ಗೋಖರೂ
ತಮಿಳು	–	ಪಾನ್ನೆರು ಮುಲ್ಲು
ಮಲಯಾಳಂ	–	ನೆರೇಂಗಲ್



TRIBULUS TERRESTRIS, LINN. ನೆಗ್ಗಿಲು ಮುಳ್ಳು

ನೆಗ್ಗಿಲ ಮುಳ್ಳು ನೆಲದ ಮೇಲೆ ಹರಡಿ ಬೆಳೆಯುವ ಸಸ್ಯ. ೨–೩ ಅಡಿ ಬೆಳೆಯುವ ಸಸ್ಯ. ಇದರ ಪತ್ರ ೫–೬ ಇದ್ದು, ತುಂಬಾ ಚಿಕ್ಕದಾಗಿದ್ದು, ವಿವಿಧಾಕಾರದಲ್ಲಿರುವುದು. ಇದರ ಹೂವುಗಳು ನೋಡಲು ತುಂಬಾ ಮನೋಹರವಾಗಿದ್ದು, ಹಳದಿ ಬಣ್ಣದ್ದಾಗಿರುತ್ತದೆ. ಇದರ ಫಲದಲ್ಲಿ ೫ ರಿಂದ ೧೨ ಮುಳ್ಳುಗಳಿರುವುವು. ಈ ಮುಳ್ಳುಗಳು ಮೊನಚಾಗಿರುವುವು. ಇದರ ಮೂಲವು ೪ ರಿಂದ ೬ ಅಂಗುಲ ಉದ್ದವಾಗಿರುವುದು.

ಇದು ಭಾರತದ ಎಲ್ಲಾ ಭಾಗದಲ್ಲಿ ಬೆಳೆಯುವುದು.

ರಾಸಾಯನಿಕವಾಗಿ: ಇದರ ಬೀಜದಲ್ಲಿ ಕ್ಷಾರಾ, ಶೇಕಡ ೩.೫ – ೫ ರಷ್ಟು ತೈಲಾಂಶ, (ಸುಗಂಧ ತೈಲ) ರಾಳ, ಟೈಸಿನ್, ಸೆಪೋನಿನ್ ಇದೆ.

ಇದರ ರಸ ಮಧುರವಾಗಿದ್ದು, ಗುಣದಲ್ಲಿ ಗುರು ಸ್ನಿಗ್ಧವಾಗಿದೆ. ಇದು ವಾತ ಪಿತ್ತ ಶಾಮಕವಾಗಿದೆ.


ಇದನ್ನು ನಾಡೀ ದೌರ್ಬಲ್ಯ, ನೋವಿನಿಂದ ಕೂಡಿದ ರೋಗಗಳಲ್ಲಿ ಅಗ್ನಿ ದೌರ್ಬಲ್ಯ, ಹೃದ್ರೋಗ, ಊತ, ರಕ್ತಪಿತ್ತ, ಮೂಲವ್ಯಾಧಿ, ಕೆಮ್ಮು, ದಮ್ಮು, ಗರ್ಭಪಾತ, ಮೂತ್ರ ಕೃಚ್ಛ್ರದಲ್ಲಿಬಸ್ತಿ ಶೋಥದಲ್ಲಿಯೂ, ದೌರ್ಬಲ್ಯಗಳಲ್ಲಿಯೂ ಬಳಸುತ್ತಾರೆ.

ಇದರ ಫಲ ಹಾಗೂ ಮೂಲವನ್ನು ಔಷಧ ರೂಪದಲ್ಲಿಬಳಸುವರು. ಇದರ ಫಲ ಚೂರ್ಣವನ್ನು ೩–೬ ಗ್ರಾಂ ನಷ್ಟು ಕಷಾಯವನ್ನು ೩೦ ಮಿ.ಲೀ ಪ್ರಮಾಣದಲ್ಲಿ ಬಳಸಬೇಕು.

ಇದು ಹೆಸರುವಾಸಿಯಾದ ಮೂತ್ರಲ ಮಾಡುವ ಮೂಲಿಕೆ. (Diuretic)ಹೃದ್ರೋಗ, ಸರ್ವಾಂಗ ಶೋಥ(ಊತ) ಮೂತ್ರಕೃಚ್ಛ್ರ ರೋಗಗಳಲ್ಲಿ ಹೆಚ್ಚು ಉಪಯುಕ್ತ.

ನುಗ್ಗೆ
(MORINGAOLIFERA)

ಸಂಸ್ಕೃತ	–	ಶೋಭಾಂಜನ ಶಿಗ್ರು, ಮೋಚಕ
ಬಂಗಾಲಿ	–	ಶಿಜಿನಾ
ತೆಲಗು	–	ಮುನಗಾ
ತಮಿಳು	–	ಮುರುಂಗಾಯ್
ಮಲಯಾಳಂ	–	ಮುರಿಗಾ
ಮರಾಠಿ	–	ಶೇವಣಾ
ಇಂಗ್ಲಿಷ್	–	ಹಾರ್ಸ್ ರೇಡಿಷ್ ಟ್ರೀಸ್
ಗುಜರಾತಿ	–	ಸರಗವೋ



MORINGA PTERYGOSPERMA, Gaertn. ನುಗ್ಗೆ.

ಇದು ಸುಮಾರು ೨೦—೨೫ ಅಡಿ ಉದ್ದ ಬೆಳೆಯುವ ಒಂದು ವೃಕ್ಷ. ಇದರ ಟೊಂಗೆಗಳು ಹಾಗೂ ಎಲೆಗಳು ಮೃದುವಾಗಿರುತ್ತವೆ. ಎಲೆ ಸುಮಾರು ೧—೨ ಅಡಿ ಉದ್ದ, ಪತ್ರಕಗಳು ಸುಮಾರು ೬—೯ ಜೋಡಿಗಳಿರುತ್ತವೆ. ಪುಷ್ಪ ಸ್ವಲ್ಪ ನೀಲಿ ಬಣ್ಣ ಉಳ್ಳ ಬಿಳಿ ಗುಚ್ಛ. ನುಗ್ಗೆಯ ಫಲ ೬—೧೭ ಅಂಗುಲ ಉದ್ದ ಇರುತ್ತದೆ. ನುಗ್ಗೆ ಮರವು ಭಾರತದ ಎಲ್ಲೆಡೆಗಳಲ್ಲಿಯೂ ದೊರಕುತ್ತದೆ. ಇದರ ಬೇರಿನ ತೊಗಟೆಯಲ್ಲಿ 'ಮೋರಿಂಜಿನ್' ಎಂಬ ಉಪಯುಕ್ತ ತತ್ತ್ವವಿದೆ.ಬೇರಿನಲ್ಲಿ 'ಟೆರಿಗೋಸ್ಪರ್ಮಿನ್' ಎಂಬ ತತ್ತ್ವವೂ ಇದೆ. ನುಗ್ಗೆಯ ರಸ ಖಾರ, ಕಹಿ, ಗುಣದಲ್ಲಿ ಇದು ಲಘು, ರೂಕ್ಷ ತೀಕ್ಷ್ಣ ವಿಪಾಕದಲ್ಲಿ ಖಾರ, ವೀರ್ಯದಲ್ಲಿ ಉಷ್ಣ.

ಸಂಸ್ಥಾನಿಕ ಕಾರ್ಯಃ ಬಾಹ್ಯ ತೊಗಟೆ ಮತ್ತು ಎಲೆಗಳು ನಿದಾಹಿ, ಊತವನ್ನು ಕಡಿಮೆ ಮಾಡುತ್ತದೆ. ವಿದ್ರಧಿಪಾಚಕ, ಇದರ ಬೀಜದಿಂದ ಮಾಡಿದ ಪುಡಿಯ ಸಸ್ಯ ಶಿರೋವಿರೇಚ ಮಾಡಿಸುತ್ತದೆ.

ಉಪಯೋಗ : ವಿದ್ರಧಿ, ವ್ರಣಶೋಧ, ಅರ್ಧಿತ (ಮುಖಅರ್ಧಲಕ್ವಾ) ಅಗ್ನಿಮಾಂದ್ಯ, ಅರುಚಿ,ಹೊಟ್ಟೆಯ ರೋಗಗಳು ಗುಲ್ಮ, ಕೆಮ್ಮಲು, ಕಷ್ಟಾರ್ತವ, ರಜೋರೋಧ, ಮೇದೋರೋಗ, ಶೀತಜ್ವರ

ಪ್ರಯೋಜ್ಯ ಅಂಗಃ ಮೂಲತ್ವಕ್, ಬೀಜ.

ಮಾತ್ರ: ಮೂಲತ್ವಕ್ ಸ್ವರಸ ೧೦—೨೦ ಎಂ. ಎಲ್. ಬೀಜ ಚೂರ್ಣ ೧—೩ ಗ್ರಾಂ.

ಯೋಗ – ಶೋಭಾಂಜನಾದಿ ಲೇಪ, ಶ್ಯಾಮಾದಿ ಚೂರ್ಣ.

ಅಹಿತ ಪ್ರಭಾವ ವಿದಾಹಿ, ರಕ್ತ ಪಿತ್ತಕರ, ಪಿತ್ತ ಪ್ರಕೃತಿಯರಲ್ಲಿ ಕೊಡಬಾರದು.

ನಿಂಬೆ

(CITRUS MEDICA)

ಸಂಸ್ಕೃತ	–	ಜಂಬೀರ
ಹಿಂದಿ	–	ನೀಂಬು
ತೆಲಗು	–	ನಿಂಬಪಂಡು
ತಮಿಳು	–	ಎಲುಮಿಚಪಳಮ್
ಇಂಗ್ಲಿಷ್	–	ಲೆಮನ್



A -CITRUS AGRA[illegible]

ನಿಂಬೆಯು ಬಹಳಷ್ಟು ಉಪಯೋಗಿಸಲ್ಪಡುತ್ತ, ಎಲ್ಲರಿಗೂ ಸುವಿದಿತವಾದ ಹಣ್ಣು. ನಿಂಬೆಯು ಸ್ವಾದ ಸವಿಯದವರು ವಿರಳ. ಇದು ಆಹಾರಕ್ಕೆ ರುಚಿ ಕೊಡುವುದೇ ಅಲ್ಲದೆ ಹಲವಾರು ಔಷಧಿಯ ಗುಣಗಳನ್ನೂ ಹೊಂದಿದೆ.

ಸಂಸ್ಕೃತದಲ್ಲಿ ' ಜಂಬೀರ ' ಎಂದು ಕರೆಯಲ್ಪಡುವ ಇದರಲ್ಲಿ ಹೇರಳವಾಗಿ ವಿಟಮಿನ್ ' ಸಿ ' ಪೋಷಕಾಂಶವು ಅಡಕವಾಗಿದೆ.

ನಿಂಬೆಯು ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಅರುಚಿಯನ್ನು ಹೋಗಲಾಡಿಸುತ್ತದೆ. ಹಾಗೂ ಮಲಬಂಧವನ್ನೂ ಸಡಿಲಿಸುತ್ತದೆ. ನೀರಡಿಕೆ, ತೇಗು ಹಾಗೂ ವಾಂತಿಯನ್ನು ಕಡಿಮೆ ಮಾಡಿ, ಬಳಲಿಕೆಯನ್ನು ತೀರಿಸುವಲ್ಲಿ ನಿಂಬೆಯ ಪಾನಕ ಅಗ್ರಗಣ್ಯ. ದಿನನಿತ್ಯದ ಉಪಯೋಗದಲ್ಲಿ ನಿಂಬೆಯ ಪಾತ್ರ ಹಿರಿದು. ಆಹಾರದ ಜೊತೆಯಲ್ಲಿ ಇಲ್ಲವೇ ಏಕವಾಗಿ ಬಳಸಲ್ಪಡುವ ನಿಂಬೆಯ ಕೆಲವು ಉಪಯೋಗ ವಿಧಾನಗಳನ್ನು ಈ ಕೆಳಗೆ ತಿಳಿಸಲಾಗಿದೆ.

ನಿಂಬೆಯ ಪಾನಕವು (ಸಕ್ಕರೆ ಮಿಶ್ರಿತ) ನೀರಡಿಕೆ, ಬಳಲಿಕೆ ಹಾಗೂ ಓಕರಿಕೆಯನ್ನು ಕಡಿಮೆ ಮಾಡುತ್ತದೆ.

ನಿಂಬೆಯನ್ನು ಹೋಳುಗಳನ್ನಾಗಿ ಸೀಳಿ, ಉಪ್ಪನ್ನು ಹಚ್ಚಿ ನಾಲಿಗೆಯ ಮೇಲೆ ತಿಕ್ಕುವುದರಿಂದ ಅರುಚಿಯನ್ನು ಹೋಗಲಾಡಿಸ ಬಹುದು. ಹಾಗೂ ಬಾಯಿಯ ದುರ್ವಾಸನೆಯೂ ದೂರವಾಗುತ್ತದೆ.

ನಿಂಬೆರಸ, ಜೇನುತುಪ್ಪ ಹಾಗೂ ಉಪ್ಪು (೪:೨:೧) ಭಾಗ ಸೇರಿಸಿ ಕೊಡುವುದರಿಂದ ತೇಗು ಕಡಿಮೆಯಾಗುತ್ತದೆ.

ಬಾಯಿಹುಣ್ಣು ನಾಲಗೆ ಹುಣ್ಣುಗಳಲ್ಲಿ ನಿಂಬೆಯರಸ ಅಥವಾ ಇಡೀ ಹೋಳನ್ನು ಬಾಯಲ್ಲಿಡುವುದರಿಂದ ಗುಳ್ಳೆಗಳು ಶೀಘ್ರವಾಗಿ ಗುಣವಾಗುತ್ತವೆ.

ಆಗತಾನೆ ತೆಗೆದ ಒಂದು ನಿಂಬೆಹಣ್ಣಿನ ರಸದೊಂದಿಗೆ ಒಂದು ಲೀಟರ್ ನೀರನ್ನು ಸೇರಿಸಿ ಕುದಿಸಿ ಅರ್ಧಕ್ಕಿಳಿಸಿ, ಆರಿಸಿ ಖಾಲಿ ಹೊಟ್ಟೆಯಲ್ಲಿ ಕುಡಿಯುವುದರಿಂದ ಮಲೇರಿಯಾ ಜ್ವರವನ್ನೂ ತಡೆಗಟ್ಟಬಹುದು.

ನಿಂಬೆ ಎಲೆಯ ರಸ ಸ್ವಲ್ಪ ಜೇನುತುಪ್ಪದೊಂದಿಗೆ ಸೇವಿಸುವುದರಿಂದ ಹೊಟ್ಟೆಯ ಕ್ರಿಮಿಗಳನ್ನು ಹೋಗಲಾಡಿಸಬಹುದು.

ತಲೆಸುತ್ತುವಿಕೆ, ಹಾಗೂ ಮಂದದೃಷ್ಟಿ ನಿಂಬೆರಸದ ಸೇವನೆಯಿಂದ ಸರಿಪಡಿಸಬಹುದು. ಸಂಧು ನೋವಿನಿಂದ ಬಳಲುವವರು ನಿಂಬೆಹಣ್ಣಿನ ಬಳಕೆಯಿಂದ ಸರಿ ಹೊಂದುತ್ತಾರೆ.

ಚರ್ಮ ರೋಗಗಳಲ್ಲಿ ಆಹಾರದೊಂದಿಗೆ ಉಪಯೋಗಿಸಲ್ಪಡು ವುದರಿಂದ ರಕ್ತ ಶುದ್ಧಿಯಾಗುತ್ತದೆ.

ನಿಂಬೆರಸ, ಜೇನುತುಪ್ಪ ಹಾಗೂ ಕರ್ಪೂರ ಇವುಗಳನ್ನು ಕಲೆಸಿ, ಕಣ್ಣಿಗೆ ಹಚ್ಚುವುದರಿಂದ ದೃಷ್ಟಿಯು ತಿಳಿಯಾಗುತ್ತದೆ. (ವೈದ್ಯರ ಆದೇಶದಂತೆಯೇ).

ನಿರ್ಗುಂಡಿ

(VTEX NEGUNDO)

ಕನ್ನಡ	—	ಲೆಕ್ಕೆ
ಹಿಂದಿ	—	ಸಂಬಾಲು, ನಿಂಧುವಾರ, ಮೇಲುಡಿ
ತೆಲಗು	—	ತೆಲ್ಲಾವಾಬಲೀ, ಬಾವಲೀ
ತಮಿಳು	—	ನೊಚ್ಚಿ
ಮಲೆಯಾಳಂ	—	ಕರಿನೊಚ್ಚು
ಮರಾಠಿ	—	ಲಿಂಗಡ್, ನಿಗಡ್



ಲಕ್ಕಿ

ರಾಸಾಯನಿಕ ಸಂಘಟನೆ : ಇದರ ಎಲೆಗಳಲ್ಲಿ ಬಣ್ಣವಿಲ್ಲದ, ವಾಸನೆಯುಳ್ಳ, ಆರಿಹೋಗುವ ಎಣ್ಣೆ ಹಾಗೂ ರೆಸಿನ್ ಇದೆ. ಇದರ ಬೀಜದಲ್ಲಿ ಅಮ್ಲ ರಾಲವು, ಆರ್ಗ್ಯಾನಿಕ ಆಸಿಡ್, ಮೆಲಿಕ ಆಸಿಡ್ ಮತ್ತು ಅತ್ಯಲ್ಪ ಕ್ಷಾರ ಪದಾರ್ಥವು ಇದೆ.

ಗುಣಕರ್ಮಗಳು : ಇದು ಖಾರ, ಕಹಿ ಮತ್ತು ಒಗರು ರಸಗಳಿಂದ ಕೂಡಿದ್ದು ಉಷ್ಣ ವೀರ್ಯವಾಗಿದೆ. ವಿಪಾಕದಲ್ಲಿ ಕಾರವೂ ಹಾಗೂ ಲಘುವೂ ಆಗಿದೆ.

ಇದು ಹಸಿವನ್ನು ಹೆಚ್ಚಿಸುತ್ತದೆ. ನೋವನ್ನು ಕಡಿಮೆ ಮಾಡುತ್ತದೆ. ಕಫ ಹಾಗೂ ವಾತವನ್ನು ನಾಶ ಮಾಡುತ್ತದೆ. ಜ್ವರವನ್ನು ನಾಶ ಮಾಡುತ್ತದೆ. ಮೂತ್ರ ಹಾಗೂ ಆರ್ತವವನ್ನು ಹೆಚ್ಚಿಸುತ್ತದೆ. ಕ್ರಿಮಿನಾಶಕವಾಗಿದ್ದು ಬಾವು, ವಿಷವೂ ನಶಿಸುತ್ತದೆ.

ಇದರ ಪ್ರಯೋಗವು ಆಮವಾತ, ವಾತವ್ಯಾಧಿ ಕೆಮ್ಮು, ಜ್ವರ ಬಿಳಿಸೆರಗು, ನೋವು ಅಜೀರ್ಣ, ಚರ್ಮರೋಗ, ಹುಣ್ಣು, ಬಾವು ಮುಂತಾದವುಗಳಲ್ಲಿ ಬರುತ್ತದೆ.

ಕಾಲಿನಲ್ಲಿ ಉರಿ ಇದ್ದಾಗ ಇದರ ಎಲೆಗಳನ್ನು ಕಟ್ಟಬೇಕು. ತಲೆನೋವಿದ್ದಾಗ ಎಲೆಗಳನ್ನು ಅರೆದು ತಲೆಗೆ ಕಟ್ಟಬೇಕು. ಹಾಗೂ ಅದರ ಹೂವಿನ ಪುಡಿಯಿಂದ ಮೂಗಿನೊಳಗೆ ನಶ್ಯವಾಗಿ ಕೊಡಬೇಕು. ಇದರ ಬೇರು ಹಾಗೂ ಎಲೆಗಳಿಂದ ತಯಾರಿಸಿದ ಎಣ್ಣೆಯನ್ನು ಬಾವು, ಹುಣ್ಣು, ಚರ್ಮರೋಗಗಳಲ್ಲಿ, ಸಂಧು ನೋವುಗಳಲ್ಲಿ ಉಪಯೋಗಿಸಬೇಕು. ಕಿವಿನೋವಿನಲ್ಲಿ ಇದರ ಎಣ್ಣೆ ಬಿಡುವುದುಂಟು. ಕಿವಿಯಲ್ಲಿ ಕೀವು ಸೋರುತ್ತಿದ್ದರೆ ಜೇನುತುಪ್ಪದೊಂದಿಗೆ ಇದರ ಎಣ್ಣೆಯನ್ನು ಕಿವಿಗೆ ಹಾಕಬೇಕು. ಜ್ವರದಲ್ಲಿ ಇದರ ಕಷಾಯವನ್ನು ಮೈಗೆ ಉಜ್ಜುವುದರಿಂದ ಉರಿ ಹಾಗೂ ಕೆಟ್ಟವಾಸನೆ ಕಡಿಮೆಯಾಗುತ್ತದೆ. ಕಷಾಯವನ್ನು ಕುಡಿಯಲಿಕ್ಕೆ ಕೊಡಬೇಕು.

ಸೈಯಾಟಿಕ (Sciatica) ನರರೋಗದಲ್ಲಿ ಇದರ ಕಷಾಯವನ್ನು ಕುಡಿಸಬೇಕು.

ನಾಮದ ಬೇರು (ಸಾರೀವ)

(HEMIDESMUS INDICUS)

ಸಂಸ್ಕೃತ	—	ಸುಗಂಧೀಪಲ್
ಹಿಂದಿ	—	ಕಾಲೀಸರ
ತಮಿಳು	—	ನನ್ನಾರಿಮ್
ಮಲೆಯಾಳಂ	—	ನನ್ನಾರಿವರ್

ಸಾರೀವ ಅಥವಾ ನಾಮದ ಬೇರು ಎರಡು ವಿಧ

೧. ಶ್ವೇತ ಸಾರೀವ – ಹೆಮಿಡಿಸ್ಮಸ್ ಇಂಡಿಕಸ್

೨. ಕೃಷ್ಣ ಸಾರೀವ – ಇಕೊಕಾರ್ಡಸ್ ಪ್ರಟಿಸೆನ್ಸ್

ಸಾಮಾನ್ಯವಾಗಿ ಹೆಚ್ಚು ಬಳಕೆಯಲ್ಲಿರುವುದು ಶ್ವೇತಸಾರೀವ.

ಉತ್ಪತ್ತಿ ಸ್ಥಾನ : ಭಾರತದ ಎಲ್ಲಾ ಕಡೆಗಳಲ್ಲೂ ದೊರೆಯುತ್ತದೆ.

ವಿವರಣೆ : ನಾಮದ ಬೇರಿನ ಗಿಡವು ಒಂದು ಚಿಕ್ಕ ಗಿಡ ಮೂಲಿಕೆ.

ಎಲೆಗಳು : ೨–೪ ಅಂಗುಲ ಉದ್ದ, ಹಸಿರು ಬಣ್ಣ

ಹೂವು : ಹಸಿರು ಮಿಶ್ರಿತ ನೇರಳೆ ವರ್ಣ

ಹಣ್ಣುಗಳು : ೪–೬ ಅಂಗುಲ ಉದ್ದ, ಬೀಜಗಳು ಒಂದೂ ಕಾಲು ಅಂಗುಲ, ಕಪ್ಪು ಬಣ್ಣ.

ಗುಣಗಳು: ಗುಣ : ಗುರು (ಭಾರ)

ರಸ : ಕರಹ, ಕಹಿ, ಸಿಹಿ ವೀರ್ಯ : ಶೀತ ವಿಪಾಕ : ಸಿಹಿ

ಇದು ವಾತ ಮತ್ತು ಪಿತ್ತ ದೋಷಗಳನ್ನು ಶಮನ ಮಾಡುತ್ತದೆ. .

ಪ್ರಯೋಜನಕಾರಿ ಅಂಗ: ಬೇರು

ಪ್ರಯೋಜನಗಳು : ನಾಮದ ಬೇರು – ಮೈ ಕೈ ಉರಿ, ಜ್ವರ, ಮೂತ್ರ ವಿಕಾರಗಳು (ಉರಿ ಮೂತ್ರ) ಚರ್ಮ ರೋಗಗಳು, ರಕ್ತ ಹೀನತೆ, ನೇತ್ರ ರೋಗಗಳು, ಬಲಹೀನತೆ ಇವುಗಳಲ್ಲಿ ಉಪಯೋಗಿಸಲ್ಪಡುತ್ತದೆ.


ಪ್ರಮುಖ ತಯಾರಿಕೆಗಳು : ಸಾರೀವಾದಿಕಷಾಯ, ಸಾರೀವಾದಿ ವಟೀ, ಸಾರೀವಾದಿಪಾನಕ, ಸಾರೀವಾದಿ ಆಸವ (೧–೨ ಬಾರಿ)

ಪ್ರಮಾಣ: ಕಷಾಯ ೩೦ ಎಂ. ಎಲ್. ಚಟ್ನಿ (ಕಲ್ಕ) ೫–೧೦ ಗ್ರಾಂ.

ಪಡುವಲ (ಪಟೋಲ)

(TRICHOS ANTHES DIODILA)

ಸಂಸ್ಕೃತ	–	ಪಟೋಲ
ಹಿಂದಿ	–	ಪರವಲ
ತೆಲುಗು	–	ಕೊಂಬು ಪೊಟಾಲಿಲ
ತಮಿಳು	–	ಕಂಬುಪಾದಾಲಾಯಿ
ಮಲೆಯಾಳಂ	–	ಕಾಟ್ಟು ಪೋಟೋಲಂ



TRICHOSANTHES DIOICA, Roxb. ಕಹಿಪಡುವಲ

ಇದು ಎಲ್ಲರಿಗೂ ತಿಳಿದಿರುವ ಹಾಗೆ ಬಳ್ಳಿ, ಇದರ ಎಲೆಗಳು ಹೃದಯಾಕಾರದಲ್ಲಿಯೂ ಅಥವಾ ಆಯತಾಕಾರವಾಗಿರುವುದು. ಇದು ಸ್ಪರ್ಶಕ್ಕೆ ಕರ್ಕಶವಾಗಿಯೂ, ೩-೪ ಅಂಗುಲ ಉದ್ದ ಹಾಗೂ ೨ ಅಂಗುಲ ಅಗಲವಾಗಿರುವುದು. ಇದರ ಪುಷ್ಪವು ಬಿಳಿಯ ಬಣ್ಣವಿರುವುದು. ಇದರ ಫಲವು ಲಂಬಾಕಾರವಾಗಿರುವುದು. ಸುಮಾರು ೨-೪ ಅಂಗುಲಗಳಷ್ಟು ಉದ್ದವಾಗಿರುವುದು. ಇದರ ಫಲವು ಬಲಿಯುವ ಮೊದಲು ಬಿಳಿ ಮಿಶ್ರಿತ ಹಸುರು ಬಣ್ಣದ್ದಾಗಿಯೂ, ಬಲಿತ ಮೇಲೆ ಹಳದಿ ಅಥವಾ ರಕ್ತ ವರ್ಣದಾಗಿರುವುದು.

ಇದು ಮುಖ್ಯವಾಗಿ ಗಂಗಾನದಿಯ ತೀರದಲ್ಲಿಯೂ, ಉತ್ತರ ಪ್ರದೇಶ ಮತ್ತು ಬಂಗಾಳದಲ್ಲಿ ಅಧಿಕವಾಗಿ ಬೆಳೆಯುವುದು.

ಇದರ ಕಾಯಿಯು ರಾಸಾಯನಿಕವಾಗಿ ಶೇಕಡಾ ಎರಡರಷ್ಟು, ಪ್ರೋಟಿನ್, ಶೇಕಡಾ ೦.೩ ರಷ್ಟು ಮೇಧಸ್ಸು ಶೇಕಡಾ ೨.೨ ರಷ್ಟು ಕಾರ್ಬೋಹೈಡ್ರೇಟ್, ೦.೫ರಷ್ಟು ಖನಿಜ, ಹಾಗೂ ಪತ್ರವದಲ್ಲಿ ಶೇಕಡ ೫ರಷ್ಟು ಪ್ರೋಟಿನ್ ಶೇಕಡಾ ೧.೧ ರಷ್ಟು ಮೇಧಸ್ಸು, ಶೇಕಡಾ ೫.೯ ರಷ್ಟು ಕರ್ಬೋಹೈಡ್ರೇಟ್, ಹಾಗೂ ಶೇಕಡಾ ೩ರಷ್ಟು ಖನಿಜಾಂಶವಿದೆ. ಇದರ ಬೀಜದಲ್ಲಿ ಶೇಕಡಾ ೨೬.೩ರಷ್ಟು ಎಣ್ಣೆಯಂಶವಿದೆ.

ಇದು ರಸದಲ್ಲಿ ಕಹಿಯಾಗಿಯೂ, ಲಘು ಹಾಗೂ ರೂಕ್ಷ ಗುಣಗಳಿಂದ ಕೂಡಿದೆ. ಈ ಎಲ್ಲಾ ಗುಣಗಳಿರುವುದರಿಂದ ಇದು ತ್ರಿದೋಷ ಶಾಮಕವಾಗಿ ಕಾರ್ಯ ಮಾಡುವುದು.


ಇದು ಮುಖ್ಯವಾಗಿ ವೇದನಾಹರವಾಗಿಯೂ, ಕೇಶವರ್ಧಕವಾಗಿ, ವ್ರಣವನ್ನು ಮಾಯಿಸುವುದು. ಇದರ ಮೂಲದ ಲೇಪವು ತಲೆನೋವಿನಲ್ಲಿಯೂ, ಇದರ ಎಲೆಯ ರಸವನ್ನು ವ್ರಣದಲ್ಲಿಯೂ ಹಾಗೂ ಕೂದಲು ಉದುರುವಿಕೆಯಲ್ಲಿ ಬಳಸಬಹುದು. ಅಭ್ಯಂತರವಾಗಿ ಇದನ್ನು ಅರುಚಿ, ಅಗ್ನಿಮಾಂದ್ಯ, ಅಜೀರ್ಣ, ಬಾಯಾರಿಕೆ, ಹುಳಿತೇಗು ಯಕೃತ್ ವಿಕಾರ, ಕಾಮಲಾ ಉದರ ರೋಗ, ಮೂಲವ್ಯಾಧಿ, ಕ್ರಿಮಿರೋಗದಲ್ಲಿ ಬಳಸುವರು. ಅಲ್ಲದೆ ತ್ವಚಾ ವಿಕಾರದಲ್ಲಿಯೂ ರಕ್ತ ವಿಕಾರದಲ್ಲಿಯೂ ಇದನ್ನು ಬಳಸಬಹುದು.

ಇದರ ಪ್ರಯೋಜ್ಯ ಅಂಗವು ಪತ್ರವಾಗಿದೆ. ಇದರ ಸ್ವರಸವನ್ನು ೧೦–೨೦ಮಿ.ಲೀ ಪ್ರಮಾಣದಲ್ಲಿ ಹಾಗೂ ಕಷಾಯವನ್ನು ೬೦ಮಿ.ಲೀ ಪ್ರಮಾಣದಲ್ಲಿ ಬಳಸಬೇಕು.

ಪಲಾಂಡು

(ALLIUM CEPA OR A. PORRUM OR A. ASCALONICUM)

ಕನ್ನಡ	–	ಈರುಳ್ಳಿ
ಸಂಸ್ಕೃತ	–	ಪಲಾಂಡು
ಹಿಂದಿ	–	ಪ್ಯಾಜ್
ತೆಲುಗು	–	ನೀರುಳ್ಳಿ
ತಮಿಳು	–	ವೆಂಗಾಯಿ
ಮಲೆಯಾಳಂ	–	ಈರುಳ್ಳಿ
ಇಂಗ್ಲಿಷ್	–	ಆನಿಯನ್
ಬೆಂಗಾಲಿ	–	ಪ್ಯಾಜ್
ಗುಜರಾತಿ	–	ದುಂಗಾರಿ
ಮರಾಠಿ	–	ಕಾಂಡ



ರಾಸಾಯನಿಕ ಸಂಘಟನೆ : ಎಣ್ಣೆ ಮತ್ತು ಗಂಧಕ ಗಡ್ಡೆಯಲ್ಲಿರುತ್ತದೆ. ಸಿಪ್ಪೆಯಲ್ಲಿಹಳದಿ ಬಣ್ಣದ ಪದಾರ್ಥ ಇರುತ್ತದೆ.

ಗುಣಕರ್ಮ : ಗಡ್ಡೆಯಲ್ಲಿನ ಎಣ್ಣೆಯು ಉತ್ತೇಜಕವಾಗಿದೆ, ಮೂತ್ರಲವು ಹಾಗೂ ಕಫ ನಾಶಕವಾಗಿದೆ. ಗಡ್ಡೆಯು ವಾಂತಿಯನ್ನು ನಿವಾರಿಸುತ್ತದೆ. ಬಾಹ್ಯವಾಗಿ ಉತ್ತೇಜಕವಾಗಿದೆ. ಅದನ್ನು ಹುರಿದು ರಸವನ್ನು ತೆಗೆದು, ಜೇನು ತುಪ್ಪದೊಂದಿಗೆ ಕೊಟ್ಟರೆ, ಅದು ವಾಜೀಕರವಾಗಿರುತ್ತದೆ.


ಉಪಯೋಗ: ಆಹಾರವಾಗಿ ಉಪಯೋಗಿಸಲಾಗುತ್ತಿದೆ. ಗಡ್ಡೆಯನ್ನು ಜ್ವರದಲ್ಲಿ, ಕಣ್ಣಿನ ದೋಷದಲ್ಲಿ ಹಾಗೂ ಕೆಮ್ಮು, ದಮ್ಮುಗಳಲ್ಲಿ, ಉಪ್ಪಿನೊಂದಿಗೆ ಕೊಡಲಾಗುತ್ತದೆ. ಇದು ಯಾವುದೇ ಹೊಟ್ಟೆನೋವು ಹಾಗೂ ಸ್ಕರ್ವೀರೋಗಗಳಲ್ಲಿ ನೀಡಲಾಗುತ್ತದೆ.

ಹುಣ್ಣು ಹಾಗೂ ಗಾಯಗಳಲ್ಲಿ, ಈರುಳ್ಳಿಯನ್ನು ಹುರಿದು ಅದರ ಲೇಪವನ್ನು ಹಾಕಲಾಗುತ್ತದೆ. ಭೇದಿ, ಉಷ್ಣಗಳಲ್ಲಿ ಅದರ ರಸವನ್ನು ನೇವಳಕ್ಕೆ ಹಾಕಬೇಕು. ಕಿವಿನೋವುಗಳಲ್ಲಿ ಇದನ್ನು ಉಪಯೋಗಿಸಲಾಗುತ್ತದೆ. ಪಲಾಂಡು ಘೃತ ಮೂಲವ್ಯಾಧಿಯಲ್ಲಿ ಉಪಯೋಗಿಸಬೇಕು. (೨—೪ ಚಮಚ)

ಪಿಪ್ಪಲಿ

B.N. PIPER LONGUM-N.O. PIPERACEVE

ಕನ್ನಡ	–	ಹಿಪ್ಪಲಿ
ಸಂಸ್ಕೃತ	–	ಪಿಪ್ಪಲಿ
ಹಿಂದಿ	–	ಪಿಪ್ಪಲ್
ತೆಲುಗು	–	ಪಿಪ್ಪಳ್ಳು
ತಮಿಳು	–	ಪಿಪ್ಪಿಲಿ
ಇಂಗ್ಲಿಷ್	–	ಲಾಂಗ್ ಪೆಪ್ಪರ್



ಭೇದ: ನಾಲ್ಕು ವಿಧಗಳಿವೆ ೧. ಹಿಪ್ಪಲಿ ೨. ಗಜಪಿಪ್ಪಲಿ (ವರ್ಧಮಾನ ಪಿಪ್ಪಲಿ) ೩. ಸೆಂಹಲೀ ೪. ವನ ಪಿಪ್ಪಲಿ.

ಸ್ವರೂಪ: ಪಿಪ್ಪಲಿ ಒಂದು ವಿಧವಾದ ಬಳ್ಳಿ. ಈ ಬಳ್ಳಿಯನ್ನು ಮರಕ್ಕೆ ಹಬ್ಬಿಸಬಹುದು. ಎಲೆಗಳು ೨–೩ ಅಂಗುಲ, ಹಣ್ಣುಗಳು ಚಿಕ್ಕದಾಗಿದ್ದು ಅರ್ಧದಿಂದ ಒಂದು ಅಂಗುಲ, ಇದು ಬಲಿತ ಮೇಲೆ ಕಪ್ಪು ಬಣ್ಣ ಬರುತ್ತದೆ.

ಗುಣ: ರಸ – ಖಾರ, ಅನುರಸ : ಸಿಹಿ

ಗುಣ– ಸ್ನಿಗ್ಧ ತೀಕ್ಷ್ಣ, ವೀರ್ಯ – ಅನುಷ್ಣ, ವಿಪಾಕ – ಸಿಹಿ

ಉಪಯೋಗ: ಅಗ್ನಿ ಹೆಚ್ಚಿಸುತ್ತದೆ, ರಸಾಯನ, ಯಕೃತ್ ವಿಕಾರ ಕ್ರಿಮಿಗಳನ್ನು ನಿವಾರಿಸುತ್ತದೆ. ರಕ್ತವರ್ಧಕ, ದಮ್ಮು ಕೆಮ್ಮು, ಮೂತ್ರ ಜಾಸ್ತಿ ಮಾಡುತ್ತದೆ. ಗರ್ಭಾಶಯ ಸಂಕೋಚಕ, ಜ್ವರ ನಿವಾರಿಸುತ್ತದೆ.

ಮಾತ್ರೆ: ಸ್ವರಸ ೧–೨ ತೊಲ, ಚೂರ್ಣ ೫ ಗ್ರಾಂ

ಯೋಗ : ಪಿಪ್ಪಲ್ಯಾಸವ ೧ ಔನ್ಸ್ ಬೆಳಗ್ಗೆ ಸಾಯಂಕಾಲ

ತ್ರಿಕಟು ಚೂರ್ಣ, ಪಂಚಕೋಲ ಚೂರ್ಣ, ಸೀತೋಪಲಾದಿ ಚೂರ್ಣ

ಪುದೀನ

(MENTHAVIRDIS)

ಸಂಸ್ಕೃತ	–	ಪುತಿಹಾ	ಮಲೆಯಾಳಂ	–	ಪುತೀಯಾನ
ಹಿಂದಿ	–	ಪುದೀನಾ	ಬಂಗಾಲಿ	–	ಪುದಿನಾ
ತೆಲುಗು	–	ಪುದಿನಾ	ಮರಾಠಿ	–	ಪುದಿನಾ
ತಮಿಳು	–	ಪುದಿನಾ	ಆಂಗ್ಲ	–	ಗಾರ್ಡನ್ ಮಿಂಟ್



B—MENTHA VIRIDIS

ಪುದೀನಾ ಒಂದು ಸಣ್ಣ ಗಿಡ (ಕುಪ), ತೊಟ್ಟಿಲ್ಲದ ಎಲೆಗಳು ಹಾಗೂ ಕೋಮಲ ಹಾಗೂ ಶಿಥಿಲವಾದ ಪುಷ್ಪ ಮಂಜರಿಯನ್ನು ಹೊಂದಿದ್ದು ಸುಮಾರು ೧–೨ ಅಡಿ ಉದ್ದ ಬೆಳೆಯುತ್ತದೆ. ಇದು ಭಾರತದ ಎಲ್ಲಾ ಭಾಗಗಳಲ್ಲಿಯು ಸಿಗುತ್ತದೆ.

ರಾಸಾಯನಿಕ ಸಂಘಟನೆ: ಎಲೆಯಲ್ಲಿ ನೀರಿನ ಅಂಶ ಶೇಕಡ ೮೩, ಪ್ರೋಟೀನ್ ಶೇ.೪೮. ಜಿಡ್ಡಿನ ಅಂಶ – ಶೇ. ೦.೬ ಪಿಷ್ಟಾಂಶ – ಶೇ. ೬ ಖನಿಜ – ೧.೯ ಶೇ. ಕ್ಯಾಲ್ಸಿಯಂ ೨೦೦ ಗ್ರಾಂ ಫಾಸ್ಫರಸ್ ೬೦ ಮಿ. ಗ್ರಾಂ ಕಬ್ಬಿಣ ೧೫.೬ ಮಿ.ಗ್ರಾಂ

ಗುಣಗಳು: ಇದು ಲಘು, ರೂಕ್ಷ ತೀಕ್ಷ್ಣ ವಿಪಾಕದಲ್ಲಿ ಖಾರ, ರಸ ಖಾರ, ವೀರ್ಯ ಉಷ್ಣ, ಕರ್ಮ ಇದು ಕಫ ವಾತಶಾಮಕ.

ಸಂಸ್ಥಾನಿಕ ಕರ್ಮ – ಬಾಹ್ಯ– ವೇದನಾ ಸ್ಥಾಪಕ, ದುರ್ಗಂಧ ನಾಶಕ, ಜಂತುಘ್ನ, ವ್ರಣರೋಪಣ, ವ್ರಣಘ್ನ, ಜ್ವರಘ್ನ, ವಿಷಘ್ನ, ಕೆಮ್ಮು, ದಮ್ಮು ಮುಟ್ಟಿನ ತೊಂದರೆಗಳಿಗೆ ಹಿತಕರ.

ಪ್ರಯೋಜ್ಯ ಅಂಗ – ಪತ್ರ ತೈಲ

ಸ್ವರಸ–೫–೧೦ ಎಂ. ಎಲ್. ಫಾಂಟ ೨೦–೪೦ ಎಂ. ಎಲ್. ತೈಲ ೧–೩ ತೊಟ್ಟು

ವಿಶಿಷ್ಟ ಯೋಗ : ಅರ್ಕಪುದೀನಾ

ಪುನರ್ನವ
(BOERHAVIADIFFUSA)

ಕನ್ನಡ	–	ಸನದಿಕಾ
ಹಿಂದಿ	–	ಗದಪರ್ಣ
ತೆಲುಗು	–	ಅಟ್ಟಟಿಮಮಿಡಿ
ತಮಿಳು	–	ಮುಕ್ಕಿರಟ್ಟಿ
ಮಲೆಯಾಳಂ	–	ತಮಿಲಮ



ಇದರ ರಸವು ಸಿಯಾಗಿ, ಒಗರು ಮತ್ತು ಕಹಿ.

ರಾಸಾಯನಿಕ ಸಂಘಟನೆ: ಇದರಲ್ಲಿ ಆಲ್ಕಲಾಯ್ಡ್ ಲ್ ಸಲ್ಫೇಟ್ (ಪುರ್ನವಿನ್) ಶೇ.೦.೦೧ ಪೊಟಾಸಿಯಂ ನೈಟ್ರೇಟ್ -- ಶೇ. ೬.೪೧ ಇದರ ಬೂದಿಯಲ್ಲಿ ಸಲ್ಫೇಟ್ ಮತ್ತು ಕ್ಲೋರೈಡ್ ಮತ್ತು ಸ್ವಲ್ಪ ನೈಟರೇಟ್ ಮತ್ತು ಕ್ಲೋರೇಟ್‌ಗಳ ಅಂಶವಿರುತ್ತದೆ.

ಕ್ರಿಯೆಗಳು: ಇದು ಅನುಲೋಮಕ, ಮೂತ್ರಲ (diuretic) ಕೆಮ್ಮುನಿವಾರಕ ಮತ್ತು ವಾಮಕವಾಗಿ (emetic) ಕೆಲಸ ಮಾಡುತ್ತದೆ.

ಇದನ್ನು ಚೂರ್ಣ (ಪುಡಿ), ರಸ, ಕಲ್ಕ, ಎಣ್ಣೆ ಮತ್ತು ಕಷಾಯದ ರೂಪದಲ್ಲಿ ಉಪಯೋಗಿಸಬಹುದು.

ಉಪಯೋಗಗಳು: ಇದನ್ನು ಮುಖ್ಯವಾಗಿ ಎಲ್ಲಾ ತರಹದ ಮೂತ್ರ ಜನಕಾಂಗದ ತೊಂದರೆಗಳಲ್ಲಿ ಉಪಯೋಗಿಸುತ್ತಾರೆ. ಮತ್ತು ಹೃದಯ, ಯಕೃತ್ ಮತ್ತು ಮೂತ್ರ ಪಿಂಡಗಳ ತೊಂದರೆಗಳಿಂದ ಉಂಟಾದ ಜಲೋದರದಲ್ಲಿ ಇದನ್ನು ಉಪಯೋಗಿಸುತ್ತಾರೆ. ಈ ಗಿಡದ ಎಲೆಯ ರಸವನ್ನು ಜೇನುತುಪ್ಪದ ಜೊತೆ ಯಕೃತ್ ರೋಗಗಳಲ್ಲಿ ಉದಾ. ಕಾಮಾಲೆರೋಗದಲ್ಲಿ ಉಪಯೋಗಿಸಬಹುದು. ಇದರ ಬೇರಿಂದ ತಯಾರಿಸಿದ ಚೂರ್ಣ ಮತ್ತು ಅಥವಾ ಕಷಾಯವನ್ನು ಅನುಲೋಮಕವಾಗಿ ಉಪಯೋಗಿಸಬಹುದು. ಇದು ಮೂತ್ರಲ ವಾಗಿರುವುದರಿಂದ ಇದನ್ನು ಗೊನೋರಿಯ ಮತ್ತು ಇತರ ಅಂತರಿಕ ಊತ (ಶೋಥಗಳಲ್ಲಿ)

ಉಪಯೋಗಿಸುತ್ತಾರೆ. ಇದನ್ನು ಮಧ್ಯಮ ಪ್ರಮಾಣದಲ್ಲಿ ಸೇವಿಸಿದರೆ ಅಸ್ತಮಾ ರೋಗವೂ ಗುಣವಾಗುತ್ತದೆ. ಅಧಿಕ ಪ್ರಮಾಣದಲ್ಲಿ ಸೇವಿಸಿದರೆ ಇದು ವಮನವನ್ನುಂಟುಮಾಡುತ್ತದೆ.

ಯೋಗಗಳು:

ಅ.	ಪುನರ್ನವಾಷ್ಟಕ ಚೂರ್ಣ	೫—೧೫ ಗ್ರೈನ್ಸ್
ಆ.	ಪುನರ್ನವ ಲೇಹ್ಯ	೧—೫ ಗ್ರಾಂಸ್
ಇ.	ಪುನರ್ನವ ಮಂಡೂರ	೧—೨ ಮಾತ್ರೆ
ಈ.	ಪುನರ್ನವಾಸವ	೩೦ ಎಂ.ಎಲ್. ನೀರಿನೊಡನೆ ದಿನಕ್ಕೆ ಎರಡು ಸಲ.
ಉ.	ಪುನರ್ನವ ತೈಲ	ಬಾಹ್ಯವಾಗಿ ಹಚ್ಚಲು.

ಬಲಾ

(SIDA CORDIFOLIA)

ಕನ್ನಡ	—	ಕಲ್ಲಂಗಡಲೆ
ಹಿಂದಿ	—	ಬರಿಯಾರ್
ತೆಲುಗು	—	ಚಿಟ್ಟಾಮುಟ್ಟಬೀರು
ತಮಿಳು	—	ಪಣಿಯಾಕ್ ತುತ್ತಿ
ಮಲೆಯಾಳಂ	—	ವಿಲ್ಲೂರಯ್
ಬಂಗಾಲಿ	—	ಬಿಡೇಲ
ಗುಜರಾತಿ	—	ಬಲಾ
ಆಂಗ್ಲ	—	ಕಂಟ್ರಿ ಮೆಲೊ




ಇದು ಸಮಶೀತೋಷ್ಣವಲಯದಲ್ಲಿ ಬೆಳೆಯುತ್ತದೆ. ಇದು ೪—೫ ಅಡಿ ಬೆಳೆಯುವ ಒಂದು ಸಸ್ಯ. ಕಾಂಡದ ಮೇಲೆ ಸೂಕ್ಷ್ಮವಾದ ರೋಮಗಳಿರುತ್ತವೆ. ಎಲೆಗಳ ತೊಟ್ಟು ಉದ್ದವಾಗಿರುತ್ತದೆ. ಹಳದಿ ಹೂಗಳಿರುತ್ತವೆ. ಹಣ್ಣು ೬—೮ ಎಂ.ಎಂ. ವ್ಯಾಸ ಹೊಂದಿ ಗುಂಡಾಗಿರುತ್ತದೆ. ಇದರಲ್ಲಿ ಕ್ಷಾರಾಂಶ ೦.೦೮೫ ಶೇಕಡ ಇದೆ. ಕ್ಷಾರಾಂಶವನ್ನು "ಎಪಿಡ್ರಿನ್" ಎಂದು ಕರೆಯಲಾಗುತ್ತದೆ. ಇದರ ಜೊತೆಗೆ ಇದರಲ್ಲಿ ಗಮ್ ಮತ್ತು ಅಲ್ಬ್ಯುಮಿನ್ ಇದೆ. ಇದರ ರುಚಿ ಸಿಹಿ, ವಿಪಾಕವೂ ಸಿಹಿ, ಶೀತ ವೀರ್ಯವಿದೆ, ಗುರು ಸ್ನಿಗ್ಧ ಗುಣಗಳಿವೆ. ಇದು ವಾತ ಪಿತ್ತಶಾಮಕ ವಿಶಿಷ್ಟಯೋಗಗಳು – ಬಲಾರಿಷ್ಟ ಬಲಾದಿಕ್ವಾಥ; ಬಲಾದ್ಯಘೃತ, ಚಂದನಬಲಾಕ್ಷಾದಿ ತೈಲ.

ಪ್ರಯೋಜ್ಯ ಅಂಗ: ಬೇರು

ಮುಖ್ಯವಾಗಿ ದೇಹಕ್ಕೆ ಬಲವನ್ನು ನೀಡುತ್ತದೆ. ಪಕ್ಷಾಘಾತ, ಏಕಾಂಗವಾತ, ಸಂಧಿ ಶೂಲಗಳು ದೌರ್ಬಲ್ಯ ಆಮವಾತ, ಸರ್ವಾಂಗಶೂಲ ಇತ್ಯಾದಿ ವಿಕಾರಗಳಲ್ಲಿ ಹೆಚ್ಚು ಉಪಯುಕ್ತ ಇದರ ತೈಲವನ್ನು ಹಚ್ಚುವುದರಿಂದ ಸಂಧಿಶೂಲೆ (ಸಂಧಿನೋವು) ಗುಣವಾಗುತ್ತದೆ.

ಬಿಲ್ವ

ಸಂಸ್ಕೃತ	—	ಬಿಲ್ವ
ಹಿಂದಿ	—	ಬೇಲ್
ತೆಲುಗು	—	ಮೋರೇಡು
ತಮಿಳು	—	ಬಿಲ್ವಂ
ಮಲೆಯಾಳಂ	—	ವಿಲ್ವಂ
ಬಂಗಾಲಿ	—	ಬೇಲ್
ಮರಾಠಿ	—	ಬೇಲ್



ಬಿಲ್ವ ಸುಮಾರು ೨೫–೩೦ ಅಡಿ ಉದ್ದ ಬೆಳೆಯುವ ಒಂದು ವೃಕ್ಷ ಇದು ೩–೪ ಅಡಿ ದಪ್ಪ ಇರುತ್ತದೆ. ಸುಮಾರು ಒಂದು ಅಂಗುಲ ಉದ್ದ ಮುಳ್ಳುಗಳನ್ನು ಹೊಂದಿರುತ್ತದೆ. ಎಲೆಗಳಿಗೆ ತನ್ನದೇ ಆದ ವಾಸನೆಯಿರುತ್ತದೆ. ಪುಷ್ಪಗಳು ಹರಿತಾಭಿ ಶ್ವೇತ, ಸುಗಂಧಯುಕ್ತ, ಹಣ್ಣು ೨–೪ ಅಂಗುಲ ದಪ್ಪ, ಗೋಲಾಕಾರ, ಬೀಜಗಳು ಅನೇಕ. ಇದು ಭಾರತದ ಎಲ್ಲೆಡೆಯಲ್ಲೂ ದೊರೆಯುತ್ತದೆ. ವಿಶೇಷವಾಗಿ ೪,೦೦೦ ಅಡಿಯ ಎತ್ತರದಲ್ಲಿ ದೊರೆಯುತ್ತದೆ.

ರಾಸಾಯನಿಕ ಸಂಘಟನೆಃ ಫಲದಲ್ಲಿ ಪೆಕ್ಟಿನ್, ಶುಗರ್–ಶೇ.೪.೬ ಟೇನಿಕ್ ಶೇ.೯ ಉಡನಶೀಲ ತೈಲ, ಕಹಿ ಸತ್ವ, ನಿರ್ಯಾಸ ಶೇ.೨ ಪತ್ರದಲ್ಲಿ ಏಲಿಗನ್,


ಎಗಲಿನಿನ್ ಇರುತ್ತದೆ. ಗುಣದಲ್ಲಿ ಇದು ಲಘು, ರೂಕ್ಷ ರಸದಲ್ಲಿ ಕಹಿ ಒಗರು, ವಿಪಾಕದಲ್ಲಿ ಖಾರ ಹಾಗೂ ವೀರ್ಯದಲ್ಲಿ ಉಷ್ಣ.

ಉಪಯೋಗ: ಇದರ ಎಲೆಗಳು ವಾತಹರ ಹಾಗೂ ವೇದನಾ ಸ್ಥಾಪಕ. ಇದನ್ನು ನೇತ್ರಾಭಿಷ್ಯಂದ, ಪಾರ್ಶ್ವಶೂಲೆ (ಪಕ್ಕೆನೋವು) ಶೋಥಗಳಲ್ಲಿ ಉಪಯೋಗಿಸಬಹುದು. ಕಣ್ಣಿಗೆ ಎಲೆಗಳ ರಸ ಹಾಕಬಹುದು. (ನೇತಾಭಿಷ್ಯಂದಕ್ಕೆ) ಹಾಗೂ ಪಾರ್ಶ್ವ ಶೂಲ ಮುಂತಾದವುಗಳಿಗೆ ಎಲೆಗಳ ಶಾಖ ಉಪಯುಕ್ತ. ಇದಲ್ಲದೆ ವಾತವ್ಯಾಧಿ ಆಕ್ಷೇಪಕ, ಉನ್ಮಾದ, ಅಗ್ನಿಮಾಂದ್ಯ, ಅತಿಸಾರ, ಪ್ರವಾಹಿಕಾ ಗೃಹಣಿ, ಹೊಟ್ಟೆನೋವು, ರಕ್ತಾತಿಸಾರ, (ಮಲದೊಡನೆ ರಕ್ತ) ಹೃದಯ ದೌರ್ಬಲ್ಯ, ಪ್ರತಿಶ್ಯಾಯ, ಕೆಮ್ಮು, ದಮ್ಮು ಶ್ವೇತ ಪ್ರದರ, ಸೂತಿಕಾ ರೋಗ ಹಾಗೂ ವಿಷಮಜ್ವರದಲ್ಲಿ ಉಪಯುಕ್ತ.

ಪ್ರಯೋಜ್ಯ ಅಂಗ: ಚೂರ್ಣ ೫–೧೦ ಗ್ರಾಂಸ್ ಸ್ವರಸ ೧೦–೨೦ ಎಂ. ಎಲ್.
ಯೋಗ: ಬಿಲ್ವ ಪಂಚಕ ಕ್ವಾತ, ಬಿಲ್ವಾದಿ ಚೂರ್ಣ, ಬಿಲ್ವಾದಿ ಘೃತ, ಬಿಲ್ವತೈಲ, ಬಿಲ್ವ ಮೂಲಾದಿ ಗುಟಿಕಾ.

ಬೇವು

ಸಂಸ್ಕೃತ	–	ನಿಂಬಃ
ಹಿಂದಿ	–	ನಿಂಬ್
ತೆಲುಗು	–	ವೇಪಚೆಟ್ಟು
ತಮಿಳು	–	ವೇಂಬು
ಮಲೆಯಾಳಂ	–	ವೇಪ್ಪು



MELIA AZADIRACHTA, L.
ಬೇವು

ಬಹು ಉಪಯೋಗಿ ಸಸ್ಯ ಎಂದೇ ಹೆಸರಾಗಿರುವ ಬೇವು ಭಾರತದ ಎಲ್ಲಾ ಕಡೆ ಕಂಡುಬರುತ್ತದೆ. ನೂತನ ವರ್ಷವನ್ನು ಬೇವು ಬೆಲ್ಲ ನೀಡಿ ನಮ್ಮ ರಾಜ್ಯದ ಜನರು ಸ್ವಾಗತಿಸುವುದು ವಾಡಿಕೆ. ಮೈದಾನ ಪ್ರದೇಶದ ಮರವಾದ ಬೇವು ಹೆಚ್ಚುಮಳೆ ಬೀಳುವ ಪ್ರದೇಶದಲ್ಲಿ ಕಂಡುಬರುವುದಿಲ್ಲ. ಕೆರೆ, ಕಾಲುವೆ,ದಂಡೆಗಳಲ್ಲಿ ಹುಲುಸಾಗಿ ಬೆಳೆವ ಬೇವು ಅತ್ಯಂತ ಉಪಯುಕ್ತ ಔಷಧಿಯುಕ್ತ ಗುಣ ಹೊಂದಿದೆ. ಈ ಮರದ ಪ್ರತಿಯೊಂದು ಭಾಗವೂ ಒಂದಿಲ್ಲೊಂದು ಉಪಯೋಗಕ್ಕೆ ಬರುವುದು ವಿಶೇಷ.

ಬೇವು ಸದಾ ಹಸಿರಾಗಿದ್ದು ಎಲೆಗಳು ಸಂಯುಕ್ತ ಪತ್ರ ಹೊಂದಿದ್ದು ಎಲೆ ಅಂಚು ಗರಗಸದಂತೆ ಬಾಗಿರುತ್ತದೆ. ಕಪ್ಪು ಕಂದು ತೊಗಟೆ, ಎಲೆಗಳ ಕಂಕುಳಲ್ಲಿ ಹೂಗೊಂಚಲು ಬಿಡುತ್ತದೆ. ಹೂ ಬಿಳಿ ಬಣ್ಣ, ಜೇನಿನ ಸುವಾಸನೆ. ಮಾರ್ಚ್–ಮೇ ತಿಂಗಳಲ್ಲಿ ಹೂ ಕಂಡುಬಂದರೆ ಸೆಪ್ಟೆಂಬರ್, ನವೆಂಬರ್ ತಿಂಗಳಲ್ಲಿ ಕಾಯಿ ಬಲಿಯುತ್ತದೆ. ಹಣ್ಣುಗಳ ಬಣ್ಣ ತಿಳಿಹಳದಿ, ಬೀಜ ಶೇಖರಿಸುವ ಕಾಲವೂ ಇದೇ ಆಗಿದೆ.

ಬೇವಿನ ಮರದ ತೊಗಟೆ, ಗೋಂದು, ಎಲೆ ಹೂವು, ಚಿಗುರು, ಬೀಜ, ಬೀಜದ ಎಣ್ಣೆ, ಹಿಂಡಿ ಮತ್ತು ಬೇವಿನ ರಸವನ್ನು ಔಷಧಿಯಾಗಿ ಉಪಯೋಗಿಸುತ್ತಾರೆ.

ಬಿಸಿ ನೀರಿನಲ್ಲಿ ಎಲೆ ನೆನೆಸಿ ಸ್ನಾನ ಮಾಡಿದರೆ ತುರಿ ಕಜ್ಜಿ ಇದ್ದಾಗ ಸೊಪ್ಪನ್ನು ಅರೆದು ಅದರ ರಸ ಹಚ್ಚುವುದಿದೆ.

ಬೇವಿನ ಸೇವನೆ ನಂಜನ್ನು ಹೊರ ತೆಗೆಯುತ್ತದೆ.

ಅತ್ಯಂತ ಕಹಿಯಾದರೂ ಬೇವು ಸಂಜೀವಿನಿ. ಪುಸ್ತಕ ಹಾಳಾಗದಂತೆ ಸೊಪ್ಪನ್ನು ಒಣಗಿಸಿ ಮಧ್ಯೆ ಇಡುತ್ತಾರೆ.

ಎಳೆ ಕಡ್ಡಿಗಳನ್ನು ಬ್ರಷ್ ಬದಲು ಹಲ್ಲುಜ್ಜಲು ಬಳಸುತ್ತಾರೆ. ಸೊಳ್ಳೆಕಾಟ ತಡೆಯಲು ಎಲೆಯ ಹೊಗೆ ಮಾಡುತ್ತಾರೆ. ಹಣ್ಣುಗಳಿಂದ ಎಣ್ಣೆಯನ್ನು, ಜಜ್ಜಿ ಅಥವಾ ಕುದಿಸಿ ತೆಗೆಯುತ್ತಾರೆ.

ಔಷಧಿಯಾಗಿ, ಸಾಬೂನು ತಯಾರಿಕೆ, ಟೂತ್ ಪೇಸ್ಟ್‌ಗಳಿಗೆ, ದೀಪಕ್ಕೆ ಎಣ್ಣೆ ಬಳಸಲಾಗುತ್ತದೆ. ರೇಷ್ಮೆಗೆ ಬಣ್ಣ ಹಾಕಲು ಈ ಮರದ ಗೊಂದು ಬಳಸುತ್ತಾರೆ. ನಾರಿನಿಂದ ಹಗ್ಗ ತಯಾರಿಸುತ್ತಾರೆ.

ಬಲವರ್ಧನೆಗೆ ಬೇರಿನ ತೊಗಟೆಯ ಚೂರ್ಣವನ್ನು ೧–೨ ಚಮಚ ಬಿಸಿನೀರಿನೊಂದಿಗೆ ಖಾಲಿ ಹೊಟ್ಟೆಯಲ್ಲಿ ಸೇವಿಸಬಹುದು. ಹಣ್ಣು ಕೀಟ ನಾಶಕ. ಗಾಯದಲ್ಲಿ ಕೀವಾಗದಂತೆ, ನೊಣ ದೂರ ಮಾಡಲುಬೇವಿನ ಎಣ್ಣೆಯನ್ನೋ ಅಥವಾ ಎಲೆಯ ಕಲ್ಕವನ್ನೋ ಹಚ್ಚಬಹುದು.

ಬೇರಿನ ರಸವನ್ನು ಜ್ವರದಲ್ಲಿಪ್ರತಿಬಂಧಕವಾಗಿ ಉಪಯೋಗಿ ಸುತ್ತಾರೆ. ಒಟ್ಟಿನಲ್ಲಿ ಅನೇಕ ಔಷಧಿ ಗುಣಯುಕ್ತವಾದ ಬೇವು ಜ್ವರ ಚರ್ಮರೋಗ, ಕ್ರಿಮಿ ನಾಶಕ ಇಂಥ ಸಂದರ್ಭಗಳಲ್ಲಿ ಮುಖ್ಯವಾಗಿ ಬಹಳ ಪ್ರಯೋಜನಕಾರಿ.

ಕೂಷ್ಮಾಂಡ (ಬೂದುಗುಂಬಳಕಾಯಿ)
(BENINCASA HISPIDA)

ಸಂಸ್ಕೃತ	–	ಕೂಷ್ಮಾಂಡ
ಹಿಂದಿ	–	ಗೊಲ್ಕಂಡು
ತೆಲುಗು	–	ಬೂದಿಗುಮ್ಮಡಿ
ತಮಿಳು	–	ಕಲ್ಯಾಣ್‌ಪೂಷಿಣಿ
ಮಲೆಯಾಳಂ	–	ಕುಂಬಳಂ



ಮೂರೆಯುವಿಕೆ (ಉತ್ಪತ್ತಿ ಸ್ಥಾನ) ಇಡೀ ಭಾರತದಲ್ಲಿ ದೊರೆಯುತ್ತದೆ. ಹೆಚ್ಚಾಗಿ ಉತ್ತರ ಭಾರತದಲ್ಲಿ ಕಂಡು ಬರುತ್ತದೆ.

ವಿವರಣೆ: ಕೂಷ್ಮಾಂಡವು ಒಂದು ಬಳ್ಳಿ ಎಲೆ - ೧೧.೫ ಸಿ. ಎಂ. (ವ್ಯಾಸ) ತೊಟ್ಟು ೭.೫-೧೦ ಸಿ. ಎಂ. ಹೂವು-೭೫-೧೦ ಸಿ. ಎಂ: ಉದ್ದ, ಬಣ್ಣ - ಗುಲಾಬಿ. ಹಣ್ಣು - ೩೦- ೪೫ ಸಿ. ಎಂ. ಉದ್ದ, ದುಂಡಗಿರುವ ಇದರ ಹಣ್ಣು ಚಪ್ಪಟೆಯಾಗಿರುವ ಅನೇಕ ಬೀಜಗಳನ್ನೊಳಗೊಂಡಿರುತ್ತದೆ.

ರಾಸಾಯನಿಕ ಸಂಘಟನೆ: ಪ್ರಧಾನವಾಗಿ - ಆಲ್ಕಲಾಯ್ಡ್, ಕುಕುರ್ಬಿಟಿನ್ ಆಕ್ರಿಡ್ ರೆಸಿನ್, ಫ್ರೊಕ್ಸ್, ಮಯೊಸಿನ್ಸ್, ಉಷ್ಣದ ಅಂಶ

ಗುಣಗಳು:

ಗುಣ-ಲಘು, ಸ್ನಿಗ್ಧ ವಿಪಾಕ-ಸಿಹಿ ರಸ-ಸಿಹಿ

ವೀರ್ಯ-ಶೀತ

ಪ್ರಭಾವ: ಮೇಧ್ಯ-ಪಕ್ವಫಲವು ಬುದ್ಧಿಶಕ್ತಿಯನ್ನು ತೀಕ್ಷ್ಣಗೊಳಿಸುತ್ತದೆ.

ಪ್ರಯೋಜನಗಳು:

ಸರಿಯಾಗಿ ಪಕ್ವವಾದ ಫಲವು ವಾತ, ಪಿತ್ತ, ಕಫಗಳೆಂಬ ಮೂರು ದೋಷಗಳನ್ನು ಶಮನ ಮಾಡುತ್ತದೆ.

ಪ್ರಮುಖವಾಗಿ ಬೂದುಗುಂಬಳವು ಊತ, ಮೈಕೈಉರಿ, ಬುದ್ಧಿಮಾಂದ್ಯ, ರಕ್ತಸ್ರಾವ ರಕ್ತಪಿತ್ತ ಮೂಗಿನಿಂದ–ಗುದದಿಂದ ರಕ್ತಸ್ರಾವವಿರುವ ವ್ಯಾಧಿ, ರಕ್ತಸ್ರಾವಸಹಿತ ಮೂಲ ವ್ಯಾಧಿ ಮೂತ್ರ ವಿಕಾರಗಳಲ್ಲಿ ಉಪಯುಕ್ತವಾಗಿದೆ.

ಈ ಸಸ್ಯದ ಪತ್ರದ ಅಂದರೆ ಎಲೆಯ ರಸವು ಸುಟ್ಟಗಾಯಮೇಲೆ ಹಚ್ಚುವುದರಿಂದ ಗಾಯವು ವಾಸಿಯಾಗುತ್ತದೆ. ಹೀಗೆ [illegible]ಾಂಡವು ಶಕ್ತಿ ವರ್ಧಕ, ಬುದ್ಧಿಶಕ್ತಿಯ ವರ್ಧಕ ಹಾಗೂ ಅನೇಕ ರೋ[illegible]ಕವಾಗಿ ಕಾರ್ಯ ಮಾಡುತ್ತದೆ.

ಬೂದುಗುಂಬಳದ ಪ್ರಮುಖ ತಯಾರಿಕೆಗಳು (ಯೋಗ[illegible] ಕೂಷ್ಮಾಂಡಲೇಹ ಕೂಷ್ಮಾಂಡಘೃತ

ಪ್ರಮಾಣ: ಫಲ ಸ್ವರಸ ೧೦–೨೦ ಎಂ. ಎಲ್

ಬೀಜಚೂರ್ಣ ೫–೧೦ ಗ್ರಾಂಸ್.

ಮಹಾನಿಂಬಿ

(MELIA AZEDARAH)

ಕನ್ನಡ	—	ತುರುಕಬೇವು, ಹುಚ್ಚಬೇವು, ಚಿಕ್ಕಬೇವು
ಸಂಸ್ಕೃತ	—	ಮಹಾನಿಂಬ, ಹಿಮದ್ರುಮ
ಹಿಂದಿ	—	ಬಕಾಯನ್
ತೆಲುಗು	—	ಕೊಂಡವೇಪ
ತಮಿಳು	—	ಮಲೈವೆಂಬು
ಬೆಂಗಾಲಿ	—	ಗೋರೇನೀಮ್
ಮರಾಠಿ	—	ವಿಲಾಯಿತಿ ನೀಮ್
ಆಂಗ್ಲ	—	ಪರ್ಶಿಯನ್ ಲಿಲಾಕ್



B. OITRUS LIMONUM, WALL
ಗಜನಿಂಬೆ.

ರಾಸಾಯನಿಕ ಸಂಘಟನೆ: ಇದರಲ್ಲಿ ಹಳದಿ ರಾಸಾಯನಿಕವು ಕ್ರಿಯಾಶೀಲವಾಗಿದೆ.

ಉಪಯೋಗ : ಮೂಲವು : ಕ್ರಿಮಿಗಳನ್ನು ನಿವಾರಿಸುತ್ತದೆ. ಇದರ ರಸವನ್ನು ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಕೊಟ್ಟರೆ ಜಂತು ಹುಳುವು ನಾಶವಾಗುವುದು. ಎಲೆಯ ಸ್ವರಸವು ಕೂಡ ಕ್ರಿಮಿಹರವಾಗಿದೆ. ಹೂವು ಹಾಗೂ ಎಲೆಗಳನ್ನು – ತಲೆ ಬೇನೆಯಲ್ಲಿ ಲೇಪವಾಗಿ ಉಪಯೋಗಿಸಲಾಗುತ್ತದೆ.

ಎಲೆಯ ಸ್ವರಸವನ್ನು ಚರ್ಮ ರೋಗಗಳಲ್ಲಿ ಬಾಹ್ಯ ಲೇಪವಾಗಿಯೂ ಹಾಗೂ ಔಷಧವಾಗಿ ಸೇವಿಸ ಬಹುದು. ಅಲ್ಲದೆ ಕೆಮ್ಮು ನೆಗಡಿಗಳಲ್ಲಿ ದರ ರಸವನ್ನು ಜೇನುತುಪ್ಪದೊಂದಿಗೆ ಸೇವಿಸಬೇಕು. ಜ್ವರಗಳಲ್ಲಿಯೂ ಸಹ ಇದರ ಸ್ವರಸವನ್ನು ಸೇವಿಸಬಹುದಾಗಿದೆ.

ಮುತ್ತುಗ (ಪಲಾಶ)

(BUTEA MONOSPERMA)

ಕನ್ನಡ	–	ಮುತ್ತುಗದ ಮರ
ಸಂಸ್ಕೃತ	–	ಪಲಾಶ
ಹಿಂದಿ	–	ಪಲಾಶ್
ತೆಲುಗು	–	ಪಲಾಡುಲು
ತಮಿಳು	–	ಮುರುಕ್ಕನ್ ಮಾರಮ್
ಮಲೆಯಾಳಂ	–	ಪೈಲಾಚಂ



ಉತ್ಪತ್ತಿ ಸ್ಥಾನ : ಭಾರತದಲ್ಲಿಹೆಚ್ಚಿನ ಕಡೆಗಳಲ್ಲಿ ಕಾಣಸಿಗುತ್ತದೆ.

ವಿವರಣೆ : ಮುತ್ತುಗವು ಒಂದು ಮರವಾಗಿದ್ದು ಸುಮಾರು ೧೨ ರಿಂದ ೧೫ ಮೀಟರ್ ಎತ್ತರವಿರುತ್ತದೆ. ತೊಗಟೆಯು ಒರಟು ಮತ್ತು ಬೂದು ವರ್ಣದ್ದಾಗಿರುತ್ತದೆ.

ಹೂವುಗಳು : ಸುಮಾರು ೧೫ ಸಿ.ಎಂ. ಉದ್ದ, ಕೆಂಪು ಬಣ್ಣವನ್ನು ಹೊಂದಿರುತ್ತದೆ. ಹಣ್ಣು ಕಾಯಿ ಒಂದು ಬೀಜವನ್ನೊಳಗೊಂಡಿರುತ್ತದೆ.

ರಾಸಾಯನಿಕ ಸಂಘಟನೆ : ಮುಖ್ಯವಾಗಿ 'ಬಾಲ್ಸೊನಿನ್' ಕ್ರಿಮಿನಾಶಕವಾಗಿ ಕಾರ್ಯ ಮಾಡುತ್ತದೆ. ಇದಲ್ಲದೆ ಕಿನೊಟ್ಯೂನಿಕ್ ಆ್ಯಸಿಡ್ ಎಂಬ ರಾಸಾಯನಿಕವನ್ನು ಒಳಗೊಂಡಿದೆ.

ಗುಣಗಳು : ೧. ತೊಗಟೆ ೨. ಹೂವು

೧. ತೊಗಟೆ	೨. ಹೂವು
ಗುಣ–ಲಘು, ರೂಕ್ಷ	ಗುಣ–ಸ್ನಿಗ್ಧ
ರಸ – ಖಾರ ಮತ್ತು ಕಹಿ	ರಸ – ಸಿಹಿ
ವೀರ್ಯ – ಉಷ್ಣ	ವೀರ್ಯ – ಶೀತ
ವಿಪಾಕ – ಸಿಹಿ	ವಿಪಾಕ – ಸಿಹಿ

ಪ್ರಯೋಜನಗಳು : ಮುತ್ತುಗದ ಹೂಗಳು– ಅತಿಯಾದ ಬಾಯಾರಿಕೆ, ಚರ್ಮರೋಗಗಳು ಕಣ್ಣಿನ ರೋಗಗಳಲ್ಲಿ ತುಂಬಾ ಉಪಯುಕ್ತವಾದವು.

ಬೀಜವನ್ನು ಹೊಟ್ಟೆಹುಳದ ಬಾಧೆ ಭೇದಿ (ಅತಿಸಾರ), ರಕ್ತಪಿತ್ತ, ಮೂಲವ್ಯಾಧಿ, ಮಧುಮೇಹ (ತೊಗಟೆ ಮತ್ತು ನಿರ್ಯಾಸ) ಗಳಲ್ಲಿ ಉಪಯೋಗಿಸುತ್ತಾರೆ ಅಲ್ಲದೆ ಸ್ತ್ರೀಮರ ಮುಟ್ಟು ದೋಷ (ಪ್ರದರ) ಮತ್ತು ಗರ್ಭಾಶಯದ ವಿಕಾರಗಳಲ್ಲಿ ಫಲಾಶವು ಉಪಯೋಗ ಕಾರಿಯಾಗಿದೆ.

ಪ್ರಯೋಜನಕಾರಿ ಅಂಗ: ಸಸ್ಯದ ಎಲ್ಲಾಭಾಗಗಳೂ ಉಪಯೋಗಕಾರಿ (ಪಂಚಾಂಗ)* ಮುಖ್ಯವಾದ ತಯಾರಿಕೆ (ಯೋಗ)ಗಳು ಫಲಾಶಕ್ಷಾರಘೃತ, ಫಲಾಶಬೀಜಾದಿ ಚೂರ್ಣ.


---

* ಪಂಚಾಂಗ–ಫಲ, ಪುಷ್ಪ, ತೊಗಟೆ, ಪತ್ರ (ಎಲೆ) ಮತ್ತುಬೇರು ಇವುಗಳ ಚೂರ್ಣ ೩–೬ ಗ್ರಾಂಸ್.

ಮದನಫಲ

(RANDIA DUMETORUM)

ಕನ್ನಡ	–	ಮಗ್ಗಾರೆ ಕಾಯಿ
ಸಂಸ್ಕೃತ	–	ಮದನ
ಹಿಂದಿ	–	ಮೈನ್ ಫಲ
ತೆಲುಗು	–	ಮೃಂಗಕಾಯಿ
ತಮಿಳು	–	ಪುಂಗರಾರಿ ಮುರಕ್ಕಲಮ್
ಮಲೆಯಾಳಂ	–	ಮೃಂಗಕಾಯಿ
ವೈಜ್ಞಾನಿಕ ಹೆಸರು	–	ರ್‍ಯಾಂಡಿಯ ಡ್ಯುಮೆ ಟೋರಂ



RANDIA DUMETORUM, Lam.

ಮದನಫಲವು ಅತೀ ಶುದ್ಧವಾದ ಶ್ರೇಷ್ಠವಾದ ವಾಮಕ ದ್ರವ್ಯವಾಗಿದೆ. ಸುಕುಮಾರ ಪ್ರಕೃತಿಯವರಿಗೆ ಕೇವಲ ಇದರ ಚೂರ್ಣವನ್ನು ಕಮಲದ ಹೂಗಳ ಮೇಲೆ ಸಿಂಪಡಿಸಿ, ಅದನ್ನು ಹೇಳಿದರೂ ವಮನ ಉಂಟಾಗುತ್ತದೆ. ಎಂಬುದಾಗಿ ಗ್ರಂಥಗಳಲ್ಲಿ ಹೇಳಲಾಗಿದೆ. ಚರಕನು ಇದನ್ನು ವಮನ ಮತ್ತು ಫಲನಿಗಣಗಳಲ್ಲಿಯೂ, ಸುಶತನು ಊರ್ಧ್ವ ಭಾಗಹರ ಆರಗ್ವದಾದಿ, ಮತ್ತು ಮುಷ್ಕಕಾದಿ ಗುಣಗಳಲ್ಲಿಯೂ ಇದನ್ನು ಹೆಸರಿಸಿದ್ದಾನೆ. ಸಂಸ್ಕೃತದಲ್ಲಿ ಇದನ್ನು ಮದನ, ವರ್ಧನ ಪಿಂಡಿ, ಶಲ್ಯಕ, ವಿಫ ಪುಷ್ಪಕ ಎಂದು ವರ್ಣಿಸಲಾಗಿದೆ. ಶಲ್ಯಕ ಎಂದರೆ ಕಂಟಕಮುಕ್ತವಾದದ್ದು ಎಂದು ಅರ್ಥ. ಕನ್ನಡದಲ್ಲಿ ಇದನ್ನು ಮಗ್ಗಾರೆಕಾಯಿ ಎನ್ನುತ್ತಾರೆ.

ಮದನ ಫಲದ ಮರವು ಸಾಧಾರಣವಾಗಿ ಎತ್ತರಕ್ಕೆ ಬೆಳೆಯುವ ಕಂಟಕಮುಕ್ತವಾಗಿರುವಂತಹುದು. ಕಾಡುಗಳಲ್ಲಿ ಕಂಡು ಬರುತ್ತದೆ. ಇದು ಸುಮಾರು ೩೦ ಅಡಿ ಎತ್ತರಕ್ಕೆ ಬೆಳೆಯುತ್ತದೆ. ಎಲೆಗಳು ೧-೩ ಅಂಗುಲ ಉದ್ದವಾಗಿದ್ದು, ದುಂಡಗಿರುತ್ತದೆ. ಮತ್ತು ಎಲೆಯ ತುದಿ ತಕ್ಕಮಟ್ಟಿಗೆ ಚೂಪಾಗಿರುತ್ತದೆ. ಹೂಗಳು ಮೊದಲು ಬಿಳಿವರ್ಣಕ್ಕಿದ್ದು, ಅನಂತರ ಹಳದಿ ವರ್ಣಕ್ಕೆ ತಿರುಗುತ್ತದೆ. ಹಣ್ಣುಗಳು ದುಂಡಗಿದ್ದು ೩-೪ ರಿಂದ. ಒಂದರಿಂದ ಒಂದೂವರೆ ಅಂಗುಲ ವ್ಯಾಸ ಹೊಂದಿದ್ದು, ಹಣ್ಣು ಹಳದಿ ವರ್ಣದ್ದಾಗಿರುತ್ತದೆ. ಪ್ರತಿ ಹಣ್ಣಿನ ಒಳಗೆ ನಾಲ್ಕು ಬೀಜಗಳಿರುತ್ತವೆ. "ಇದನ್ನು ಮದನ ಪಿಪ್ಪಲಿ" ಎಂಬ ವಿಶೇಷ ಹೆಸರಿನಿಂದ ಕರೆಯಲಾಗಿದೆ.

ಮದನಫಲವು ಗುಣದಲ್ಲಿ ಲಘು ಮತ್ತು ರೂಕ್ಷವಾಗಿರುತ್ತದೆ. ರಸವನ್ನು ಮಧುರ, ಕಹಿ, ಖಾರ, ಒಗರು, ವಿಪಾಕವು ಖಾರ ಮತ್ತು ವೀರ್ಯದಲ್ಲಿ ಉಷ್ಣವಾಗಿರುತ್ತದೆ. ಇದರ ಅತ್ಯಂತ ವಿಶಿಷ್ಟವಾದ ಕಾರ್ಯ ವಮನವು ಪ್ರಭಾವದಿಂದ ಎಂದು ಆಯುರ್ವೇದದಲ್ಲಿ ಹೇಳಲಾಗಿದೆ. ಇದು ಕಫ ವಾತ ಶಾಮಕ ಮತ್ತು ಪಿತ್ತ ನಿಸ್ಸಾರಕ.

ಮದನ ಫಲದ ಸಿಪ್ಪೆ ಮತ್ತು ಹಣ್ಣು ವಮನಕ್ಕಾಗಿ ಮತ್ತು ಉದರಶೂಲೆ ಶಮನಾರ್ಥ ಉಪಯೋಗಿಸಬಹುದು. ಮರದ ತೊಗಟೆಯು ನರರೋಗಗಳಲ್ಲಿ ಉಪಯುಕ್ತ. ಆಮವಾತದಲ್ಲಿ ಮತ್ತು ಸಂಧು ಶೂಲೆಗಳಲ್ಲಿ ಮದನ ಫಲವನ್ನು ಅರೆದು ಲೇಪಿಸ ಬಹುದು. ಮದನಫಲವು ಒಗರು ರಸವನ್ನು ಹೊಂದಿರುವುದರಿಂದ ಆಮಶಂಕೆ, ಭೇದಿಗಳಲ್ಲಿಯೂ ಇದನ್ನು ಉಪಯೋಗಿಸಬಹುದು. ಚರಕ ಸಂಹಿತೆಯಲ್ಲಿ ಕಲ್ಪಸ್ಥಾನದಲ್ಲಿ ಮದನಫಲದ ೧೩೩ ಯೋಗಗಳನ್ನು ಹೇಳಲಾಗಿದೆ.

ಚೂರ್ಣ ರೂಪದಲ್ಲಿ ಮದನವನ್ನು ಉಪಯೋಗಿಸುವುದಾದರೆ ೫–೧೦ ಗ್ರಾಂ (ಇದು ವಮನಾದ) ಮತ್ತು ೧–೨ ಗ್ರಾಂ ಉಳಿದ ರೋಗಗಳಲ್ಲಿಯೂ ಉಪಯೋಗಿಸಬಹುದು. ಕ್ವಾಥ ರೂಪದಲ್ಲಿ ಉಪಯೋಗಿಸವುದಾದರೆ ಒಂದು ಔನ್ಸ್‌ಗಳಷ್ಟು ಉಪಯೋಗಿಸ ಬಹುದು ಇದರ ವಿಶಿಷ್ಟ ಯೋಗ : ಮದನಾದಿ ಲೇಪ.

ಮತ್ತಿಮರ (ಅರ್ಜುನ)

(TERMINALIA ARJUNA)

ಸಂಸ್ಕೃತ	—	ಅರ್ಜುನ
ಹಿಂದಿ	—	ಅರ್ಜುನ
ತೆಲುಗು	—	ತೆಲ್ಲಮತ್ತಿ
ತಮಿಳು	—	ಬೆಲ್ಮ



TERMINALIA ARJUNA, W & A.
ಮತ್ತಿ ([illegible])

ಮತ್ತಿಯು ಸುಮಾರು ೬೦—೮೦ ಅಡಿ ಎತ್ತರ ಬೆಳೆಯುವ ಮರವಾಗಿದೆ. ಇದರ ತೊಗಟೆಯು ಹೊರಗಿನಿಂದ ಬಿಳಿ ಬಣ್ಣದಿಂದ ಕೂಡಿ ಒಳಗಿನ ಭಾಗವು ಕೋಮಲವಾಗಿಯೂ ರಕ್ತವರ್ಣದಿಂದ ಕೂಡಿದೆ. ಇದರ ಎಲೆಗಳು ಮಾವಿನ ಎಲೆಯಾಕಾರದಲ್ಲಿರುವುವು. ಇವು ಸುಮಾರು ೪—೬ ಅಂಗುಲ ಉದ್ದ ೧—೩ ಅಥವಾ ಅಂಗುಲ ಅಗಲವಾಗಿರುವುದು. ಇದರ ಹೂವುಗಳು ಬಿಳಿ ಅಥವಾ ನಸು ಹಳದಿ ಬಣ್ಣದಿಂದ ಕೂಡಿದ್ದು ಗೊಂಚಲಾಗಿರುವುದು. ಇದರ ಹಣ್ಣು, ಧಾರೆ ಹುಳಿಯ ಹಣ್ಣಿನಂತೆ, ರೆಕ್ಕೆಗಳಿಂದ ಕೂಡಿದೆ. ಆದರೆ ಇದು ಆಕಾರದಲ್ಲಿ ಚಿಕ್ಕದಾಗಿದೆ. ಒಂದು ಒಂದೂವರೆ ಅಂಗುಲ ಉದ್ದವಾಗಿಯೂ ೫—೭ ರೆಕ್ಕೆಗಳಿಂದ ಕೂಡಿದೆ.

ಇದು ವಿಶೇಷವಾಗಿ, ಹಿಮಾಲಯ, ಬಂಗಾಲ ಬಿಹಾರ, ಮಧ್ಯಪ್ರದೇಶದಲ್ಲಿ ಕಂಡು ಬರುವುದು. ಅಲ್ಲದೇ ನದೀ ತೀರದಲ್ಲೂ ಕಂಡು ಬರುತ್ತದೆ.

ರಾಸಾಯನಿಕವಾಗಿ ಇದರ ತೊಗಟೆಯಲ್ಲಿ ಸಿಟೋಸ್ಟಿರಾಲ್, ಅರ್ಜುನೇಟಿನ್, ಮತ್ತು ಫ್ರೆಡಿಲೀನ್ ಎಂಬ 'ಅಂಶವಿದೆ. ಅಲ್ಲದೆ ಶೇಕಡಾ ೨೦—೨೫ ರಷ್ಟು ಡಯಾನಿನ್, ಶೇಕಡಾ ೦.೩೩ ರಷ್ಟು ಕ್ಯಾಲ್ಸಿಯಂ, ಶೇಕಡಾ ೦.೦೭೬ ರಷ್ಟು ಮ್ಯಾಗ್ನೇಶಿಯಂ, ಹಾಗೂ ಶೇಕಡಾ ೦.೦೭೬ ಅಲ್ಯುಮಿನಿಯಂ ಇದೆ.

ಇದು (ಮುಖ್ಯವಾಗಿ ತೊಗಟೆ) ಒಗರಾಗಿದೆ. ಗುಣದಲ್ಲಿ ರೂಕ್ಷ ಹಾಗೂ ಲಘುವಾಗಿದೆ. ಈ ಗುಣಗಳಿಂದ ಕಫ ಹಾಗೂ ಪಿತ್ತನಾಶಕವಾಗಿದೆ.

ಮತ್ತಿ ಮರದ ತೊಗಟೆಯಿಂದ ಕಷಾಯವನ್ನು ತಯಾರಿಸಿ, ಇದನ್ನು ಗಾಯಗಳನ್ನು ತೊಳೆಯಲು ರಕ್ತ ಸ್ತಂಭಕವಾಗಿಯೂ ಬಳಸುವರು. ಅಭ್ಯಂತರ,

ರಕ್ತಸ್ರಾವದಲ್ಲಿ ರಕ್ತಸ್ತಂಭಕವಾಗಿ ಕೆಲಸ ಮಾಡುವುದು. ಇದರ ಕಷಾಯವು ಮುಖ್ಯವಾಗಿ ಹೃದಯದ ಮೇಲೆ ಕೆಲಸ ಮಾಡುವುದು. ಇದು ಹೃದಯದ ಸ್ನಾಯುಗಳಿಗೆ ಪುಷ್ಟಿಯನ್ನು ಕೊಡುವುದು. ರಕ್ತದೊತ್ತಡವನ್ನು ಕಡಿಮೆ ಮಾಡುವುದು. ಇದನ್ನು ಅತಿ ಮೂತ್ರದಲ್ಲಿಯೂ ರಕ್ತವಿಕಾರದಲ್ಲೂ, ಮೇಧೋಹರವಾಗಿ ಬಳಸಬಹುದು.

ಇದರ ಪ್ರಯೋಜ್ಯ ಅಂಗ ತೊಗಟೆ. ಇದರ ಕ್ಷೀರಪಾಕವನ್ನು ೫–೧೦ ಗ್ರಾಂ ನಷ್ಟು ಸ್ವರಸವನ್ನು ೧೦– ೨೦ ಮಿ.ಲೀ. ನಷ್ಟು ಕಷಾಯವನ್ನು ೪೦ ಎಂ.ಎಲ್‌ನಷ್ಟು ಹಾಗೂ ಚೂರ್ಣವನ್ನು ೫–೧೦ ಗ್ರಾಂ ನಷ್ಟು ಸೇವಿಸಬೇಕು.

ಮಿಶ್ರೇಯ

(ANATHUM SOWA)

ಕನ್ನಡ	–	ಸೊಪ್ಪುಸೀಗೆ
ಸಂಸ್ಕೃತ	–	ಮಿಶ್ರೇಯ
ಹಿಂದಿ	–	ಸೋಯ
ತೆಲುಗು	–	ಶಟಕುಪಿ ವಿಟ್ಟಲು
ತಮಿಳು	–	ಶತಕುಪಿಮರ್
ಮಲೆಯಾಳಂ	–	ಚತುಕುಪ್ಪ

ಈ ಗಿಡವು ಮುಖ್ಯವಾಗಿ ಚಳಿಗಾಲದಲ್ಲಿ ಭಾರತದ ಎಲ್ಲಾ ಭಾಗಗಳಲ್ಲಿ ಬೆಳೆಯುವಂತಹ ಗಿಡ. ಅಡಿಗೆಗೆ ಸೊಪ್ಪಿನ ರೂಪದಲ್ಲಿ ಇದರ ಬಳಕೆ ಜಾಸ್ತಿ.

ಇದರ ರಸ ಖಾರ ಮತ್ತು ಕಹಿ. ವೀರ್ಯ ಉಷ್ಣ, ಇದರಲ್ಲಿ ತೀಕ್ಷ್ಣತೆ ಹೆಚ್ಚಾಗಿರುತ್ತದೆ. ಕಫ ಮತ್ತು ವಾತವನ್ನು ಶಮನ ಮಾಡುತ್ತದೆ.

ರಾಸಾಯನಿಕ ಸಂಘಟನೆ : ಅನೇಥೀನ್ ಮತ್ತು ಕಾರ್ವಾಲ್ ಎಂಬ ೨ ಅಂಶಗಳಿಂದ ಇದರ ವಿಶೇಷವಾದ ವಾಸನೆ ಹೊಂದಿರುತ್ತದೆ.

ಉಪಯೋಗಗಳು : ಇದರ ಬೀಜ ಮತ್ತು ಮೂಲದ ಲೇಪನ ಸಂಧು ನೋವುಗಳನ್ನು ನಿವಾರಿಸುತ್ತದೆ.

ಈ ಸೊಪ್ಪನ್ನು ಅದರ ೧೬ ರಷ್ಟು ನೀರಿನೊಂದಿಗೆ ಕುದಿಸಿ, ಇದರ ಶಾಖದ ನೀರನ್ನು ಸಂಗ್ರಹಿಸಿ, ಸುಣ್ಣದ ನೀರಿನೊಟ್ಟಿಗೆ ೩ ಚಮಚದಷ್ಟು ಸೇವಿಸದರೆ ಬಿಕ್ಕಳಿಕೆ, ಹೊಟ್ಟೆ ಉಬ್ಬರ ಕಡಿಮೆ ಮಾಡುತ್ತದೆ.

ಈ ಮೇಲೆ ಹೇಳಿದ ಔಷಧಿಯು ಭೇದಿಯಾಗುವಾದ ಉಂಟಾಗುವ ತೀವ್ರವಾದ ಹೊಟ್ಟೆನೋವನ್ನು ತಡೆಗಟ್ಟಬಹುದು.

ಮಕ್ಕಳಲ್ಲಿ ಹಸಿವು ಮತ್ತು ಜೀರ್ಣಶಕ್ತಿಯನ್ನು ಹೆಚ್ಚಿಸಲು ಇದರ ಬೀಜಗಳು ೩೦ರಷ್ಟು ಪ್ರಮಾಣ ನೀರಿನೊಟ್ಟಿಗೆ ಕುದಿಸಿ, ಈ ಕಷಾಯವನ್ನು ರುಚಿಗೆ ಬೇಕಾದಷ್ಟು ಸಕ್ಕರೆಯೊಂದಿಗೆ ಕುಡಿಸಬಹುದು.

ಬೀಜವನ್ನು ಬೆಣ್ಣೆಯಲ್ಲಿ ಹುರಿದು, ಮೆಂಥ್ಯೆ ಬೀಜದೊಂದಿಗೆ ಪುಡಿ ಮಾಡಿ ಸೇವಿಸಿದರೆ ಬೇಧಿಯನ್ನು ನಿವಾರಿಸಬಹುದು.


ಎಲೆಗಳಿಗೆ ಸ್ವಲ್ಪ ಎಣ್ಣೆ ಸವರಿ ಬಾಂಡಲಿಯಲ್ಲಿ ಬೆಚ್ಚಗೆಮಾಡಿ ಉಷ್ಣದಿಂದಾಗುವ ಗುಳ್ಳೆಗಳಿಗೆ ಹಚ್ಚಿದರೆ, ಬಹಳ ಬೇಗ ಗುಳ್ಳೆಗಳು ಒಡೆಯುವುವು.

ಬಾಣಂತಿಯರಿಗೆ ಹಾಲು ಹೆಚ್ಚು ಮಾಡಲು, ನಿತ್ಯವೂ ಅಡಿಗೆ ರೂಪದಲ್ಲಿ ಬಳಸಬಹುದು.

ಮೆಣಸು

(PIPER NIGRUM)

ಸಂಸ್ಕೃತ	-	ಮರೀಚ
ಹಿಂದಿ	-	ಕಾಲಿಮಿಂಚ್
ತೆಲುಗು	-	ಮಿರಿಯಾಲು
ತಮಿಳು	-	ಮಳಗು
ಮಲೆಯಾಳಂ	-	ಕುರುಮುಳಕ
ಇಂಗ್ಲಿಷ್	-	ಬ್ಲ್ಯಾಕ್‌ಪೆಪ್ಪರ್



PIPER NIGRUM ಮೆಣಸು

ಇದು ಹೆಚ್ಚಾಗಿ ದಕ್ಷಿಣ ಭಾರತದ ಮಲಬಾರು ಪ್ರದೇಶದಲ್ಲಿ ಒಂದು ವಾಣಿಜ್ಯ ಬೆಳೆಯಾಗಿ ಬೆಳೆಸಲಾಗುತ್ತಿದೆ. ಇದು ಮರದ ಮೇಲೆ ಹಬ್ಬುವಂತಹ ಬಳ್ಳಿ. ಇದರ ಕಾಯಿ ಹಸಿರಾಗಿದ್ದು ದ್ರಾಕ್ಷಿಗೊಂಚಲಿನಂತೆ ಇರುತ್ತದೆ. ಇದು ಹಣ್ಣಾದಂತೆ ಕೆಂಪಗಾಗುತ್ತಾ ಒಣಗಿದ ಮೇಲೆ ಕಪ್ಪಾಗುತ್ತದೆ. ಇದು ಸಾಮಾನ್ಯವಾಗಿ ಸಾಂಬಾರು ಪದಾರ್ಥವಾಗಿ ಉಪಯೋಗಿಸಲಾಗುತ್ತದೆ. ಇದರ ಫಲವನ್ನು ಔಷಧಕ್ಕಾಗಿ ಉಪಯೋಗಿಸಲಾಗುತ್ತದೆ.

ಇದರ ರಸ ಖಾರ, ಲಘು ಮತ್ತು ತೀಕ್ಷ್ಣಗುಣ ಹೊಂದಿದ್ದು ಉಷ್ಣ ವೀರ್ಯ ಉಳ್ಳದ್ದಾಗಿದೆ.

ರಾಸಾಯನಿಕ ಸಂಘಟನೆ : ಇದರ ಫಲದಲ್ಲಿ 'ಪೈಪರೀನ್ ಶೇ. ೫.೯ ಎಂಬ ರಾಸಾಯನಿಕ ಪದಾರ್ಥವಿದೆ.

ಉಪಯೋಗಃ ಇದರ ಫಲ ಚೂರ್ಣದಿಂದ ತಯಾರಿಸಿದ ಕಷಾಯವನ್ನು ಬಾಯಲ್ಲಿ ಇಟ್ಟು ಮುಕ್ಕಳಿಸಿದರೆ ಹಲ್ಲುನೋವು, ಗಂಟಲು ನೋವು ಕೂಡಲೆ ಕಡಿಮೆಯಾಗುತ್ತದೆ.


ಮೆಣಸನ್ನು ನೀರಿನೊಡನೆ ಅರೆದು ತಯಾರಿಸಿದ ಲೇಪವನ್ನು ಕುರು ಅಥವಾ ಮೊಡವೆಯ ಮೇಲೆ ಹಚ್ಚಿದರೆ ಅದು ಬೇಗ ಗುಣವಾಗುತ್ತದೆ.

ಹುಳುಕಡ್ಡಿಯಿಂದಾಗಿ ಅಲ್ಲಲ್ಲಿ ಕೂದಲು ಉದುರಿ ಹೋದಂತೆ ಇದ್ದರೆ ಮೆಣಸಿನಪುಡಿ ಈರುಳ್ಳಿ ಮತ್ತು ಉಪ್ಪನ್ನು ಒಟ್ಟಿಗೆ ಜಜ್ಜಿ ಆ ಭಾಗಕ್ಕೆ ಉಜ್ಜಿದರೆ ಉದುರಿಹೋದ ಕೂದಲು ಮತ್ತೆ ಬೆಳೆಯುತ್ತದೆ.

ಲಾಮಂಚ

(VETIVARIA ZIZNIOIDES)

ಸಂಸ್ಕೃತ	–	ಉಶೀರ	ತಮಿಳು	–	ಇಲಮಿಚಾಮಮ್
ಹಿಂದಿ	–	ಬಾಲಾ, ಖಸೆ	ಮಲೆಯಾಳಂ	–	ವೆಟ್ಟಿವರ್
ತೆಲುಗು	–	ವಿಡಾವಲಿವೇರು	ಇಂಗ್ಲಿಷ್	–	ಖಸ್ ಖಸ್ ಗ್ರಾಸ್



ಈ ದ್ರವ್ಯವು ಭಾರತದ ಎಲ್ಲೆಡೆಯೂ ಸಿಗುತ್ತದೆ. ಬರ್ಮಾದಲ್ಲಿ ಬ್ರಿಜಿಲ್, ವೆಸ್ಟ್ ಇಂಡೀಸ್‌ನಲ್ಲಿ ಕೂಡ ಸಿಗುತ್ತದೆ. (ಉತ್ಪತ್ತಿಯಾಗುತ್ತದೆ).

ಸ್ವರೂಪ : ಇದು ಒಂದು ಹುಲ್ಲಿನ ಜಾತಿಗೆ ಸೇರಿದ ದ್ರವ್ಯ. ಗುಂಪಾಗಿ ಬೆಳೆಯುತ್ತದೆ. ಇದರ ಬೇರು ಗುಂಪಾಗಿ ಮತ್ತು ಸುವಾಸನೆ ಉಳ್ಳದ್ದು ಆಗಿದೆ.

ರಾಸಾಯನಿಕ ಸಂಘಟನೆ : ಇದರ ಬೇರು ಆವಿಯಾಗುವಂತಹ ಎಣ್ಣೆಯನ್ನು, ರೆಸಿನ್, ಕಲರಿಂಗ್ ಮ್ಯಾಟರ್, ಆಮ್ಲ ಸಾಲ್ಟ್ ಆಫ್ ಲೈಮ್, ಕಬ್ಬಿಣದ ಆಕ್ಸೈಡ್ ಅನ್ನು ಹೊಂದಿದೆ.

ಇದರ ರಸವು ಕಹಿ ಮತ್ತು ಸಿಹಿ, ಇದರ ಗುಣ–ಹಗುರ, ರೂಕ್ಷ, ವೀರ್ಯ – ಶೀತ, ವಿಪಾಕ – ಖಾರ.


ಈ ಮೇಲಿನ ಗುಣಗಳಿಂದ ಇದು ಕಫ ಮತ್ತು ಪಿತ್ತ ನಾಶಕವಾಗಿದೆ.

ಇದರ ಉಪಯೋಗಗಳು : ಉರಿ ಕಷ್ಟಮೂತ್ರ, ರಕ್ತಪಿತ್ತ, ಜ್ವರ ಮತ್ತು ವಿಸರ್ಪಗಳಲ್ಲಿ ಉಪಯೋಗಿಸುತ್ತಾರೆ. ವಿಶೇಷವಾಗಿ ಪಿತ್ತ ವ್ಯಾಧಿಯಲ್ಲಿ ಉಪಯೋಗಿಸುತ್ತಾರೆ. ಇದರ ಕಲ್ಪಗಳು ಉಸೀರಾಸವ –೩೦ ಎಂ.ಎಲ್.

ಷಡಂಗ ಪಾನೀಯ – ೩೦ ಎಂ. ಎಲ್.

ಲಜ್ಜಾಲು
(MIMOSA PUDICA)

ಕನ್ನಡ	–	ಮುಟ್ಟಿದರೆ ಮುನಿ
ಹಿಂದಿ	–	ಲಜ್ಜಾಲೂ
ತೆಲುಗು	–	ಮುನುಗುಡ ಮರಮು
ತಮಿಳು	–	ತೊಟ್ಟಲವಾಡಿ
ಮಲೆಯಾಳಂ	–	ತೊಟ್ಟಾವಾಡಿ
ಮರಾಠಿ	–	ಲಾಜರೀ



B—MIMOSA PUDICA Linn.
ಮುಳ್ಳುನಾಚಿಕೆ ಮುನಿ, ನಾಚಿಕೆಗಿಡ

A—M. RUDICAULIS, Lam.

ಗುಣಕರ್ಮಗಳು: ಇದು ಕಹಿ ಹಾಗೂ ಒಗರು ರಸಗಳಿಂದ ಕೂಡಿದ್ದು ಶೀತ ವೀರ್ಯವೂ, ಲಘುವೂ ಆದರೆ ಕಫ ಹರವೂ ಆಗಿದೆ.

ಇದನ್ನು ಮೂಗು ಮುಂತಾದವುಗಳಿಂದ ರಕ್ತಬರುವಿಕೆ, ಭೇದಿ ಹಾಗೂ ಯೋನಿ ರೋಗಗಳಲ್ಲಿ ಉಪಯೋಗಿಸುತ್ತಾರೆ.

ಇದರ ಬೇರಿನ ಕಷಾಯವನ್ನು ಮೂತ್ರದಲ್ಲಿ ಕಲ್ಲಿದ್ದಲ್ಲಿ (ಮೂತ್ರಾಶ್ಮರಿ) ಕೊಡುತ್ತಾರೆ. ನಾಯಿಕೆಮ್ಮಿನಲ್ಲಿ ಇದರ ಬೇರನ್ನು ಜೇನಿನೊಂದಿಗೆ ಸೇವಿಸಬೇಕು. ಮೂಲವ್ಯಾಧಿಯಲ್ಲಿ ಇದನ್ನು ಅರೆದು ಆ ಜಾಗಕ್ಕೆ ಹಚ್ಚಬೇಕು. ಅಂಡವೃದ್ಧಿಯಲ್ಲಿಯೂ ಇದನ್ನು ಕಟ್ಟುತ್ತಾರೆ. ಮಾಸಿಕ ಸ್ರಾವ ಹೆಚ್ಚಾದಾಗ ಅಥವಾ ಯೋನಿಯಲ್ಲಿ ರಕ್ತ ಸ್ರಾವವಾಗುತ್ತಿರುವಾಗ ಇದರ ಎಲೆಯ ಕಷಾಯವನ್ನು ಹೊಟ್ಟೆಗೆ ಸೇವಿಸಬೇಕು.ಹಾಗೂ ಯೋನಿಯನ್ನು ಇದೇ ಕಷಾಯದಿಂದ ತೊಳೆದುಕೊಳ್ಳಬೇಕು. ಮೂಳೆ ವ್ಯಾಧಿಯಲ್ಲಿ ರಕ್ತ ಹೋಗುತ್ತಿದ್ದರೆ ಆಗ ಇದರ ಸ್ವರಸವನ್ನು ಕುಡಿಸಬೇಕು. ಇದರಿಂದ ರಕ್ತಸ್ರಾವ ನಿಲ್ಲುತ್ತದೆ.

ಶತಾವರಿ

ASPARAGUS RACEMOSUS LILLIACEAE

ಕನ್ನಡ	–	ಆಷಾಡಿಬೇರು
ಸಂಸ್ಕೃತ	–	ಶತಾವರಿ, ಶತಮೂಲಿ, ಶತವೀರ್ಯ, ಬಹುಸುರಿತ, ಅತಿರಸ
ಹಿಂದಿ	–	ಸತಾವರ್
ತೆಲುಗು	–	ಚಲ್ಲಾ
ತಮಿಳು	–	ಸಡಾವರೀ
ಮಲೆಯಾಳಂ	–	ಶತಾವಲಿ



ಶತಾವರಿಯನ್ನು ಆಡುವಭಾಷೆಯಲ್ಲಿ ಹಲವು ಮಕ್ಕಳ ತಾಯಿ ಎಂದು ಕರೆಯುತ್ತಾರೆ. ಇದು ಬುಕ್ರಜನನ ಔಷಧಿಯೂ ಆಗಿದೆ. ಚರಕನು ಇದನ್ನು ಬಲ್ಯ, ವಯಸ್ಥಾಪನ, ಮಧುರ ಸ್ಕಂದಗಳಲ್ಲಿ ಅಳವಡಿಸಿಕೊಂಡಿದ್ದಾನೆ. ಸುಕೃತನು ವಿಹಾರಿ ಗಂಧಾದಿ ಗಣದಲ್ಲಿಯೂ, ಕಂಟಕ ಪಂಚ ಮೂಲಗಳಲ್ಲಿಯೂ ಮತ್ತು ಪಿತ್ತ ಸಂಶಮನಗಣ ದಲ್ಲಿಯೂ ಹೆಸರಿಸಿದ್ದಾನೆ.

ಶತಾವರಿಯು ಮುಳ್ಳುಯುಕ್ತವಾದ ಹಸಿರು ವರ್ಣದ ಹಬ್ಬುವ ಲತೆಯಾಗಿದೆ. ಇದು ದಟ್ಟವಾದ ಕಾಡುಗಳಲ್ಲಿ ಕಂಡು ಬರುತ್ತದೆ. ಇದರ ಶಾಖೆಗಳು ತ್ರಿಕೋನಯುಕ್ತ, ಸ್ನಿಗ್ಧ ರೇಖಾನ್ವಿತವಾಗಿರುತ್ತವೆ. ಹೂಗಳು ಒಂದರಿಂದ ಎರಡು ಅಂಗುಲ ಉದ್ದ,

ಗೊಂಚಲಾಗಿ ಅಥವಾ ಒಂಟಿಯಾಗಿಯೇ ಇರುತ್ತವೆ. ಹಣ್ಣುಗಳು ಕೆಂಪು ವರ್ಣದವು ಅದರೊಳಗೆ ೧–೨ ಬೀಜಗಳು ಇರುತ್ತವೆ.

ಗುಣದಲ್ಲಿ ಗುರು, ಸ್ನಿಗ್ಧವಾಗಿಯೂ, ರಸದಲ್ಲಿ ಮಧುರ, ಕಹಿಯಾಗಿಯೂ, ಮಧುರ ವಿಪಾಕ, ಮತ್ತು ವೀರ್ಯದಲ್ಲಿ ಶೀತವಾಗಿಯೂ ಇರುತ್ತದೆ. ಇದು ವಾತ ಪಿತ್ತಶಾಮಕವಾಗಿದೆ.

ಶತಾವರಿಯನ್ನು ಶಿರೋವ್ಯಾಧಿಯಲ್ಲಿಯೂ, ವಿಸ್ಫೋಟ, ಮಸೂರಿಕೆ, ಅಪಸ್ಮಾರ, ಗೃಹಿಣೀ, ಹೃದ್‌ದೌರ್ಬಲ್ಯ, ರಾಜಯುಕ್ಷ್ಮ, ಕಾಮಲದಲ್ಲಿ ಉಪಯೋಗಿಸಬಹುದು. ಸ್ತನ್ಯವರ್ಧನಾರ್ಥ ಶತಾವರಿಯು ಅತ್ಯಂತ ಶ್ರೇಷ್ಠ ಔಷಧಿಯಾಗಿದೆ.

ಶತಾವರಿಯ ಸ್ವರಸವನ್ನು ೧೦ ಎಂ. ಎಲ್ ಕ್ವಾಥದಲ್ಲಿ ೩೦ ಎಂ.ಎಲ್. ಉಪಯೋಗಿಸಬೇಕು.

ವಿಶಿಷ್ಠ ಯೋಗಗಳು : ಶತಾವರಿ ಘೃತ ಫಲಘೃತ, ನಾರಾಯಣ ತೈಲ, ವಿಷ್ಣು ತೈಲ, ಶತಮೂಲ್ಯಾದಿ ಲೋಹ ಮತ್ತು ಶತಾವರಿ ಪಾನಕ ಇತ್ಯಾದಿ.

ಶುಂಠಿ

(GINGIBER OFFICINALIS)

ಸಂಸ್ಕೃತ	–	ಆರ್ದ್ರಕ ಮತ್ತು ನಾಗರ
ಹಿಂದಿ	–	ಸೋಂಠ್ ಮತ್ತು ಆದ್ರಕ್
ತೆಲುಗು	–	ಶೊಂಠಿ
ತಮಿಳು	–	ಶುಕು
ಮಲೆಯಾಳಂ	–	ಚುಕ್ಕ
ಗುಜರಾತಿ	–	ಅಧು
ಇಂಗ್ಲಿಷ್	–	ಜಿಂಜರ್



ಈ ಗಿಡಮೂಲಿಕೆಯು ಭಾರತದ ಎಲ್ಲಾ ಜಾಗಗಳಲ್ಲಿ ಬೆಳೆಯುತ್ತದೆ. ಮುಖ್ಯವಾಗಿ ನೀರಿರುವಲ್ಲಿ ಬಹಳ ಕಾಣಬಹುದು. ಔಷಧಿಯಾಗಿ ಇದರ ಬೇರನ್ನು ಉಪಯೋಗಿಸುವುದು ಸಾಮಾನ್ಯ ಇದನ್ನು ಎರಡು ವಿಧವಾಗಿ ಉಪಯೋಗಿಸಬಹುದು.

ಅ. ಹಸಿಯಾಗಿ –ರಸ ಮತ್ತು ಕಷಾಯ ರೂಪದಲ್ಲಿ

ಆ. ಮೇಲಿನ ಹೊಟ್ಟು ತೆಗೆದು, ಸೂರ್ಯನ ಬೆಳಕಿನಲ್ಲಿ ಒಣಗಿಸಿ ಚೂರ್ಣ ಮತ್ತು ಕಷಾಯ ರೂಪದಲ್ಲಿ.

ರಾಸಾಯನಿಕ ಸಂಘಟನೆ: ಇದರ ಅನುಚಿತವಾದ ಗುಣಯುಕ್ತ ಸುವಾಸನೆಯು ಇದರಲ್ಲಿರುವ "ಅರೋಮಾಟಿಕ್ ಒಲಟೈಲ್" ತೈಲದಿಂದ ಪಡೆದಿರುತ್ತದೆ. ಈ ತೈಲದಲ್ಲಿ ಕಾಂಫೀನ್, ಫೆಲ್ಲಾಂಡ್ರೀಸ್, ಜಿಂಜಿಬೇರಿನ್, ಸಿನಿಯಾಲ್ ಮತ್ತು ಬೋರ್‌ನಿಯಾಲ್ ಎಂಬ ಅಂಶಗಳು ಇರುತ್ತವೆ.

ಗುಣಗಳು : ಇದರ ರಸ ಖಾರವಾಗಿರುವುದು.. ಇದರ ಬೇರೆ ಗುಣಗಳು ತೀಕ್ಷ್ಣತೆ ಮತ್ತು ಉಷ್ಣತೆ. ಇದರಿಂದಾಗಿ ಇದು ಆಹಾರವನ್ನು ಜೀರ್ಣ ಮಾಡಿಕೊಳ್ಳುವುದಕ್ಕೆ ಪ್ರಯೋಜನಕಾರಿಯಾಗಿದೆ. ಹಸಿವು ಮತ್ತು ನಾಲಗೆರುಚಿನ್ನು ಹೆಚ್ಚಿಸುವುದು. ದೇಹದಲ್ಲಿರುವ ಕಫವನ್ನು ಹೊರಗೆ ಹಾಕುತ್ತದೆ.

ಉಪಯೋಗಗಳು : ಅರ್ಧದಿಂದ ಒಂದು ಚಮಚ ಶುಂಠಿ ರಸವನ್ನು ಸಮ ಪ್ರಮಾಣ ಜೇನು ತುಪ್ಪದೊಟ್ಟಿಗೆ ಸೇವಿಸುವುದರಿಂದ ಕೆಮ್ಮು, ದಮ್ಮು ಮುಂತಾದ ಕಫ ರೋಗಗಳನ್ನು ನಿವಾರಿಸಬಹುದು.

ಶುಂಠಿ ರಸ, ನಿಂಬೇ ಹಣ್ಣಿನ ರಸ, ಸೈಂಧವ ಲವಣ ಸಮ ಪ್ರಮಾಣದಲ್ಲಿ ಊಟಕ್ಕೆ ಮುನ್ನ ಸೇವಿಸುವುದರಿಂದ ಹಸಿವು ಮತ್ತು ರುಚಿಯನ್ನು ಹೆಚ್ಚು ಮಾಡುತ್ತದೆ.

ಹುಳಿತೇಗು ನಿವಾರಿಸಲು ೬ ಚಮಚದಷ್ಟು ಶುಂಠಿ ರಸವನ್ನು ೧ ಲೋಟ ಹಾಲಿಗೆ ಸೇರಿಸಿ ಕುದಿಸಿ ಅರ್ಧ ಪ್ರಮಾಣಕ್ಕೆ ಇಳಿಸುವುದು, ರುಚಿಗೆ ಬೇಕಾದಷ್ಟು ಕಲ್ಲು ಸಕ್ಕರೆಯೊಂದಿಗೆ ಮಲಗುವ ಮುನ್ನ ಸೇವಿಸುವುದು.

ಶುಂಠಿ ರಸವನ್ನು ಹಸಿ ಗಾಯಕ್ಕೆ ಹಚ್ಚುವುದರಿಂದ ಬಹಳ ಬೇಗ ಗಾಯವು ಒಣಗುವುದು. ಹೊಟ್ಟೆ ಉಬ್ಬರ, ವಾಂತಿ, ಅಜೀರ್ಣ, ಹೊಟ್ಟೆ ನೋವು, ಚರ್ಮ ರೋಗ ಇತ್ಯಾದಿ ಕಾಯಿಲೆಗಳಿಗೆ ಒಣ ಶುಂಠಿ ಪುಡಿಯನ್ನು ೧ ಚಮಚದಷ್ಟು ಮೇಲಿಂದ ಮೇಲೆ ಬಿಸಿ ನೀರನೊಟ್ಟಿಗೆ ಸೇವಿಸುವುದು, ಪರಿಣಾಮಕಾರಿಯಾಗಿದೆ.


ಯೋಗಗಳು: ತ್ರಿಕಟು ಚೂರ್ಣ, ಸೌಭಾಗ್ಯಶುಂಠಿಲೇಹ್ಯ–ಹಸಿವು, ಜೀರ್ಣಶಕ್ತಿ, ರುಚಿ ಹೆಚ್ಚಿಸಲು.

ಷಡಂಗ ಪಾನೀಯ ಬಹಳ ಕಾಲದಿಂದ ಇರುವ ಜ್ವರ ನಿವಾರಿಸಲು ಸೈಂಧ್ಯವಾದ್ಯ ತೈಲ ಇದನ್ನು ಲೇಪಿಸುವುದರಿಂದ ಸಂಧು ನೋವುಗಳನ್ನು ನಿವಾರಿಸಬಹುದು. ಆರ್ದ್ರಕ ಸತ್ವ, ಆರ್ದ್ರಕ ಕಾಂಡ, ಪಂಚಕೋಲ–ಜ್ವರದ ತೀಕ್ಷ್ಣತೆ ತಗ್ಗಿಸಲು ರಾಸ್ನಾದಿ ಕಾಥ – ಸಂಧು ನೋವುಗಳನ್ನು ನಿವಾರಿಸಲು.

ಶೋಭಾಂಜನ

(MORINGAOLEIFRA)

ಸಂಸ್ಕೃತ	– ಶಿಗ್ರು, ಅಕ್ಷೀವ, ಮೋಚಕ	ತಮಿಳು	– ಮುರುಂಗಾಯಿ
ಹಿಂದಿ	– ಸಹಿಂಜರ	ಮಲೆಯಾಳಂ	– ರಾಮುಂಹಿ
ತೆಲುಗು	– ಮುನಕ್ಕಾಲ	ಕನ್ನಡ	– ನುಗ್ಗೆಮರ



MORINGA PTERYGOSPERMA, GAERTN. ನುಗ್ಗೆ

ನುಗ್ಗೆಮರ ಎಲ್ಲೆಡೆಗಳಲ್ಲಿಯೂ ಸಾಮಾನ್ಯವಾಗಿ ಬೆಳೆಯುವ ಒಂದು ಅತಿ ಉಪಯುಕ್ತ ಮರ. ಈ ಮರವು ಸುಮಾರು ೨೦–೩೦ ಅಡಿ ಎತ್ತರ ಬೆಳೆಯುತ್ತದೆ. ಇದು ಬೇಗ ಬೆಳೆಯುವ ಮರ. ಬಹಳ ಕಾಲ ನಿಲ್ಲದು. ತೊಗಟೆಯೂ ಮೃದು, ಬೂದು, ಇದರ ಎಲೆಗಳು ತೆಳುವಾಗಿ ಜೋಡಣೆಯಾಗಿರುವುದರಿಂದ ಈ ಮರ ನೆರಳು ಕಟ್ಟುವುದಿಲ್ಲ. ಇದರ ಹೂವು ಜನವರಿಯಿಂದ ಏಪ್ರಿಲ್ ತಿಂಗಳವರೆಗೆ ಕಾಣ ಸಿಗುತ್ತದೆ. ಇದರ ಎಲೆ ಚಿಗುರು ಹೂವು ಕಾಯಿಗಳೆಲ್ಲ ತರಕಾರಿ ಆದುದರಿಂದ ಇದನ್ನು ತರಕಾರಿ ಮರವೆನ್ನಬಹುದು. ತರಕಾರಿಯಾಗಿ ಅಲ್ಲದೆ ಇದರ ಕಾಯಿಯನ್ನು ಉಪ್ಪಿನಕಾಯಿ ಹಾಕಬಹುದು. ಇದರ ಖಾರವಾದ ಬೇರನ್ನು ಯೂರೋಪಿನವರು ಸಾಸಿವೆ ಬದಲಿಗೆ ಉಪಯೋಗಿಸುತ್ತಾರೆ. ಇದರ ಚಿಗುರು ಮತ್ತು ಎಲೆಗಳು ದನದ ಮೇವು ಕೂಡ. ತೊಗಟೆಯಿಂದ ನಾರು ತೆಗೆದು ಹಗ್ಗ ಹೊಸೆಯುತ್ತಾರೆ.

ಇದು ಗುಣದಲ್ಲಿ ಲಘು, ರೂಕ್ಷ, ತೀಕ್ಷ್ಣವಾಗಿದೆ. ಖಾರ ಮತ್ತು ಆಮ್ಲ ರಸಗಳನ್ನು ಒಳಗೊಂಡಿದೆ. ವೀರ್ಯದಲ್ಲಿ ಉಷ್ಣವಾಗಿರುತ್ತದೆ. ಮತ್ತು ಪಚನಾನಂತರ ಪಾಕದಲ್ಲಿ ಮಧುರವಾಗಿದೆ. ಇದು ಕಫ ಮತ್ತು ವಾತ ದೋಷಗಳನ್ನು ಶಮನ ಮಾಡುತ್ತದೆ.

ನುಗ್ಗೆ ಮರವು ಬಹುರೂಪದಲ್ಲಿ ಔಷಧಿಗೂ ಬರುವುದು. ತಲೆ ಸುತ್ತು ಇರುವಾಗ ನುಗ್ಗೆ ಸೊಪ್ಪನ್ನು ಪಚ್ಚೆ ಹಸರಿನ ಜೊತೆ ಬೇಯಿಸಿ ತಿಂದರೆ ತಲೆ ಸುತ್ತುವಿಕೆ ಕಡಿಮೆಯಾಗುತ್ತದೆ. ಕಾಮಾಲೆ ರೋಗದವರು ಊಟದ ಜೊತೆ ಪಲ್ಯ ಸಲುವಾಗಿ ಸಿಪ್ಪೆ, ನುಗ್ಗೆ ಸೊಪ್ಪಿನ ಪಲ್ಯವನ್ನು ಉಪಯೋಗಿಸಬಹುದು.

ಬಾಣಂತಿಯರಿಗೆ ನುಗ್ಗೆ ತೊಗಟೆಯನ್ನು ಬೆಳ್ಳುಳ್ಳಿ ಸಾಸಿವೆಯ ಜೊತೆ ಒಟ್ಟುಗೂಡಿಸಿ ಚೆನ್ನಾಗಿ ಜಜ್ಜಿ ಕಾಲಿನ ಹೆಬ್ಬೆರಳಿಗೆ ಮೆತ್ತಿ ಬಟ್ಟೆಯಿಂದ ಸುತ್ತಿ ಕಟ್ಟಿದರೆ ನಂಜು ದೇಹಕ್ಕೆ ಸೇರದಂತೆ ಕಾಪಾಡುತ್ತದೆ.

ಉಷ್ಣ ಸಂಬಂಧ ರೋಗಕ್ಕೆ ನುಗ್ಗೆ ಅಂಟನ್ನು ಉಪಯೋಗಿಸಬಹುದು. ಸುರಕ್ಷಿತವಾಗಿ ಪ್ರಸವಕ್ಕೆ ನುಗ್ಗೆಯು ಉಪಯುಕ್ತ. ಇರುಳುಕಣ್ಣು ಇರುವವರು ಎರಡು ಹಿಡಿ ನುಗ್ಗೆ ಸೊಪ್ಪಿನ ಜೊತೆ ಸ್ವಲ್ಪ ಬೇಳೆ ಒಂದು ಕ್ಯಾರೆಟ್ಟು, ಸ್ವಲ್ಪ ರಾಗಿ, ಒಂದು ಚೂರು ಬೆಲ್ಲ ಹಾಕಿ ಚೆನ್ನಾಗಿ ಬೇಯಿಸಿ ತೆಗೆದುಕೊಳ್ಳಬೇಕು. ಈ ಚಿಕಿತ್ಸೆಯನ್ನು ಹದಿನೈದು ದಿನ ಬಿಡದೆ ಮಾಡಬೇಕಾಗುತ್ತದೆ.

ಮೂಲವ್ಯಾಧಿಯವರಿಗೆ ಒಂದು ಹಿಡಿ ನುಗ್ಗೆ ಸೊಪ್ಪನ್ನು ಒಂದು ಚಮಚ ಎಕ್ಕದ ಹಾಲಿನ ಜೊತೆ ಚೆನ್ನಾಗಿ ಅರೆದು ಜೇನುತುಪ್ಪ ಬೆರಸಿ ರಾತ್ರಿ ಹೊತ್ತು ಹಚ್ಚುತ್ತಾ ಬಂದರೆ ಮೂಲವ್ಯಾಧಿ ಮೊಳಕೆ ನಶಿಸಿ ಹೋಗುತ್ತದೆ.

ನುಗ್ಗೆಯಲ್ಲಿ ವಿಟಮಿನ್ 'ಎ' ಅಂಶ ತುಂಬಾ ಇರುವುದರಿಂದ ಗರ್ಭಿಣಿ ಹೆಂಗಸರು ನಿಶ್ಶಕ್ತಿ ಇರುವವರು ಹೆಚ್ಚಾಗಿ ಸೇವಿಸಿದರೆ ಒಳ್ಳೆಯದು. ಕಿವಿ ಸೋರುವುದಕ್ಕೆ ಹೂವಿನ ರಸವನ್ನು ಉಪಯೋಗಿಸುವರು.

ಸುದಾಬ

(RUTA GRAVEOLENS)

ಕನ್ನಡ	–	ನಾಗದಾಳಿ
ಸಂಸ್ಕೃತ	–	ಸುದಾಬ
ಹಿಂದಿ	–	ಸಿತಾಬ
ತೆಲುಗು	–	ಸದಪಕ
ತಮಿಳು	–	ಅರ್ವದ
ಮಲೆಯಾಳಂ	–	ಅರುತ



TA GRAVEOLENS, Linn.
ಸುದಾಬು, ಶಿಜಾಬು

ಇದನ್ನು ತೋಟಗಳಲ್ಲಿ ಬೆಳೆಸುವಂತಹ ಸಾಮಾನ್ಯಗಿಡ. ಇದರ ತೀಕ್ಷ್ಣವಾದ ವಾಸನೆಗೆ ಹಾವುಗಳು ಹತ್ತಿರ ಎಲ್ಲೂ ಓಡಾಡುವುದಿಲ್ಲ ಇದು ಪೂರ್ವಿಕರ ಅನುಭವ.

ಇದರ ರಸ ಕಹಿ, ವೀರ್ಯ ಉಷ್ಣ, ಬೇರೆ ಗುಣಗಲು ಲಘು ಮತ್ತು ತೀಕ್ಷ್ಣತೆ.

ರಾಸಾಯನಿಕ ಸಂಘಟನೆ : ಇದರ ತೀಕ್ಷ್ಣವಾದ ವಾಸನೆಯು ಇದರಲ್ಲಿರುವ "ಮಿಥೈಲ್ ನೋನೈಲ್ ಕೀಟೋನ್'' ಎಂಬ ಅಂಶದಿಂದ ಬರುತ್ತದೆ.

ಉಪಯುಕ್ತವಾದ ಅಂಗವು ಎಲೆ ಹೆಚ್ಚಾಗಿ ಔಷಧಿಯಾಗಿ ಇದರ ರಸ ಬಳಕೆಯಲ್ಲಿದೆ.

ಉಪಯೋಗಗಳು : ಇದರ ರಸ ಹೊಟ್ಟೆ ಉಬ್ಬರವನ್ನು ನಿವಾರಿಸುತ್ತದೆ.

ಇದರ ರಸ, ಸಮ ಪ್ರಮಾಣ ತುಳಸೀ ರಸ ಜೇನುತುಪ್ಪದೊಡನೆ ಮುಂಜಾನೆ ಸೇವಿಸಿದ್ದಲ್ಲಿ ಕೆಮ್ಮು ಮತ್ತು ದಮ್ಮನ್ನು ನಿವಾರಿಸುತ್ತದೆ.

ಹೊಟ್ಟೆಯಲ್ಲಿರುವ ಜಂತು ಹುಳ ಮುಂತಾದ ಕ್ರಿಮಿಗಳನ್ನು ಈ ರಸದಿಂದ ಹೋಗಲಾಡಿಸಬಹುದು.

ಎಲೆಯನ್ನು ಜಜ್ಜಿ ಹೆಂಡದೊಡನೆ ಲೇಪಿಸಿದರೆ, ಪ್ರಾರಂಭದಲ್ಲಿರುವ ಲಕ್ವ ರೋಗವನ್ನು ಸ್ವಲ್ಪ ಮಟ್ಟಿಗೆ ತಡೆಯಬಹುದು.

ಒಣಗಿದ ಎಲೆಯನ್ನು ಸೇವಿಸುವಲ್ಲಿ ರುಚಿಯನ್ನು ಹೆಚ್ಚಿಸುವುದು.


ಇದರ ರಸವನ್ನು ಜೇನುತುಪ್ಪದೊಟ್ಟಿಗೆ ಮೇಲಿಂದ ಮೇಲೆ ಸೇವಿಸುವುದರಿಂದ ಜ್ವರವನ್ನು ನಿವಾರಿಸಬಹುದು.

ಇದನ್ನು "ಟೀ'' ರೂಪದಲ್ಲಿ ಸೇವಿಸಿದರೆ, ದೇಹದಲ್ಲಿರುವ ಅಧಿಕ ಕಫವನ್ನು ಹೊರಗೆ ಹಾಕಿ, ಕಫದಿಂದ ಉಂಟಾಗುವ ಕೆಮ್ಮು, ತುರಿಕೆ ಮುಂತಾದ ರೋಗಗಳನ್ನು ತಡೆಗಟ್ಟಬಹುದು.

ಹಾಗಲ ಕಾಯಿ

(MOMORDICA CHARANTIA)

ಹಿಂದಿ	–	ಕರೇಲ	ಬೆಂಗಾಲಿ	–	ಬರಮಾಸಿಗ
ತೆಲುಗು	–	ಕಕರ	ಗುಜರಾತಿ	–	ಕರೇಲೋ
ತಮಿಳು	–	ಪಾವಕ್ಕಾಯಿ	ಮರಾಠಿ	–	ಕರಲೆ
ಮಲೆಯಾಳಂ	–	ಕೈಪ್ಪ	ಪಂಜಾಬಿ	–	ಕರೇಲ
ಇಂಗ್ಲಿಷ್	–	ಬಿಟ್ಟರ್ ಗಾರ್ಡ್			



.HARANTIA, Linn.

ಉತ್ಪತ್ತಿ ಸ್ಥಾನ : ಈ ಸಸ್ಯವನ್ನು ಸಿಂಧ್, ಗುಜರಾತ್, ಇಂಡಿಯಾದ ಬಹುತೇಕ ಕಡೆಗಳಲ್ಲಿ ಹಾಗೂ ಅಮೆರಿಕಾ, ಆಸ್ಟ್ರೇಲಿಯಾ, ಆಫ್ರಿಕಾ ಮತ್ತು ಪಶ್ಚಿಮ ಏಷ್ಯಾ ದೇಶಗಳಲ್ಲಿ ಮುಖ್ಯವಾಗಿ ಬೆಳೆಯುತ್ತಾರೆ.

ಸ್ವರೂಪ : ಇದೊಂದು ವರ್ಷಾವಧಿ ಸಸ್ಯ. ಇದರ ಕಾಂಡವು ಅನೇಕ ಕವಲುಗಳಾಗಿರುತ್ತದೆ. ಮತ್ತು ಅದರ ಮೇಲೆ ಸಣ್ಣ ಸಣ್ಣ ಕೂದಲುಗಳಿರುತ್ತವೆ. ಇದೊಂದು ಬಳ್ಳಿ. ಇದು ತಂತುಗಳ ಸಹಾಯದಿಂದ ಬೆಳೆಯುತ್ತದೆ. ಎಲೆಯ ತುದಿಯು ಬಹಳ ಕವಲಾಗಿರುತ್ತದೆ. ಐದರಿಂದ ಏಳು ಭಾಗಗಳಿರುತ್ತವೆ. ಹೂವು ಹಳದಿ ಬಣ್ಣವಾಗಿರುತ್ತವೆ. ಇದರ ಹಣ್ಣು ಹಳದಿ–ಕೇಸರಿ ಬಣ್ಣ, ಸಣ್ಣ ಸಣ್ಣ

ಗಂಟುಗಳಿರುತ್ತವೆ. ಮೊಸಳೆಯ ಬೆನ್ನಿನಂತಿರುತ್ತದೆ. ಬೀಜಗಳು ೮–೧೩ಮಿಮಿ ಉದ್ದವಾಗಿ ಚಪ್ಪಟೆಯಾಗಿರುತ್ತದೆ.

ರಾಸಾಯನಿಕ ಸಂಘಟನೆ : ಇದರಲ್ಲಿ ಕಹಿ, ಗ್ಲೂಕೋಸ್ ಇದು ನೀರಿನಲ್ಲಿ ಕರಗುತ್ತದೆ. ಮತ್ತು ಹಳದಿ ಆಮ್ಲ ತತ್ತ್ವ, ಗೋಂದು ಮತ್ತು ಬೂದಿ ಇದೆ.

ಉಪಯುಕ್ತ ಅಂಗಗಳು : ಹಣ್ಣಿನ ರಸ, ಕಾಂಡ, ಎಲೆ ಮತ್ತು ಬೀಜ.

ರಸ : ಕಹಿ, ವೀರ್ಯ : ಉಷ್ಣ, ವಿಪಾಕ: ಖಾರ, ಗುಣ : ಲಘು, ರೂಕ್ಷ

ದೋಷಘ್ನ ಕರ್ಮ : ಕಫಹರ, ತ್ರಿದೋಷಹರ.

ಕರ್ಮ : ರುಚಿಯನ್ನುಂಟು ಮಾಡುತ್ತದೆ. ಅಗ್ನಿವೃದ್ಧಿಕರ, ಮಲವನ್ನು ಭೇದಿಸುತ್ತದೆ ಹಾಗೂ ಉತ್ತಮ ಕ್ರಿಮಿಹರ.

ಉಪಯೋಗ: ಇದನ್ನು ಮುಖ್ಯವಾಗಿ ಪಿತ್ತವಿಕಾರಗಳಲ್ಲಿ, ರಕ್ತಹೀನತೆ, ಗಾಯಗಳು ದಮ್ಮು ಉಬ್ಬಸ ರೋಗದಲ್ಲಿ ಕೆಮ್ಮು ಮತ್ತು ಮೂತ್ರ ಶರ್ಕರಾ, ಚರ್ಮ ರೋಗ ಜ್ವರದಲ್ಲಿ ಉಪಯುಕ್ತವಾದದ್ದು.

ಯೋಗ : ಫಲಸ್ವರ, ಬೇರಿನ ಸೂಕ್ಷ್ಮ ಚೂರ್ಣ ಮತ್ತು ಕಷಾಯ ಔಷಧಿ
ಪ್ರಮಾಣ : ಕಷಾಯ ೫೦ ಎಂ.ಎಲ್

ಚೂರ್ಣ: ೫೦ ಎಂ.ಜಿ. ೨೫೦ ಎಂ.ಜಿ – ೫೦೦ ಎಂ.ಜಿ.


ಪ್ರಕಾರ : ೧ ಗ್ರಾಂ, ೨ ವನ್ಯ

ಗಣ ತಿಕ್ತಸ್ಕಂಧ (ಚರಕ)

ಹುಣಸೆ

(TAMARINDUS INDICA)

ಸಂಸ್ಕೃತ	–	ಚಿಂಚಾ
ಹಿಂದಿ	–	ಇಮ್ಲಿ
ತೆಲುಗು	–	ಚಿಂಟಾಪಂಡು
ತಮಿಳು	–	ಪುಲಿಯಾಂ ಪಲಾಂ



ಹುಣಸೆ ಮರವು ೩೦ ರಿಂದ ೩೫ ಅಡಿ ಎತ್ತರ ಬೆಳೆಯುವುದು. ಇದರ ಪತ್ರಗಳು ಚಿಕ್ಕದಾಗಿದ್ದು, ೧೦ ರಿಂದ ೧೨ ರಷ್ಟು ಇರುವುದು. ಇದರ ಪತ್ರವು ಸಂಯುಕ್ತ ಪತ್ರವಾಗಿದೆ. ಇದರ ಹಣ್ಣು ೧–೨ ಅಂಗುಲದಷ್ಟು ಉದ್ದವಾಗಿದೆ. ಒಳಗಿನ ಹುಣ್ಣಿನ ತಿರುಳು, ಪ್ರಯೋಜ್ಯ ಅಂಗವಾಗಿದೆ. ಇದರಲ್ಲಿ ಕಂದುಬಣ್ಣ ೫–೬ ಬೀಜಗಳಿರುವುದು. ಇದನ್ನು ಬಳಸಲಾಗುತ್ತದೆ.

ಇದು ಭಾರತದ ಎಲ್ಲಾ ಭಾಗಗಳಲ್ಲೂ ಅದರಲ್ಲೂ ಮುಖ್ಯವಾಗಿ,ದಕ್ಷಿಣ ಭಾರತ, ಚೀನಾದಲ್ಲಿ ಕಂಡು ಬರುವುದು.

ರಾಸಾಯನಿಕವಾಗಿ ಇದರ ಹಣ್ಣಿನಲ್ಲಿ ಶೇಕಡಾ ೫ ರಷ್ಟು ಟಾರ್ಟರಿಕ್ ಆಮ್ಲ, ಶೇಕಡಾ ೪ ರಷ್ಟು ಸಿಟ್ರಿಕ್ ಆಮ್ಲ, ಮಾಲಿಕ್ ಮತ್ತು ಎಸಿಟಿಕ್ ಆಮ್ಲ, ಶೇಕಡಾ ೮ ರಷ್ಟು ಪೊಟ್ಯಾಸಿಯಂ ಟಾರ್ಟರಿಕ್ ಶೇಕಡಾ ೨೫–೪೦ ರಷ್ಟು ಶರ್ಕರಾ, ಅಂಟು ಮತ್ತು ಡೆಕಟಿನ್ ಇದರ ಬೀಜದಲ್ಲಿ ಟ್ಯಾನಿಕ್ ಕೊಬ್ಬು, ಅಲ್ಬ್ಯುಮಿನೋಯ್ಡ್ಸ್, ಕಾರ್ಬೋಹೈಡ್ರೇಟ್, ಶೇಕಡಾ. ೬೩.೨೨ರಷ್ಟು ನಾರು ಮತ್ತು ಸಸಾರಜನಕ ಮತ್ತು ರಂಜಕದ ಭಸ್ಮವಿದೆ.

ಇದು ರಸದಲ್ಲಿ ಹುಳಿಯಾಗಿಯೂ, ಗುಣದಲ್ಲಿ ಗುರು, ರೂಕ್ಷವಾಗಿದೆ. ಇದು ಕಫವಾತ ಶಾಮಕವಾಗಿದೆ.

ಇದನ್ನು ಅರುಚಿ,ಅಗ್ನಿಮಾಂಧ್ಯ, ಉದರಶೂಲೆ, ಗುಲ್ಮ, ಮಲಬದ್ಧತೆಯಲ್ಲಿ, ಬಳಸುವರು. ಇದರ ಪಾನಕವನ್ನು ಮಕ್ಕಳಲ್ಲಿ ಜ್ವರಬಂದಾಗ, ಬಿಸಿಲು ಬೇಗೆಯಲ್ಲಿ ಬಳಸುವರು. ಇದರ ಹಣ್ಣಿನ ತಿರುಳನ್ನು ಊತದಲ್ಲಿ ಬಾಹ್ಯ ಲೇಪವಾಗಿ ಬಳಸುತ್ತಾರೆ. ಹುಣಸೆ ಬೀಜದ ಹುಡಿಯನ್ನು ಅತಿಸಾರ, ಇದರ ಎಲೆಯ ರಸವನ್ನು ಜ್ವರದಲ್ಲಿಯೂ ಬಳಸುವರು. ಇದರ ಪತ್ರ ಸ್ವರಸವನ್ನು ಮೂಲವ್ಯಾಧಿಯಲ್ಲಿಬಳಸುತ್ತಾರೆ. ಇದರ ಬೀಜದ ಭಸ್ಮವನ್ನು ನೀರಿನೊಂದಿಗೆ ಬೆರೆಸಿ, ಗಂಟಲು ನೋವಿನಲಿ ಬಳಸುತ್ತಾರೆ.

ಬಲಾ

(SIDA CORDIFOLIA)

ಕನ್ನಡ	–	ಕಲ್ಲಂಗಡಲೆ	ತಮಿಳು	–	ಪಣಿಯಾರ್‌ತುತ್ತಿ
ಹಿಂದಿ	–	ಬರಿಯಾರ್	ಬೆಂಗಾಲಿ	–	ಬಿಡೇಲ
ಇಂಗ್ಲಿಷ್	–	ಕಂಟ್ರಿ ಮಾಲ್ರೋ	ಗುಜರಾತಿ	–	ಬಲಾ

ಉತ್ಪತ್ತಿ ಸ್ಥಾನ : ಮುಖ್ಯವಾಗಿ ಸುಮಶೀತೋಷ್ಣ ವಲಯದಲ್ಲಿ ಬೆಳೆಯುತ್ತದೆ.

ಸ್ವರೂಪ : ಇದು ಗುಲ್ಮಾಕಾರದ ಸಸ್ಯ. ಕಾಂಡದ ಮೇಲೆ ಬಹಳ ಸಣ್ಣ ಕೂದಲಿರುತ್ತದೆ. ಎಲೆಗಳು ೨.೫–೫ ಸೆ. ಮೀ ಉದ್ದ ಮತ್ತು ತೊಟ್ಟು ಉದ್ದವಾಗಿರುತ್ತದೆ. ಹೂವು ಹಳದಿ ಬಣ್ಣವಾಗಿರುತ್ತದೆ. ಹಣ್ಣು–೬ ರಿಂದ ೮ ಎಂ. ಎಂ. ವ್ಯಾಸ ಗುಂಡಾಗಿರುತ್ತದೆ.

ರಾಸಾಯನಿಕ ಸಂಘಟನೆ : ಇದರಲ್ಲಿ ಕ್ಷಾರಾಂಶವು ೦.೦೮೫ ಶೇಕಡಾ ಇದೆ. ಕ್ಷಾರಾಂಶವನ್ನು ಎಫಿಡ್ರಿನ್ ಎಂದು ಕರೆಯಲಾಗುತ್ತದೆ ಇದರ ಜೊತೆಗೆ ಇದರಲ್ಲಿ ಗೋಂದು ಆರಬಿಕ ಆಲ್‌ಬ್ಯೂಮನ್ ಇದೆ.

ಇದರ ರಸ ಮಧುರ, ವಿಪಾಕವು ಮಧುರ,ಶೀತವೀರ್ಯವುಳ್ಳದ್ದು.

ಗುರು ಹಾಗೂ ಸ್ನಿಗ್ಧ ಗುಣಗಳಿವೆ.

ದೋಷಘ್ನ : ವಾತ ಮತ್ತು ಪಿತ್ತಶಾಮಕ

ವಿಶಿಷ್ಟ ಯೋಗಗಳು : ಬಲಾರಿಷ್ಟ, ಚಂದನ ಬಲಾದಿಕ್ವಾಥ ಬಲಾದ್ಯಘೃತ, ಚಂದನ ಬಲಾದಿಕ್ವಾಥ ತೈಲ.

ಪ್ರಮಾಣ : ಬಲಾರಿಷ್ಟ ೩೦ ಎಂ. ಎಲ್ ಊಟದ ನಂತರ ನೀರು ಸೇರಿಸಿ ಎರಡು ಸಲ

ಬಲಾದಿಕ್ವಾಥ : ೨೦ ಮಿ.ಲೀ ಬೆಳಗ್ಗೆ – ಸಾಯಂಕಾಲ ಬರಿಹೊಟ್ಟೆಯಲ್ಲಿ

ಬಲಾದ್ಯಘೃತ – ೫೦ ಎಂ. ಎಲ್ ಖಾಲಿ ಹೊಟ್ಟೆಯಲ್ಲಿ (ಬೆಳಗ್ಗೆ)

ಪ್ರಯೋಜ್ಯಾಂಗ – ಬೇರು.

ಇದು – ಮುಖ್ಯವಾಗಿ ದೇಹಕ್ಕೆ ಬಲವನ್ನು ನೀಡುತ್ತದೆ.

ಉಪಯೋಗ – ಬಹಳ ರೀತಿಯ ವಾತ ವಿಕಾರಗಳಲ್ಲಿ ಪಕ್ಷಾಘಾತ, ಏಕಾಂಗವಾತ ಇತ್ಯಾದಿ ನೋವುಗಳನ್ನು ಹೋಗಲಾಡಿ ಸುತ್ತದೆ. ಸಂಧಿಯ ವಿಕಾರಗಳಲ್ಲೂ ಪ್ರಯೋಜಕ.

ಅತಿಬಲಾ

(ABUTILON INDICUM)

ಕನ್ನಡ	–	ಮುದ್ರೇಗಿಡ	ಮಲೆಯಾಳಂ	–	ಅನಕುರುನ್ ತೊಟ್ಟು
ಹಿಂದಿ	–	ಕಂಘೀ	ಬೆಂಗಾಲಿ	–	ಪಿತರೀ
ತೆಲುಗು	–	ತುಟರೀ ಚೆಟ್ಟು	ಮರಾಠಿ	–	ಮುದ್ರಾ
ತಮಿಳು	–	ತಟ್ಟು	ಗುಜರಾತಿ	–	ಖಾಪಟ್

ಉತ್ಪತ್ತಿ ಸ್ಥಾನ: ಇಂಡಿಯಾ ಹಾಗೂ ಶ್ರೀಲಂಕಾದ ಬಹುತೇಕ ಕಡೆಗಳಲ್ಲಿ ಬೆಳೆಯುತ್ತದೆ.

ಸ್ವರೂಪ : ಇದು ವರ್ಷಾವಧಿ ಸಸ್ಯ. ಕಾಂಡವು ಗಟ್ಟಿಯಾಗಿರುತ್ತದೆ. ಕವಲುಗಳಾಗಿರುತ್ತದೆ. ಸುಮಾರು ೧ ಮೀಟರ್ ಎತ್ತರ ಬೆಳೆಯುತ್ತದೆ. ಎಲೆಗಳು ಗುಂಡಾಗಿರುತ್ತದೆ. ಮತ್ತು ತುದಿಯು ಅಸಮವಾಗಿರುತ್ತದೆ. ಹೂವು, ಹಳದಿ – ಕೇಸರಿ ಬಣ್ಣವಿರುತ್ತದೆ.

ರಾಸಾಯನಿಕ ಸಂಘಟನೆ : – ಎಲೆಗಳಲ್ಲಿ ಮ್ಯೂಸಿಲೇಜ್, ಟ್ಯಾನಿನ್ ಆರ್ಗ್ಯಾನಿಕ್ ಆಸಿಡ್ ಆಸ್‌ಪರಾಜಿನ್.

ಪ್ರಯೋಜ್ಯಾಂಗ : – ಮೂಲ ಮತ್ತು ಪತ್ರ ಸ್ವರಸ.

ಇದು ರಸದಲ್ಲಿ ಮಧುರ, ವಿಪಾಕವೂ ಮಧುರ, ಶೀತವೀರ್ಯ, ಗುರುಸ್ನಿಗ್ಧ ಗುಣಗಳನ್ನು ಹೊಂದಿದ ಅದ್ಭುತ ದ್ರವ್ಯ.

ಉಪಯೋಗ: – ಇದರಿಂದ ತಯಾರಿಸಿದ ಬಲಾರಿಷ್ಟವನ್ನು ವಾತರೋಗಗಳಲ್ಲಿ ಒಂದು ಔನ್ಸ್ ಪ್ರಮಾಣದಲ್ಲಿ ಊಟದ ನಂತರ 2 ಭಾರಿ ಸೇವಿಸಬೇಕು. ಮೈಕೈ ನೋವು ನಿವಾರಣೆಗಾಗಿ ಇದರಿಂದಲೇ ತಯಾರಿಸಿದ ಬಲಾತೈಲವನ್ನು ಶರೀರಕ್ಕೆ ಹಚ್ಚಬೇಕು.

ಗಿಡಮೂಲಿಕೆಗಳಿಂದ ತಯಾರಿಸುವ ಕಲ್ಪಗಳು

೧) **ಸ್ವರಸ :** – ಯಂತ್ರದಲ್ಲಿ ಒತ್ತಿ ಹಿಂಡಲು ಬರುವ ಔಷಧಿ ಸಸ್ಯಗಳ ರಸವೇ ಸ್ವರಸವಾಗಿದೆ. ಇಲ್ಲಿ ದೋಷರಹಿತ, ಕೀಟಾಣುರಹಿತ ಹಸಿರುವನಸ್ಪತಿಗಳನ್ನು ಚೆನ್ನಾಗಿ ತೊಳೆದು, ಸಣ್ಣಸಣ್ಣ ತುಂಡುಗಳನ್ನು ಮಾಡಿ, ಖಲ್ವಯಂತ್ರದಲ್ಲಿ ಹಾಕಿ ಕುಟ್ಟಿ ಅಥವಾ ಅರೆದು, ಯಂತ್ರದಲ್ಲಿ ಹಾಕಿ ಅಥವಾ ಕೈಗಳಿಂದ ಹಿಂಡಿ ಸ್ವರಸ ತೆಗೆಯುತ್ತಾರೆ.

ಉದಾ:–ತುಳಸಿ ಸ್ವರಸ, ವಾಸಾ ಸ್ವರಸ

ಮಾತ್ರಾ:– ಅರ್ಧ ಫಲ (೨೦ ಗ್ರಾಂ)

೨) **ಪುಟಪಕ್ವ ರಸ :**– ಕೆಲವೊಮ್ಮೆ ಬೇವು (ನಿಂಬ), ವಾಸಾ, ಬಿಲ್ವ ಮುಂತಾದ ಪತ್ರಗಳ ಸ್ವರಸ ತೆಗೆಯಬೇಕಾಗುವುದು. ಆಗ ಇವುಗಳಿಂದ ಸ್ವರಸ ತೆಗೆಯುವದು ಕಷ್ಟವಾಗುವುದು ಕಾರಣ ಆಚಾರ್ಯರು ಈ ಪುಟಪಕ್ವ ಕಲ್ಪನಾವನ್ನು ಈ ರೀತಿ ವಿವರಿಸಿದ್ದಾರೆ.

ಇದರಲ್ಲಿ ಔಷಧಿ ದ್ರವ್ಯಗಳ ಕಲ್ಕವನ್ನು ತಯಾರಿಸುವರು. ಅಂದರೆ ಆರ್ದ್ರ ದ್ರವ್ಯಗಳಿಂದ ಸುತ್ತಿ ದಾರದಿಂದ ಕಟ್ಟಬೇಕು. ಹಾಗೂ ಇದರ ಮೇಲೆ ಅಂಗುಷ್ಠ ಪ್ರಮಾಣದಲ್ಲಿ ಹಸೀಮಣ್ಣನ್ನು ಮೆತ್ತಬೇಕು ಹಾಗೂ ಬೆಂಕಿಯಲ್ಲಿ ಸುಡಲು ಕೆಂಪಗಾದಾಗ ತೆಗೆದು, ಮಣ್ಣು ಬೇರ್ಪಡಿಸಿ ಸ್ವಚ್ಛ ವಸ್ತ್ರದಲ್ಲಿ ಹಾಕಿ ಹಿಂಡಲು ಪುಟಪಕ್ವರಸ ದೊರೆಯುವದು.

ಉದಾ: ನಿಂಬ, ವಾಸಾ

೩) **ಕಲ್ಕ:** ಖಲ್ವದಲ್ಲಿ ಔಷಧಿ ದ್ರವ್ಯಗಳನ್ನು ಹಾಕಿ ಶಿಲಾಪೇಕ್ಷಣೆಯಿಂದ ಚೆನ್ನಾಗಿ ಅರೆಯಲು ಕಲ್ಕ ಸಿಗುವದು ಹಸಿರಾದ ತಾಜಾ ವನಸ್ಪತಿಗಳನ್ನು ಅಥಾವಾ ಒಣಗಿದ ದ್ರವ್ಯಗಳಿದ್ದಲ್ಲಿ ಸ್ವಲ್ಪ ಜಲ ಸೇರಿಸಿ ಅರೆಯುತ್ತಾರೆ.

ಉದಾ: ನಿಂಬ ಕಲ್ಕ, ಮುರೀಕಲ್ಕ, ರಸೋನ(ಬೆಳ್ಳುಳ್ಳಿ)ಕಲ್ಕ

ಮಾತ್ರ: ಒಂದು ಕರ್ಷ (ಒಂದು ತೊಲ)

೪) **ಚೂರ್ಣ:** ಇದೊಂದು ವಿಧದ ಒಣ ಕಲ್ಕ ಕಲ್ಪನಾ ಆಗಿದೆ. ಅಂದರೆ ಒಣಗಿದ ದ್ರವ್ಯಗಳನ್ನು ಚೆನ್ನಾಗಿ ಮರ್ದಿಸಲು, ಸೂಕ್ಷ್ಮವಾದ ಬಳಿಕ ಸ್ವಚ್ಛ ವಸ್ತ್ರದಿಂದ ಸಾಣಿಸುತ್ತಾರೆ. ಇದಕ್ಕೆ ರಜ ಕ್ಷೋದವೆಂತಲೂ ಕರೆಯುತ್ತಾರೆ.

ಉದಾ : ತ್ರಿಫಳಾ, ತ್ರಿಕಟು, ಹಿಂಗ್ವಷ್ಟಕ

ಮಾತ್ರ : ಒಂದು ಕರ್ಷ (ತೀಕ್ಷ್ಣೌಷಧಿಗಳಿದ್ದರೆ ೧/೪ ತೊಲ)

೫) ಕಷಾಯ : ಔಷಧಿ ದ್ರವ್ಯಗಳನ್ನು ಅಗ್ನಿಯಲ್ಲಿ ಕುದಿಸಿ ಕ್ವಾಥವನ್ನು ತಯಾರಿಸಲಾಗುವದು. ವನಸ್ಪತಿಗಳನ್ನು ಸ್ವಚ್ಛಗೊಳಿಸಿ ಅಥವಾ ಜಲದಿಂದ ತೊಳೆದು ಸ್ವಲ್ಪ ಕುಟ್ಟಿ ಅದರ ೧೬ ಭಾಗ ಜಲ ಸೇರಿದ ಮಂದಾಗ್ನಿಯಲ್ಲಿ ಕುದಿಸಬೇಕು. ಹಾಗೂ ಆಗಾಗ ಸೌಟಿನಿಂದ ತಿರುವುತ್ತಿರಬೇಕು ಹಾಗೂ ಔಷಧಿಗಳ ಸಾರ ಭಾಗ ಜಲದಲ್ಲಿ ಬಂದಾಗ ಅಂದರೆ ಚತುರ್ಥಾಂಶ ಉಳಿದಾಗ ಅಗ್ನಿಯಿಂದ ಕೆಳಗಿಳಿಸಿ ಸೋಸಬೇಕು. ಇದುವೇ ಕಷಾಯವು.

ಉದಾ : ತ್ರಿಫಳಾ ಕಷಾಯ, ಪುನರ್ನವಾದಿ ಕ್ವಾಥ, ರಾಸ್ನಾದಿ ಕಷಾಯ

ಮಾತ್ರ : ನಾಲ್ಕು ತೊಲ (ಒಂದು ಫಲ)

೬) ಹಿಮ : ಶೀತವೀರ್ಯದ ಔಷಧಿ ದ್ರವ್ಯಗಳಿಂದ ಹಾಗೂ ಸುಗಂಧೀ ದ್ರವ್ಯಗಳಿಂದ ಹಿಮವನ್ನು ತಯಾರಿಸುತ್ತಾರೆ. ಔಷಧಿ ದ್ರವ್ಯಗಳನ್ನು ಕುಟ್ಟಿ ಅದರ ಆರು ಭಾಗ ಜಲದಲ್ಲಿ ಸೇರಿಸಿ ರಾತ್ರಿಯಿಡೀ ಇಟ್ಟು ಬೆಳಗ್ಗೆ ಸ್ವಚ್ಛ ವಸ್ತ್ರದಲ್ಲಿ ಸೋಸಿ ಇದನ್ನು ತಯಾರಿಸುತ್ತಾರೆ.

ಉದಾ: ಧಾನ್ಯಕ ಹಿಮ, ನೀಲೋತ್ಪಲಾದಿಹಿಮ, ವಾಸಾಹಿಮ

ಮಾತ್ರಾ: ಒಂದು ಫಲ (೪ ತೊಲ)

೭) ಫಾಂಟ : ಕಟ್ಟಿದ ಔಷಧಿ ದ್ರವ್ಯಗಳ ನಾಲ್ಕು ಭಾಗ ಉಷ್ಣ ಜಲದಲ್ಲಿ ಹಾಕಿ ಏಕತ್ರಗೊಳಿಸಿ ವಸ್ತ್ರಗಾಲಿತ ಮಾಡಲು ಫಾಂಟ ದೊರೆಯುವುದು. ಕುದಿಯುವ ನೀರನ್ನು ಹಾಕಿ ಮೇಲೆ ಮುಚ್ಚಳ ಇಟ್ಟು ಸ್ವಲ್ಪ ಸಮಯ ಬಿಡಲು ಸೌರಭಾಗವು ಜಲದಲ್ಲಿ ಬರುತ್ತದೆ.

ಉದಾ: ಲಘು ಮಧೂರಾದಿ ಫಾಂಟ, ತ್ರಿಫಳಾಫಾಂಟ, ಆಮ್ರಾದಿ ಫಾಂಟ

೮) ಮಂಥ : ಫಾಂಟಾದಲ್ಲಿ ಬಿಸಿನೀರನ್ನು ಬಳಸಿದರೆ ಇಲ್ಲಿ ಶೀತಜಲ ಉಪಯೋಗಿಸುವರು. ಇಲ್ಲಿ ಕಡೆಯುವ್ಪುದು ಒಂದು ವಿಶಿಷ್ಟ ಕ್ರಿಯೆ ಇದರಿಂದ ಔಷಧಿಯ ಸಾರ ಭಾಗವು ದೊರೆಯುವದು.

ಉದಾ : ಖರ್ಜೂರಾದಿ ಮಂಥ

ಮಾತ್ರ : ಒಂದು ಫಲ (೪ ತೊಲ)

ಕನ್ನಡ ಸಾಹಿತ್ಯ ಪರಿಷತ್ತಿನಿಂದ
ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ
ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ ಪುಸ್ತಕಗಳನ್ನು
ಸಹೃದಯರು ಮೆಚ್ಚಿ ಸ್ವೀಕರಿಸಲು ಯೋಗ್ಯವಾಗುವಂತೆ
ಆಕರ್ಷಕ ವಿನ್ಯಾಸಗಳಲ್ಲಿ ಸಿದ್ಧಪಡಿಸಿದ ಮೇಲೆ
ಅವುಗಳ ಮಾರಾಟದ ಪ್ರಮಾಣ ಹೆಚ್ಚುತ್ತಿದೆ.
ಓದುಗರು ಬಯಸುವ ಪುಸ್ತಕಗಳನ್ನು ಅವರ
ಕೈಗೆ ತಲಪುವಂತೆ ಮಾಡುವುದೇ ಪುಸ್ತಕೋದ್ಯಮದ
ಪ್ರಾಥಮಿಕ ಆಶಯ.
ಈ ಉದ್ಯಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ,
ಕಾಲಕಾಲಕ್ಕೆ ಬದಲಾಗುತ್ತಿರುವ ಓದುಗರ ಅಭಿರುಚಿಗೆ
ಸ್ಪಂದಿಸುತ್ತ, ಆ ಕ್ಷೇತ್ರದಲ್ಲಿ ಬಹುವೇಗವಾಗಿ
ಸಾಗುತ್ತಿರುವ ಪ್ರಕಾಶಕರ ನಡುವೆ ಕನ್ನಡ ಅಕ್ಷರ ಸೇವೆ
ಮಾಡುತ್ತಿದ್ದೇವೆಂದು ಭಾವಿಸುವುದರ ಜೊತೆಗೆ
ಹೊಸಕಾಲದ ಅಗತ್ಯಕ್ಕೆ ಅನುಗುಣವಾಗಿ
ಬದಲಾಗುವುದೇ ಜೀವಂತಿಕೆಯ ಲಕ್ಷಣ ಎಂದು
ಕನ್ನಡ ಸಾಹಿತ್ಯ ಪರಿಷತ್ತು ಪರಿಗಣಿಸಿದೆ.

ಪುಂಡಲೀಕ ಹಾಲಂಬಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮ ರೂ. ೪೦/-